ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 18 ಸೋಮವಾರ 2022

ಸಂಪುಟ: 43 | ಸಂಚಿಕೆ: 93 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸಿಂಗಾಪುರ ಓಪನ್ ಬ್ಯಾಡ್ಮಿಂಟನ್ ಫೈನಲ್
ಪಿ.ವಿ.ಸಿಂಧು ಚಾಂಪಿಯನ್



ಸಿಂಗಾಪುರ, ಜು.17– ಚೀನಾದ ಆಟಗಾರ್ತಿ ವಾಂಗ್ ಝಿ ಯಿ ಅವರನ್ನು ಅಂತಿಮ ಸುತ್ತಿನಲ್ಲಿ ಮಣಿಸುವ ಮೂಲಕ ಎರಡು ಬಾರಿ ಒಲಿಂಪಿಕ್ ಪದಕ ಗೆದ್ದಿರುವ ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಸಿಂಗಾಪುರ ಓಪನ್ ಸೂಪರ್ 500 ಮಹಿಳೆಯರ ಸಿಂಗಲ್ಸ್‌ನಲ್ಲಿ ಟ್ರೋಫಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಭಾನುವಾರ ಸಿಂಗಾಪುರದಲ್ಲಿ ಮುಕ್ತಾಯವಾದ ತೀವ್ರ ಪೈಪೋಟಿಯ ಅಂತಿಮ ಪಂದ್ಯದಲ್ಲಿ ಸಿಂಧು ಅವರು ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡು 22 ವರ್ಷದ ವಾಂಗ್ ಝಿ ಯಿ ಅವರನ್ನು 21–9, 11–21, 21–15 ಸೆಟ್‌ಗಳಿಂದ ಮಣಿಸಿದ್ದಾರೆ. ಇದೇ ಜು.28ರಂದು ಬರ್ಮಿಂಗ್‌ಹ್ಯಾಮ್‌ನಲ್ಲಿ ಆರಂಭವಾಗಲಿರುವ ಕಾಮನ್ ವೆಲ್ತ್ ▶ 8ನೇ ಪುಟಕ್ಕೆ

ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು
ಯುಎಇನಲ್ಲಿ ಏಷ್ಯಾ ಕಪ್?

ದುಬೈ,ಜು.17–ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟಿನ ಪರಿಣಾಮ ಲಂಕಾದಲ್ಲಿ ನಿಗದಿಯಾಗಿದ್ದ ಏಷ್ಯಾ ಕಪ್ ಟೂರ್ನಿ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ಗೆ ಶಿಫ್ಟ್ ಆಗುವ ಸಾಧ್ಯತೆ ಹೆಚ್ಚಿದೆ.



ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಶ್ರೀಲಂಕಾದಲ್ಲಿ ಜನಸಾಮಾನ್ಯರು ಮಾತ್ರವಲ್ಲದೇ ಕ್ರಿಕೆಟಿಗರೂ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಭ್ಯಾಸಕ್ಕೆ ತೆರಳಲು ಪೆಟ್ರೋಲ್ ಇಲ್ಲದೆ ಅಭ್ಯಾಸ ಮಾಡಲು ಆಗುತ್ತಿಲ್ಲ ಎಂದು ಇತ್ತೀಚೆಗೆ ಕೆಲ ಕ್ರಿಕೆಟಿಗರು ಅಳಲು ▶ 8ನೇ ಪುಟಕ್ಕೆ

ಇಂದಿನಿಂದ ಮತ್ತಷ್ಟು ದಿನಬಳಕೆ ವಸ್ತುಗಳಿಗೆ
GST ಹೊರೆ

ಮೀನು, ಮಾಂಸ, ಮೊಸರು, ಅಕ್ಕಿ, ಗೋಧಿ ದುಬಾರಿ





ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆದಿದ್ದ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಡಬ್ಬಿ ಅಥವಾ ಪ್ಯಾಕ್ ಮತ್ತು ಲೇಬಲ್ ಮಾಡಿದ ಆಹಾರ ಪದಾರ್ಥಗಳ ಮೇಲೆ ಜಿಎಸ್‌ಟಿ ತೆರಿಗೆ ವಿಧಿಸುವ ಬಗ್ಗೆ ನಿರ್ಧರಿಸಲಾಗಿತ್ತು.

ನವದೆಹಲಿ, ಜು.17–ನಾಳೆಯಿಂದ (ಸೋಮವಾರ) ಮತ್ತಷ್ಟು ದಿನ ಬಳಕೆ ವಸ್ತುಗಳ ಮೇಲೆ ಶೇ.5ರಷ್ಟು ಜಿಎಸ್‌ಟಿ ಹೊರೆ ಬೀಳಲಿದೆ. ಪ್ಯಾಕ್ ಮಾಡಿದ ಮೀನು, ಮಾಂಸ, ಮೊಸರು, ಜೇನು, ಬೆಲ್ಲ, ತರಕಾರಿ, ಅಕ್ಕಿ, ಗೋಧಿ, ಪನ್ನೀರ್, ಲಸ್ಸಿ, ಬಾರ್ಲಿ, ಓಟ್ಸ್, ಒಣ ಸೋಯಾಬೀನ್, ಬಟಾಣಿ ಮುಂತಾದ ಉತ್ಪನ್ನಗಳ ಮೇಲೆ ಶೇ.5ರಷ್ಟು ಜಿಎಸ್‌ಟಿ ಅನ್ವಯವಾಗಲಿದೆ.

ನಿತ್ಯದ ಬಾಡಿಗೆ ಸಾವಿರ ರೂ.ಗಿಂತ ಕಡಿಮೆ ಇರುವ ಹೋಟೆಲ್ ಕೊಠಡಿಗಳಿಗೆ ಇದ್ದ ವಿನಾಯಿತಿ ರದ್ದಾಗಿ, ನಾಳೆಯಿಂದ ಶೇ.12ರಷ್ಟು ಜಿಎಸ್‌ಟಿ ಬೀಳಲಿದೆ. ದಿನಕ್ಕೆ 5 ಸಾವಿರ ರೂ.ಗಿಂತ ಹೆಚ್ಚು ಬಾಡಿಗೆ ವಿಧಿಸುವ ಸಾರ್ವಜನಿಕ ಧಾರ್ಮಿಕ ಕೇಂದ್ರಗಳು, ಮಾಸಿಕ 2500 ರೂ.ಗಿಂತ ಹೆಚ್ಚಿನ ಬಾಡಿಗೆ ಇರುವ ವಾಣಿಜ್ಯ ಮಳಿಗೆಗಳಿಗೂ ಜಿಎಸ್‌ಟಿ ಬೀಳಲಿದೆ. ನಿತ್ಯ 5 ಸಾವಿರ ರೂ.ಗಿಂತ ಹೆಚ್ಚಿನ ಶುಲ್ಕವಿರುವ ಐಸಿಯು ಹೊರತುಪಡಿಸಿದ ಆಸ್ಪತ್ರೆ ಕೊಠಡಿಗಳ ಬಿಲ್ ಜೊತೆ ಶೇ.5ರಷ್ಟು ಜಿಎಸ್‌ಟಿ ಸೇರ್ಪಡೆಯಾಗಲಿದೆ. ಅಂಚೆ ಇಲಾಖೆಯ ಕೆಲವು ಸೇವೆಗಳೂ ಕೂಡ ದುಬಾರಿಯಾಗಲಿದೆ.

ಇಷ್ಟೇ ಅಲ್ಲದೇ ಪ್ರಿಂಟಿಂಗ್, ಡ್ರಾಯಿಂಗ್ ಇಂಕ್, ಚಾಕುಗಳು, ಪೇಪರ್ ಕತ್ತರಿಸುವ ಚಾಕುಗಳು ಮತ್ತು ಪೆನ್ಸಿಲ್ ಶಾರ್ಪನರ್‌ಗಳು, ಎಲ್‌ಇಡಿ ಬಲ್ಬ್‌ಗಳು, ಡ್ರಾಯಿಂಗ್ ಮತ್ತು ಮಾರ್ಕಿಂಗ್ ಉತ್ಪನ್ನಗಳ ಮೇಲಿನ ಜಿಎಸ್‌ಟಿಯನ್ನು ಶೇ.18ಕ್ಕೆ ಹೆಚ್ಚಿಸಲಾಗಿದೆ. ಸೋಲಾರ್ ವಾಟರ್ ಹೀಟರ್‌ಗಳ ಮೇಲೂ ಶೇ.12ರಷ್ಟು ▶ 8ನೇ ಪುಟಕ್ಕೆ

ಇಂದಿನಿಂದ ನಂದಿನಿ ಉತ್ಪನ್ನಗಳ ಬೆಲೆ ಏರಿಕೆ
ಹಾಲಿಗೆ ವಿನಾಯತಿ, ಮೊಸರು, ಲಸ್ಸಿ, ಮಜ್ಜಿಗೆ ದರ ಹೆಚ್ಚಳ

ಮೈಸೂರು, ಜು.17(ಎಂಟಿವೈ)–ಇಂಧನ ಹಾಗೂ ಅಗತ್ಯ ವಸ್ತುಗಳ ಬೆಲೆ ಹೆಚ್ಚಳದಿಂದಾಗಿ ಜನತೆ ತತ್ತರಿಸಿದ್ದು, ಇದೀಗ ನಂದಿನಿ ಮೊಸರು, ಮಜ್ಜಿಗೆ ಸೇರಿದಂತೆ ವಿವಿಧ ಉತ್ಪನ್ನಗಳ ಬೆಲೆ ಹೆಚ್ಚಳ ಮಾಡುವ ಮೂಲಕ ಗ್ರಾಹಕರಿಗೆ ಬರೆ ಎಳೆಯಲಾಗಿದೆ. ಪರಿಷ್ಕೃತ ದರ ಸೋಮವಾರ (ಜು.18)ದಿಂದಲೇ ಜಾರಿಗೆ ಬರುವಂತೆ ಆದೇಶಿಸಿರುವುದು ಸಾರ್ವಜನಿಕ ವಲಯದಲ್ಲಿ ವ್ಯಾಪಕ ಆಕ್ರೋಶಕ್ಕೆ ಎಡೆ ಮಾಡಿಕೊಟ್ಟಿದೆ. ಕಳೆದ ಹಲವು ತಿಂಗಳುಗಳಿಂದ ಗೃಹೋಪಯೋಗಿ ವಸ್ತುಗಳು ▶ 8ನೇ ಪುಟಕ್ಕೆ



ಪರಿಷ್ಕೃತ ದರ ಪಟ್ಟಿ

ನಂದಿನಿ ಉತ್ಪನ್ನಗಳ ಪರಿಷ್ಕೃತ ದರದಂತೆ 200 ಗ್ರಾಂ ಮೊಸರಿಗೆ 12 ರೂ. 500 ಗ್ರಾಂ ಮೊಸರಿಗೆ 24 ರೂ. 1 ಕೆ.ಜಿ. ಮೊಸರಿಗೆ 46 ರೂ. ನೂತನ ದರ ನಿಗದಿ ಮಾಡಲಾಗಿದೆ. ನಂದಿನಿ ಮಸಾಲ ಮಜ್ಜಿಗೆ 200 ಗ್ರಾಂಗೆ 8 ರೂ., ನಂದಿನಿ ಸ್ವೀಟ್ಸ್ ಲಸ್ಸಿಗೆ 200 ಗ್ರಾಂಗೆ 11 ರೂ. ದರ ನಿಗದಿ ಮಾಡಲಾಗಿದೆ.

ಇಂದು ರಾಷ್ಟ್ರಪತಿ ಚುನಾವಣೆ

ನವದೆಹಲಿ, ಜು.17– ನಾಳೆ (ಸೋಮವಾರ) ರಾಷ್ಟ್ರಪತಿ ಚುನಾವಣೆ ನಡೆಯಲಿದೆ. ದೇಶದ ಸುಮಾರು 4,800 ಚುನಾಯಿತ ಜನಪ್ರತಿನಿಧಿಗಳು 15ನೇ ರಾಷ್ಟ್ರಪತಿ ಆಯ್ಕೆ ಮಾಡಲು ಮತದಾನ ಮಾಡಲಿದ್ದಾರೆ. ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ಶೇ.60ರಷ್ಟು ಮತಗಳನ್ನು ಪಡೆದು ವಿರೋಧ ಪಕ್ಷಗಳ ಅಭ್ಯರ್ಥಿ ಯಶವಂತ ಸಿನ್ಹಾ ಅವರನ್ನು ಸೋಲಿಸುವ ಸಾಧ್ಯತೆ ಹೆಚ್ಚಾಗಿದೆ.



ಮುರ್ಮು ಗೆಲುವು ಸಾಧ್ಯತೆ

ಸಂಸತ್ ಭವನ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮತದಾನ ನಡೆಯಲಿದ್ದು, ಬ್ಯಾಲೆಟ್ ಬಾಕ್ಸ್‌ಗಳು ಈಗಾಗಲೇ ಅಲ್ಲಿಗೆ ತಲುಪಿವೆ. ಜುಲೈ 21ರಂದು ಸಂಸತ್ ಭವನದಲ್ಲಿ ಮತ ಎಣಿಕೆ ನಡೆಯಲಿದ್ದು, ಜುಲೈ 25ರಂದು ಮುಂದಿನ ರಾಷ್ಟ್ರಪತಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಪ್ರಾದೇಶಿಕ ಪಕ್ಷಗಳಾದ ಬಿಜು ಜನತಾದಳ, ವೈಎಸ್‌ಆರ್ ಕಾಂಗ್ರೆಸ್, ಬಹುಜನ ಸಮಾಜ ಪಕ್ಷ, ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ, ತೆಲುಗು ದೇಶಂ ಪಕ್ಷ, ಜನತಾದಳ–ಜಾತ್ಯತೀತ, ಶಿರೋಮಣಿ ಅಕಾಲಿದಳ, ಶಿವಸೇನೆ ಮುಂತಾದವುಗಳ ಬೆಂಬಲದೊಂದಿಗೆ ಮುರ್ಮು ಅವರ ಮತ ಹಂಚಿಕೆಯು ಸುಮಾರು ಮೂರನೇ ಎರಡರಷ್ಟು ತಲುಪುವ ಸಾಧ್ಯತೆಯಿದೆ ಮತ್ತು ಅವರು ಬುಡಕಟ್ಟು ಸಮುದಾಯದಿಂದ ಉನ್ನತ ಸಾಂವಿಧಾನಿಕ ಹುದ್ದೆಯನ್ನು ಅಲಂಕರಿಸುತ್ತಿರುವ ಮೊದಲ ಮಹಿಳೆಯಾಗಲಿದ್ದಾರೆ. ಒಟ್ಟು 10,86,431 ಮತಗಳ ಪೈಕಿ ವಿವಿಧ ಪ್ರಾದೇಶಿಕ ಪಕ್ಷಗಳ ಬೆಂಬಲದ ನಂತರ ಎನ್‌ಡಿಎ ಅಭ್ಯರ್ಥಿ ಈಗ 6.67 ಲಕ್ಷಕ್ಕೂ ಹೆಚ್ಚು ಮತಗಳನ್ನು ಹೊಂದಿದ್ದಾರೆ. ಪ್ರಾತಿನಿಧ್ಯ ವ್ಯವಸ್ಥೆಯ ಮೂಲಕ ರಾಷ್ಟ್ರಪತಿ ಆಯ್ಕೆ ನಡೆಯಲಿದ್ದು, ಚುನಾಯಿತ ಸಂಸದರು ಮತ್ತು ರಾಜ್ಯ ಶಾಸಕಾಂಗ ಸಭೆಗಳ ಸದಸ್ಯರು ಮತದಾನ ಮಾಡಲು ಅರ್ಹರಾಗಿದ್ದಾರೆ. ನಾಮನಿರ್ದೇಶಿತ ಸಂಸದರು ಮತ್ತು ಶಾಸಕರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಈ ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

ಮಾರ್ಗರೇಟ್ ಆಳ್ವ ವಿಪಕ್ಷ ಉಪ ರಾಷ್ಟ್ರಪತಿ ಅಭ್ಯರ್ಥಿ



ನವದೆಹಲಿ, ಜು.17– ಆಗಸ್ಟ್ 6ರಂದು ನಡೆಯಲಿರುವ ಉಪ ರಾಷ್ಟ್ರಪತಿ ಚುನಾವಣೆಗೆ ವಿಪಕ್ಷಗಳ ಅಭ್ಯರ್ಥಿಯಾಗಿ ಕರ್ನಾಟಕ ಕಾಂಗ್ರೆಸ್ ನಾಯಕಿ ಮಾರ್ಗರೇಟ್ ಆಳ್ವ ಅವರನ್ನು ಆಯ್ಕೆ ಮಾಡಲಾಗಿದೆ. ಇಂದು ದೆಹಲಿಯಲ್ಲಿ ವಿಪಕ್ಷಗಳ ಸಭೆ ಮುಕ್ತಾಯ ನಂತರ ಎನ್‌ಸಿಪಿ ನಾಯಕ ಶರದ್ ಪವಾರ್, ಮಾರ್ಗರೇಟ್ ಆಳ್ವ ಅವರ ಹೆಸರನ್ನು ಘೋಷಿಸಿದರು.

1942ರ ಏಪ್ರಿಲ್ 14ರಂದು ಮಂಗಳೂರಿನಲ್ಲಿ ಜನಿಸಿದ ಮಾರ್ಗರೇಟ್ ಆಳ್ವಾ ಗೋವಾದ 17ನೇ ರಾಜ್ಯಪಾಲರಾಗಿ, ▶ 8ನೇ ಪುಟಕ್ಕೆ

ಕೋವಿಡ್–19: ಲಸಿಕೆ ಅಭಿಯಾನದಲ್ಲಿ ದೇಶ ಮತ್ತೊಂದು ಮೈಲುಗಲ್ಲು
200 ಕೋಟಿಗೂ ಅಧಿಕ ಡೋಸ್ ಲಸಿಕೆ ನೀಡಿಕೆ

ನವದೆಹಲಿ,ಜು.17–ಕೋವಿಡ್–19 ಲಸಿಕಾ ಅಭಿಯಾನದಲ್ಲಿ ದೇಶ ಮತ್ತೊಂದು ಮೈಲುಗಲ್ಲು ದಾಟಿದೆ. ದೇಶದಲ್ಲಿ ಇಲ್ಲಿಯವರೆಗೂ 200 ಕೋಟಿಗೂ ಅಧಿಕ ಡೋಸ್ ಲಸಿಕೆ ನೀಡಲಾಗಿದೆ. ಆರೋಗ್ಯ ಸಚಿವಾಲಯ ಮಾಹಿತಿ ಪ್ರಕಾರ, ಶೇ.98ರಷ್ಟು ವಯಸ್ಕರು ಶೇ.90ರಷ್ಟು ಒಂದು ಡೋಸ್ ಲಸಿಕೆ ಪಡೆದರೆ, ಶೇ.90ರಷ್ಟು ಮಂದಿ ಸಂಪೂರ್ಣ ಲಸಿಕೆ ಪಡೆದುಕೊಂಡಿದ್ದಾರೆ 15ರಿಂದ 18 ವರ್ಷದೊಳಗಿನ ಶೇ.82ರಷ್ಟು ಮಂದಿ ಮೊದಲ ಡೋಸ್ ಪಡೆದಿದ್ದು, ಶೇ.68 ರಷ್ಟು ಮಂದಿ ಮೊದಲ ಹಾಗೂ ಎರಡನೇ ಡೋಸ್ ಎರಡನ್ನೂ ಪಡೆದುಕೊಂಡಿದ್ದಾರೆ. ಕೋವಿಡ್–19 ಲಸಿಕಾ ನೀಡಿಕೆಯಲ್ಲಿ 200 ಕೋಟಿ ಡೋಸ್ ದಾಟಿರುವುದಕ್ಕೆ ಪ್ರಧಾನಿ ಮೋದಿ ದೇಶವನ್ನು ಅಭಿನಂದಿಸಿದ್ದಾರೆ. 12ರಿಂದ 14 ವರ್ಷದೊಳಗಿನ ಶೇ.81ರಷ್ಟು ಮಂದಿ ಮೊದಲ ಡೋಸ್ ಪಡೆದಿದ್ದರೆ ಇದೇ ಗುಂಪಿನ ಶೇ.56ರಷ್ಟು ಮಂದಿ ಸಂಪೂರ್ಣ ಲಸಿಕೆ ಪಡೆದುಕೊಂಡಿದ್ದಾರೆ. ಕಳೆದ ವರ್ಷ ಜನವರಿ 16ರಿಂದ ಆರೋಗ್ಯ ಕಾರ್ಯಕರ್ತರು ಮೊದಲ ಹಂತದಲ್ಲಿ ಲಸಿಕೆ ಪಡೆಯುವುದರೊಂದಿಗೆ ದೇಶಾದ್ಯಂತ ಲಸಿಕಾ ಅಭಿಯಾನ ಆರಂಭವಾಗಿತ್ತು. ಕಳೆದ ವರ್ಷ ಫೆಬ್ರವರಿಯಿಂದ ಮುಂಚೂಣಿ ಕಾರ್ಯಕರ್ತರಿಗೆ, ಜನವರಿ 10ರಿಂದ ಆರೋಗ್ಯ ಕಾರ್ಯಕರ್ತರು ಮತ್ತು 60 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ ನೀಡಿಕೆಯನ್ನು ಆರಂಭಿಸಲಾಗಿತ್ತು. ಮಾರ್ಚ್ 16ರಿಂದ 12–14 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡಿಕೆ ಆರಂಭವಾಗಿತ್ತು. ಏಪ್ರಿಲ್ 10ರಂದು 18 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ವಯೋಮಾನದವರಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ನೀಡುವುದನ್ನು ಪ್ರಾರಂಭಿಸಲಾಗಿತ್ತು.



ಚಾಮುಂಡೇಶ್ವರಿಯಲ್ಲಿ ಮತ್ತೆ ಸ್ಪರ್ಧಿಸಲ್ಲ

ಮಾಜಿ ಮುಖ್ಯಮಂತ್ರಿ, ವಿಪಕ್ಷ ನಾಯಕ ಸಿದ್ದರಾಮಯ್ಯ ಪುನರುಚ್ಚಾರ

● 2023ರ ಚುನಾವಣೆ ಕೊನೆ ಚುನಾವಣೆ ● ನಂತರ ಯಾವುದೇ ಹುದ್ದೆ ಸ್ವೀಕರಿಸಲ್ಲ

ಮೈಸೂರು, ಜು.17(ಎಸ್‌ಬಿಡಿ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ ನಾನು ಮತ್ತೆ ಸ್ಪರ್ಧಿಸುವುದಿಲ್ಲ ಎಂದು ಕಡ್ಡಿ ತುಂಡಾದಂತೆ ನುಡಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಅಭ್ಯರ್ಥಿಯಾಗಿ ಯಾರೇ ಸ್ಪರ್ಧಿಸಿದರೂ ಅವರನ್ನು ಗೆಲ್ಲಿಸಬೇಕೆಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಚಾಮುಂಡೇಶ್ವರಿ ಮತ್ತು ಇಲವಾಲ–ಜಯಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಭಾನುವಾರ ಆಯೋಜಿಸಿದ್ದ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಿಂದ ತಮ್ಮ ಸ್ಪರ್ಧೆಯ ಬಗ್ಗೆ ಕಾರ್ಯಕರ್ತರಲ್ಲಿರುವ ಗೊಂದಲಕ್ಕೆ ತೆರೆ ಎಳೆದರು.

ನಾನು ಚಾಮುಂಡೇಶ್ವರಿ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸುವುದಿಲ್ಲ. ಸ್ಪರ್ಧಿಸುವಂತೆ ಯಾರೂ ಕೇಳಬೇಡಿ. ಈ ವಿಚಾರ ಯಾರ ತಲೆಯಲ್ಲಾದರೂ ಇದ್ದರೆ ಅದನ್ನು ತೆಗೆದು ಹಾಕಿ. ನಾವು ಯಾರನ್ನೇ ಅಭ್ಯರ್ಥಿಯಾಗಿ ಮಾಡಿದರೂ ಅವರನ್ನು ಗೆಲ್ಲಿಸಬೇಕು. ನಾನಂತೂ ನಿಲ್ಲುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲಿಸಿದಿರಿ. ಆದರೆ ಬಾದಾಮಿ ಕ್ಷೇತ್ರದ ಜನ ನನ್ನ ಕೈ ಹಿಡಿದರು. ಮತ್ತೆ ಅಲ್ಲಿಯೇ ಸ್ಪರ್ಧಿಸುವಂತೆ ಒತ್ತಾಯಿಸಿದ್ದಾರೆ. ಕೋಲಾರ, ಕೊಪ್ಪಳ, ಹುಣಸೂರು, ವರುಣಾ ಕ್ಷೇತ್ರದವರೂ ಕರೆಯುತ್ತಿದ್ದಾರೆ. ಆದರೆ ಈ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ. ಒಟ್ಟಾರೆ ಚಾಮುಂಡೇಶ್ವರಿ ಕ್ಷೇತ್ರ ▶ 8ನೇ ಪುಟಕ್ಕೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ನಡೆದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ನನಗಾದಂತೆ ಆಗಬಾರದು...

ಭ್ರಷ್ಟ ಬಿಜೆಪಿ ತೊಲಗಿ ರಾಜ್ಯ ಉಳಿಯಬೇಕೆಂಬ ಗುರಿಯೊಂದಿಗೆ ಕೆಲಸ ಮಾಡಿ. ಜೆಡಿಎಸ್ ಅಧಿಕಾರಕ್ಕೆ ಬರುವುದಿಲ್ಲ. ಯಾವ ಪಕ್ಷವೂ ಬಹುಮತ ಪಡೆಯುವುದು ಬೇಡ ಆಗ ಇಬ್ಬರೂ ನಮ್ಮ ಮನೆಗೆ ಬರುತ್ತಾರೆ ಎಂದು ಅಂದುಕೊಂಡಿದ್ದಾರೆ. ಆದರೆ ಶತಾಯಗತಾಯ ಕಾಂಗ್ರೆಸ್ ಸ್ವಂತ ಬಲದಿಂದ ಸರ್ಕಾರ ರಚಿಸಬೇಕು. ಮೈಸೂರು ಜಿಲ್ಲೆಯ 9 ಕ್ಷೇತ್ರ ಸೇರಿದಂತೆ ರಾಜ್ಯದಲ್ಲಿ 135ರಿಂದ 150 ಸ್ಥಾನಗಳನ್ನು ಗೆಲ್ಲಬೇಕು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಗೆಲುವು ಖಚಿತ. ನಾನೇನು ಅನ್ಯಾಯ, ದ್ರೋಹ ಮಾಡಿದ್ದೆ? ಗೆದ್ದಿರುವವರು ಕಡಿದು ಕಟ್ಟೆ ಹಾಕಿರುವುದೇನು?. ಇದನ್ನು ನಿಮ್ಮ ಹೃದಯದಲ್ಲಿ ಹುಡುಕಿ. ನನ್ನಂತೆ ಬೇರೆಯವರನ್ನೂ ಸೋಲಿಸಬೇಡಿ. ಬಿಜೆಪಿ ಹಾಗೂ ಜೆಡಿಎಸ್ ಕಿತ್ತೊಗೆದು ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸುವ ಶಪಥ ಮಾಡಿ.

–ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

ಮಡಿಕೇರಿ ಜಿಲ್ಲಾಡಳಿತ ಭವನದ ತಡೆಗೋಡೆಗೆ ಭಾರೀ ಹಾನಿ

ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಬಂದ್

● ಏಳು ಕೋಟಿ ರೂ. ಖರ್ಚು ಮಾಡಿ ನಿರ್ಮಿಸಿದ ತಡೆಗೋಡೆ ಕುಸಿಯುವ ಸಾಧ್ಯತೆ ● ವಾಹನಗಳ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ● ರಸ್ತೆ ಬಂದ್ ವಿರೋಧಿಸಿ ವಾಹನ ಸವಾರರ ಪ್ರತಿಭಟನೆ



“ ಜಿಲ್ಲಾಡಳಿತ ಭವನದ ತಡೆಗೋಡೆ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ತಡೆಗೋಡೆಯನ್ನು ಪರಿಶೀಲಿಸಿ ಪರಿಹಾರ ಸೂಚಿಸಲು ಲೋಕೋಪಯೋಗಿ ಇಲಾಖೆ ಉನ್ನತಾಧಿಕಾರಿಗಳಿಗೆ ಸೂಚಿಸಲಾಗಿದೆ. ತಡೆಗೋಡೆಯಿಂದ ಜಿಲ್ಲಾಡಳಿತ ಭವನಕ್ಕೆ ಯಾವುದೇ ತೊಂದರೆ ಆಗಿಲ್ಲ. ಜಿಲ್ಲಾಡಳಿತ ಕಚೇರಿಯನ್ನು ಸ್ಥಳಾಂತರ ಮಾಡುವಷ್ಟು ಯಾವುದೇ ಅಪಾಯ ಎದುರಾಗಿಲ್ಲ. –ಬಿ.ಸಿ.ಸತೀಶ, ಕೊಡಗು ಜಿಲ್ಲಾಧಿಕಾರಿ

ಮಡಿಕೇರಿ, ಜು.17– ಜಿಲ್ಲಾಡಳಿತ ಭವನಕ್ಕೆ ರಕ್ಷಣೆ ಒದಗಿಸಲು ಅಳವಡಿಸಲಾಗಿದ್ದ ಭಾರೀ ಗಾತ್ರದ ತಡೆಗೋಡೆ ಕುಸಿಯುವ ಅಪಾಯವನ್ನು ಎದುರಿಸುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಬರೆಯಂಚಿನಲ್ಲೇ ಹಾದು ಹೋಗುವ ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ತಾಳತ್ತಮನೆವರೆಗೆ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ.

ಕೆಲ ದಿನಗಳ ಹಿಂದೆಯಷ್ಟೆ ತಡೆಗೋಡೆಯ ಕೆಳ ಭಾಗದ ಕೆಲ ಕಾಂಕ್ರೀಟ್ ಸ್ಲ್ಯಾಬ್‌ಗಳು ಮೂರರಿಂದ ನಾಲ್ಕು ಇಂಚಿನಷ್ಟು ಹೊರ ಭಾಗಕ್ಕೆ ಸರಿದಿತ್ತು. ಶನಿವಾರ ಸಂಜೆ ವೇಳೆಗೆ ಮತ್ತಷ್ಟು ಸ್ಲ್ಯಾಬ್‌ಗಳು ಮುಂದಕ್ಕೆ ವಾಲಿಕೊಳ್ಳಲಾರಂಭಿಸಿದೆ. ಇದನ್ನು ಗಮನಿಸಿದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಸ್ಲ್ಯಾಬ್‌ಗಳಿಗೆ ರಂಧ್ರಗಳನ್ನು ಕೊರೆದು, ನೀರು ಹರಿದು ಹೋಗುವಂತೆ ಮಾಡಿ ಮಣ್ಣಿನ ಒತ್ತಡ ತಡೆಯುವ ವಿಫಲ ಯತ್ನ ನಡೆಸಿದರು. ಈ ಕಾಮಗಾರಿ ನಡೆಸಿದ ನಂತರ ಕೆಲವೇ ಗಂಟೆಗಳಲ್ಲಿ ಮತ್ತಷ್ಟು ಸ್ಲ್ಯಾಬ್‌ಗಳು ಮಣ್ಣಿನ ಒತ್ತಡಕ್ಕೆ ಹೊರಚಾಚಿಕೊಳ್ಳಲಾರಂಭಿಸಿವೆ.

“ ತಡೆಗೋಡೆ ಸುರಕ್ಷಿತವೆಂದು ಹೇಳುವ ಇಂಜಿನಿಯರ್‌ಗಳು, ಹೊರ ಚಾಚಿ ಕುಸಿಯುವ ಹಂತಕ್ಕೆ ತಲುಪಿರುವ ಸ್ಲ್ಯಾಬ್‌ಗಳ ಬಳಿ ಟೆಂಟ್ ಹಾಕಿ ಅಲ್ಲಿ ವಾಸ್ತವ್ಯ ಹೂಡಲಿ. ಆಗ ನಾವು ತಡೆಗೋಡೆ ಸುರಕ್ಷಿತವಾಗಿದೆ ಎಂದು ನಂಬುತ್ತೇವೆ. –ಪವನ್ ಪೆಮ್ಮಯ್ಯ, ಕೊ.ರ.ವೇ. ಜಿಲ್ಲಾಧ್ಯಕ್ಷ

ಅನಾಹುತ ಸಂಭವಿಸುವ ಸಾಧ್ಯತೆಗಳ ಹಿನ್ನೆಲೆ ಶನಿವಾರ ರಾತ್ರಿ 11 ಗಂಟೆಯ ವೇಳೆಗೆ ಏಕಾಏಕಿ ಮಡಿಕೇರಿ–ಮಂಗಳೂರು ರಸ್ತೆ ಸಂಚಾರವನ್ನು ನಿರ್ಬಂಧಿಸಿ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಬ್ಯಾರಿಕೇಡ್ ಅಳವಡಿಸಲಾಯಿತು. ಜಿಲ್ಲಾಡಳಿತದ ಈ ಏಕಾಏಕಿ ನಿರ್ಧಾರವನ್ನು ವಿರೋಧಿಸಿ, ರಾತ್ರಿ ವೇಳೆ ಜಡಿ ಮಳೆಯ ನಡುವೆ ವಿವಿಧೆಡೆಗಳಿಂದ ಮಂಗಳೂರು ಕಡೆಗೆ ತೆರಳುತ್ತಿದ್ದ ವಾಹನ ಸವಾರರು, ಪ್ರಯಾಣಿಕರು ಹಾಗೂ ಸಾರ್ವಜನಿಕರು ಪ್ರತಿಭಟನೆ ▶ 5ನೇ ಪುಟಕ್ಕೆ



ಪರ್ಯಾಯ ಮಾರ್ಗ

ನಗರದ ಜನರಲ್ ತಿಮ್ಮಯ್ಯ ವೃತ್ತದಿಂದ ಮಂಗಳೂರಿಗೆ ತೆರಳುವ ರಸ್ತೆ ಸಂಚಾರವನ್ನು ನಿರ್ಬಂಧಿಸಿರುವುದರಿಂದ ಇದೀಗ ಮಡಿಕೇರಿ–ಮೇಕೇರಿ–ಕಾಟಕೇರಿ–ತಾಳತ್ತಮನೆ ಮಾರ್ಗದಲ್ಲಿ ವಾಹನಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ಜನರಲ್ ತಿಮ್ಮಯ್ಯ ವೃತ್ತ ಹಾಗೂ ತಾಳತ್‌ಮನೆಯಲ್ಲಿ ಮಂಗಳೂರು ಕಡೆಯಿಂದ ಮಡಿಕೇರಿಗೆ ಬರುವ ವಾಹನಗಳನ್ನು ತಡೆಯಲು ಬ್ಯಾರಿಕೇಡ್ ಅಳವಡಿಸಲಾಗಿದೆ.

ಏಕಾಏಕಿ ಉದ್ಭವಿಸಿರುವ ಈ ಸಮಸ್ಯೆಯಿಂದ ಮಂಗಳೂರು ಕಡೆಗೆ ತೆರಳುವವರು 10 ಕಿ.ಮೀ ಸುತ್ತಿ ಬಳಸಿ ಸಂಚರಿಸಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ. ಮಾತ್ರವಲ್ಲದೇ ಈ ರಸ್ತೆ ಅತ್ಯಂತ ಕಿರಿದಾಗಿದ್ದು, ಅತೀ ಹೆಚ್ಚು ವಾಹನಗಳ ಸಂಚಾರಕ್ಕೆ ಕಷ್ಟಕರವಾಗಿದೆ. ಭಾನುವಾರ ಈ ರಸ್ತೆಯಲ್ಲಿ ನೂರಾರು ವಾಹನಗಳು ಕಿ.ಮೀ.ವರೆಗೆ ಸಾಲುಗಟ್ಟಿ ನಿಂತಿದ್ದು ಕಂಡು ಬಂತು.

ಕನ್ನಡದ ಸಾಂಸ್ಕೃತಿಕ ಮೇರು ವ್ಯಕ್ತಿತ್ವಗಳ ಚಿತ್ರಣ ಒಳಗೊಂಡ ಮರಾಠಿ ಕೃತಿ ಬಿಡುಗಡೆ

■ ಸಂಗೀತದ ವಿಮರ್ಶಕಿ ಡಾ.ಮಾಣಿಕ್ ಬಂಗೇರಿ ಅವರ 'ಸಂಗೀತ-ನಾಟ್ಯ-ಪಂಚಾಯತನ್' ಪುಸ್ತಕ ಬಿಡುಗಡೆ ■ ಬಂಗೇರಿ ಕನ್ನಡಿಗರು, ಮರಾಠಿಗರ ನಡುವಿನ ಸೇತುವೆ; ಬಿವಿಬಿ ಮೈಸೂರು ಕೇಂದ್ರದ ಮಾಜಿ ಅಧ್ಯಕ್ಷ ಡಾ.ಎ.ವಿ.ನರಸಿಂಹಮೂರ್ತಿ ಬಣ್ಣನೆ

ಮೈಸೂರು,ಜು.17(ಪಿಎಂ)–ಕನ್ನಡದ ಸಾಂಸ್ಕೃತಿಕ ಮೇರು ವ್ಯಕ್ತಿತ್ವಗಳು ಮತ್ತು ಚಿತ್ರಣ ಒಳಗೊಂಡ ಡಾ.ಮಾಣಿಕ್ ಎ.ವಿ.ಬಂಗೇರಿ ಅವರ 'ಸಂಗೀತ–ನಾಟ್ಯ–ಪಂಚಾಯತನ್' ಶೀರ್ಷಿಕೆಯ ಮರಾಠಿ ಕೃತಿ ಭಾನುವಾರ ಬಿಡುಗಡೆಗೊಂಡಿತು.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ಅನಂತ ತನಯ' ಕಾವ್ಯ ನಾಮದಿಂದ ಚಿರಪರಿತರಾಗಿರುವ ರಂಗಭೂಮಿ ಮತ್ತು ಶಾಸ್ತ್ರೀಯ ಸಂಗೀತದ ವಿಮರ್ಶಕಿ ಡಾ.ಮಾಣಿಕ್ ಎ.ವಿ. ಬಂಗೇರಿ ಅವರ ಕೃತಿಯನ್ನು ಮೈಸೂರು ವಿವಿಯ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕರು ಹಾಗೂ ಭಾರತೀಯ ವಿದ್ಯಾ ಭವನ (ಬಿವಿಬಿ) ಮೈಸೂರು ಕೇಂದ್ರದ ಮಾಜಿ ಅಧ್ಯಕ್ಷರೂ ಆದ ಡಾ.ಎ.ವಿ.ನರಸಿಂಹಮೂರ್ತಿ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಡಾ.ಮಾಣಿಕ್ ಎ.ವಿ. ಬಂಗೇರಿ ಅವರು ನಿಜವಾದ ಮಾಣಿಕ್ಯವೇ ಸರಿ. ಬಂಗೇರಿಯವರು ಕನ್ನಡಿಗರು ಮತ್ತು ಮರಾಠಿಗರ ನಡುವೆ ಸೇತುವೆಯಂತೆ ಇದ್ದಾರೆ. ಆ ಮೂಲಕ ಕನ್ನಡಿಗರ ವಿಶೇಷ ಪ್ರೀತಿಗೆ ಭಾಜನರಾಗಿದ್ದಾರೆ. 'ಸಂಗೀತ–ನಾಟ್ಯ–ಪಂಚಾಯತನ್' ಕೃತಿಯಲ್ಲಿ ಐವರು ಮಹಾಪ್ರತಿಭೆಗಳನ್ನು ಅನಾವರಣ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೃತಿ ಕುರಿತು ಮಾತನಾಡಿದ ಹಿರಿಯ ರಂಗಭೂಮಿ ಕಲಾವಿದ ಮಾಧವ ಖರೆ, ಬಾಹ್ಯ ರೂಪದಲ್ಲೂ ಕೃತಿಯು ಸುಂದರವಾಗಿ ಮೂಡಿ ಬಂದಿದೆ. ಇದು 500 ಪುಟಗಳ ಪುಸ್ತಕ. ಇದರಲ್ಲಿ 16 ವರ್ಣ ಪುಟಗಳು ಸೇರಿವೆ. ನಾಲ್ವರು ಕನ್ನಡಿಗರೂ ಸೇರಿದಂತೆ ಐದು ಮಹಾಪ್ರತಿಭೆಗಳ ಬಗ್ಗೆ ಇದರಲ್ಲಿ ಲೇಖಕರು ಹೇಳುತ್ತಾ ರಂಗಭೂಮಿ ಮತ್ತು ಶಾಸ್ತ್ರೀಯ ಸಂಗೀತದ ಮಹತ್ವದ ಅಂಶಗಳನ್ನು ದಾಖಲಿಸಿದ್ದಾರೆ ಎಂದು ಹೇಳಿದರು.

ಮೊಗಲ ಚಕ್ರವರ್ತಿ ಅಕ್ಬರನ ಆಸ್ಥಾನದಲ್ಲಿ ಪ್ರಸಿದ್ಧ ಸಂಗೀತಗಾರರಾಗಿದ್ದ ತಾನ್‌ಸೇನ್ ಹೊರತಾಗಿ ಕೃತಿಯಲ್ಲಿ ದಾಖಲಿಸಿರುವ ಸಾಧಕರೆಲ್ಲಾ ಕನ್ನಡಿಗರು. ರಂಗಭೂಮಿಯ ಅತ್ಯಂತ ದೊಡ್ಡ ಶಿಖರಗಳಾಗಿದ್ದ ಏಣಗಿ ಬಾಳಪ್ಪ, ಗುಬ್ಬಿವೀರಣ್ಣ, ಹಿಂದೂಸ್ತಾನಿ ಗಾಯಕ ಸವಾಯಿ ಗಂಧರ್ವ, ರಂಗಭೂಮಿ ನಟ, ಗಾಯಕ ಬಾಲಗಂಧರ್ವ ಅವರ ಸಾಧನೆಯ ಮೈಲುಗಲ್ಲು ಇಲ್ಲಿ ಅನಾವರಣಗೊಂಡಿವೆ. ಆ ಮೂಲಕ ಲೇಖಕರು ಇಡೀ ಭಾರತದ ರಂಗಭೂಮಿಯತ್ತಲೂ ಬೆಳಕು ಚೆಲ್ಲಿದ್ದಾರೆ ಎಂದು ಹೇಳಿದರು.

ಕೃತಿಯಲ್ಲಿ ಮಹತ್ವದ ಅಂಶಗಳನ್ನು ದಾಖಲಿಸಲು ಲೇಖಕರು ಅಪಾರ ಮಾಹಿತಿ ಕಲೆ ಹಾಕಿದ್ದಾರೆ. ಈ ಪುಸ್ತಕವನ್ನು ಭರತನ ನಾಟ್ಯಶಾಸ್ತ್ರ ಪ್ರಕಾರದಲ್ಲೇ ರಚನೆ ಮಾಡಿರುವುದು ವಿಶೇಷ. ಲೇಖಕರೇ ಸಂಗೀತಗಾರರು, ನಟರೂ ಆಗಿರುವ ಹಿನ್ನೆಲೆಯಲ್ಲಿ ಅವರಿಗೆ ಎಲ್ಲಾ ಕಲೆಗಳ ಬಗ್ಗೆ ಹೆಚ್ಚಿನ ಪರಿಚಯವಿದೆ. ಹೀಗಾಗಿ ಇಡೀ ರಂಗಭೂಮಿಯ ಇತಿಹಾಸವನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ರಂಗಭೂಮಿ ಮತ್ತು ನವ್ಯ ರಂಗಭೂಮಿ ಉದಯದ ಬಗ್ಗೆಯೂ ಉಲ್ಲೇಖಿಸಿದ್ದಾರೆ ಎಂದು ಹೇಳಿದರು.

ಸದರಿ ಕೃತಿಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಿಂದ ಕನ್ನಡಕ್ಕೆ ಅನುವಾದ ಮಾಡಿಸಿದರೆ ಉತ್ತಮ ಕಾರ್ಯವಾಗಲಿದೆ. ಮರಾಠಿ ಕೃತಿಯಾದರೂ ಬಹುತೇಕ ಭಾಗ ಕನ್ನಡಿಗರಿಂದಲೇ ತುಂಬಿ ಹೋಗಿದೆ. ಕನ್ನಡದ ಪ್ರತಿಭೆಗಳು, ಸಾಂಸ್ಕೃತಿಕ ಚಿಂತನೆಗಳನ್ನು ಸಹೋದರ ಭಾಷೆಯಲ್ಲಿ ಅನಾವರಣಗೊಳಿಸುವುದು ಸುಲಭ ಕೆಲಸವಲ್ಲ. ಅಂತಹ ಅಪರೂಪದ ಕಾರ್ಯವನ್ನು ಲೇಖಕರು ಮಾಡಿದ್ದಾರೆ. ರಂಗಭೂಮಿ ಮತ್ತು ಶಾಸ್ತ್ರೀಯ ಸಂಗೀತದ ಜೊತೆಗೆ 25 ಪುಟಗಳಲ್ಲಿ ಯಕ್ಷಗಾನದ ಬಗ್ಗೆ ವಿವರಿಸಿದ್ದಾರೆ ಎಂದರು.

ಗುಬ್ಬಿವೀರಣ್ಣ ಒಬ್ಬ ಅದ್ಭುತ ವ್ಯವಸ್ಥಾಪಕ ಸಂಘಟಕ ಎಂದು ಲೇಖಕರು ಕರೆದಿದ್ದಾರೆ. ಒಂದು ಸಂಸ್ಥೆ ಸ್ಥಾಪಿಸಿದಾಗ, ಸಂಸ್ಥೆ ಮೂಲಕ ತಾವು ಬೆಳೆದು ಸಂಸ್ಥೆ ಅವಲಂಬಿತರಾದ ಎಲ್ಲಾ ನಟರ ಬದುಕು ಹಸನಾಗಬೇಕು ಎಂಬ ಚಿಂತನೆಯೊಂದಿಗೆ ಕಾರ್ಯನಿರ್ವಹಿಸಿದವರು ಗುಬ್ಬಿವೀರಣ್ಣ ಎಂದು ಲೇಖಕರು ಪ್ರತಿಪಾದಿಸಿದ್ದಾರೆ ಹೇಳಿದರು.

ಪ್ರತಿಭೆ ಎಲ್ಲರಲ್ಲೂ ಇರುತ್ತದೆ. ಅದನ್ನು ಬಾಲ್ಯದಲ್ಲಿ ಪೋಷಿಸಬೇಕೆಂಬ ವಿಚಾರದಲ್ಲಿ ಗುಬ್ಬಿವೀರಣ್ಣ ನಂಬಿಕೆ ಹೊಂದಿದ್ದರು. ಹಾಗಾಗಿ ಹೆಚ್ಚಿನ ಸಂಖ್ಯೆಯ ಬಾಲ ನಟರನ್ನು ರಂಗಭೂಮಿಗೆ ಕರೆತಂದರು. ಡಾ.ರಾಜ್‌ಕುಮಾರ್, ಬಾಲಕೃಷ್ಣ ಮೊದಲಾದವರು ಗುಬ್ಬಿವೀರಣ್ಣ ಸಂಸ್ಥೆ ಮೂಲಕವೇ ರಂಗಭೂಮಿಗೆ ಪಾದಾರ್ಪಣೆ ಮಾಡಿದವರು. ಗುಬ್ಬಿವೀರಣ್ಣ ತಮ್ಮ ಸಂಸ್ಥೆ ಮೂಲಕ ನಿರ್ಮಾಣ ಮಾಡಿದ ನಾಟಕಗಳು, ಸಿನಿಮಾಗಳ ಕುರಿತು ಲೇಖಕರು ವಿಸ್ತೃತವಾಗಿ ದಾಖಲಿಸಿದ್ದಾರೆ ಎಂದು ತಿಳಿಸಿದರು.

ಕೃತಿಯು ಸಂಗ್ರಹ ಯೋಗ್ಯವಾಗಿದ್ದು, ಲೇಖಕರು ಮರಾಠಿ ಪುಸ್ತಕದ ಮೂಲಕ ಕನ್ನಡದ ಚಿತ್ರಣವನ್ನು ಅನಾವರಣ ಮಾಡಿದ್ದಾರೆ. ಭಾಷಾ ಸಾಮರಸ್ಯ ಸಾಧಿಸಲು ಸಾಹಿತ್ಯ, ಸಂಗೀತ ಮತ್ತು ರಂಗಭೂಮಿಯಿಂದ ಸಾಧ್ಯವೇ ಹೊರತು, ರಾಜಕೀಯದಿಂದಲ್ಲ ಎಂದು ಪ್ರತಿಪಾದಿಸಿದರು.

ಇದೇ ವೇಳೆ ಡಾ.ಮಾಣಿಕ್ ಎ.ವಿ.ಬಂಗೇರಿ ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ, ಡಾ.ಎ.ವಿ.ನರಸಿಂಹಮೂರ್ತಿ ಮತ್ತು ಕಮಲಾಂಬ ನರಸಿಂಹಮೂರ್ತಿ ದಂಪತಿಯಿಂದಲೂ ಪ್ರತ್ಯೇಕವಾಗಿ ಬಂಗೇರಿಯವರನ್ನು ಅಭಿನಂದಿಸಲಾಯಿತು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕಾರ್ಯದರ್ಶಿ ಮ.ನ.ಲತಾ ಮೋಹನ್, ಕೋಶಾಧ್ಯಕ್ಷ ಜಿ.ಪ್ರಕಾಶ್, ಕೃತಿ ಕರ್ತೃ ಡಾ. ಮಾಣಿಕ್ ಎ.ವಿ.ಬಂಗೇರಿ ಮತ್ತಿತರರು ಹಾಜರಿದ್ದರು.



ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ವಿಮರ್ಶಕಿ ಡಾ.ಮಾಣಿಕ್ ಎ.ವಿ.ಬಂಗೇರಿ ಅವರ 'ಸಂಗೀತ–ನಾಟ್ಯ–ಪಂಚಾಯತನ್' ಕೃತಿಯನ್ನು (ಎಡದಿಂದ 5ನೇಯವರು) ಬಿವಿಬಿ ಮೈಸೂರು ಕೇಂದ್ರದ ಮಾಜಿ ಅಧ್ಯಕ್ಷ ಡಾ.ಎ.ವಿ.ನರಸಿಂಹಮೂರ್ತಿ ಬಿಡುಗಡೆ ಮಾಡಿದರು. ಇದೇ ವೇಳೆ ಡಾ.ಮಾಣಿಕ್ ಎ.ವಿ.ಬಂಗೇರಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. (ಎಡದಿಂದ) ಜಿಲ್ಲಾ ಕಸಾಪ ಕೋಶಾಧ್ಯಕ್ಷ ಜಿ.ಪ್ರಕಾಶ್, ಹಿರಿಯ ರಂಗಭೂಮಿ ಕಲಾವಿದ ಮಾಧವ ಖರೆ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಡಾ.ಎ.ವಿ.ನರಸಿಂಹಮೂರ್ತಿಯವರ ಪತ್ನಿ ಕಮಲಾಂಬ ನರಸಿಂಹಮೂರ್ತಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಾರ್ಯದರ್ಶಿ ಮ.ನ.ಲತಾಮೋಹನ್ ಸೇರಿದಂತೆ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

" 19ನೇ ಶತಮಾನ ಮತ್ತು 20ನೇ ಶತಮಾನದ ಆರಂಭವು ಸಂಗೀತ, ನಾಟ್ಯ ಮತ್ತು ರಂಗಭೂಮಿಯ ಸುವರ್ಣ ಕಾಲ. ಇಲ್ಲಿಗೆ (ಮೈಸೂರು) ಬಂದು 45 ವರ್ಷಗಳಾದವು. ಇದೇ ನನ್ನ ಕರ್ಮಭೂಮಿ. ನನ್ನ ಮುಂದಿನ ಪುಸ್ತಕ 'ಋತು ವೈಭವ' ಸಿದ್ಧಗೊಳ್ಳುತ್ತಿದೆ. ಅದು 700 ಪುಟಗಳನ್ನು ಹೊಂದಿದೆ. ಈ ಕೃತಿಯು 'ಸಮೃದ್ಧ ಭಾರತೀಯ ಸಂಸ್ಕೃತಿ ದರ್ಶನ' ಉಪಶೀರ್ಷಿಕೆ ಒಳಗೊಂಡಿದೆ. ಒಂದು ವರ್ಷದಲ್ಲಿ ಇಡೀ ಭಾರತದಲ್ಲಿ ಆಚರಿಸುವ 'ಹಬ್ಬ ಹರಿದಿನಗಳ' ಚಿತ್ರಣದೊಂದಿಗೆ ಅವುಗಳ ಪ್ರಾಮುಖ್ಯತೆ ಮತ್ತು ವೈಶಿಷ್ಟ್ಯ ದಾಖಲಿಸುವ ಪ್ರಯತ್ನ ಮಾಡಿದ್ದೇನೆ. ಇದೂ ಮರಾಠಿ ಭಾಷೆಯ ಪುಸ್ತಕವಾಗಿದೆ.

-ಡಾ.ಮಾಣಿಕ್ ಎ.ವಿ.ಬಂಗೇರಿ

" ಎರಡು ಭಾಷೆಗಳ ಬಾಂಧವ್ಯ ವೃದ್ಧಿಗೆ ಇಂದಿನ ಕಾರ್ಯಕ್ರಮ ಸಹಕಾರಿ. ಡಾ.ಮಾಣಿಕ್ ಎ.ವಿ.ಬಂಗೇರಿ ಅವರು ಬ್ಯಾಂಕ್‌ನಲ್ಲಿ ಉದ್ಯೋಗಿ ಆಗಿದ್ದವರು. ಅವರು ಮರಾಠಿಗರೆಂದು ಯಾರಾದರೂ ಮರಾಠಿಯಲ್ಲಿ ಮಾತನಾಡಿಸಲು ಮುಂದಾದರೆ ಅದಕ್ಕೆ ಅವರು ಆಕ್ಷೇಪ ವ್ಯಕ್ತಪಡಿಸಿ, ಕನ್ನಡದಲ್ಲೇ ಮಾತನಾಡಲು ಹೇಳುತ್ತಿದ್ದರು. ಇದನ್ನು ಸ್ವತಃ ನಾನೇ ನೋಡಿದ್ದೇನೆ. ನಮ್ಮ ನಾಡಿನ ಸಾಧಕರನ್ನು ಮರಾಠಿ ಭಾಷೆ ಮೂಲಕ ಮರಾಠಿ ಭಾಷಿಗರಿಗೆ ಪರಿಚಯಿಸುತ್ತಿರುವುದು ಕನ್ನಡಿಗರ ಹೆಮ್ಮೆ. ನಮ್ಮ ನಾಡಿನಲ್ಲಿ ಎಲ್ಲಾ ಕನ್ನಡೇತರು ಇದೇ ರೀತಿ ಸಾಮರಸ್ಯ ಮೂಡಿಸಲು ಮುಂದಾದರೆ, ನಮ್ಮ ಸಮಾಜದಲ್ಲಿ ಐಕ್ಯತೆ, ಬಾತೃತ್ವ ಹೆಚ್ಚಾಗಲಿದೆ. –ಮಡ್ಡೀಕೆರೆ ಗೋಪಾಲ್

ಮೈಸೂರು ರಾಜಮಾರ್ಗ, ವೃತ್ತದಲ್ಲಿ ವಾಹನ, ಸಾರ್ವಜನಿಕರ ಸಂಚಾರ ದುಸ್ತರ







ಮೈಸೂರು, ಜು.17(ಎಸ್‌ಪಿಎನ್)–ನಗರದಲ್ಲಿ ನಿರಂತರ ಮಳೆಯಿಂದಾಗಿ ನ್ಯೂ ಸಯ್ಯಾಜಿರಾವ್ ರಸ್ತೆಯ ಕೆಲವೆಡೆ ಯುಜಿಡಿ ನೀರು ಉಕ್ಕಿ ಈ ಜಾಗ ಕರೆಯಂತಾಗುತ್ತದೆ. ಅಲ್ಲದೆ, ಹೈವೇ ವೃತ್ತದಲ್ಲಿ ಮಿನಿ ಹೊಂಡಗಳು ನಿರ್ಮಾಣವಾಗಿದ್ದು, ಕೆ.ಆರ್. ವೃತ್ತದ ಎರಡೂ ಬದಿ ಫುಟ್‌ಪಾತ್ ಅತಿಕ್ರಮಣದಿಂದ ವಾಹನ ಹಾಗೂ ಪಾದಚಾರಿಗಳ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು 'ಮೈಸೂರು ಮಿತ್ರ'ನಲ್ಲಿ ದೂರಿದರು.

ತಿಲಕ್‌ನಗರದ ಕಿವುಡ ಮತ್ತು ಮೂಗರ ಶಾಲೆ ಸಮೀಪದ ವೃತ್ತದಲ್ಲಿ ಪ್ರತಿ ಬಾರಿ ಮಳೆ ಬಂದಾಗ ಯುಜಿಡಿ ನೀರು ಉಕ್ಕಿ ರಸ್ತೆ ಕೆರೆಯಂತಾಗುತ್ತಿದೆ. ಈ ಸಮಸ್ಯೆ ಹಲವು ವರ್ಷಗಳಿಂದ ಇದೆ. ಹಾಗಾಗಿ ಈ ಸಮಸ್ಯೆಯನ್ನು ಸರಿಪಡಿಸಲು ಮೈಸೂರು ನಗರ ಪಾಲಿಕೆ ಅಧಿಕಾರಿಗಳು ಮುಂದಾಗಬೇಕು ಎಂದು ಪಾದಚಾರಿ ರವೀಂದ್ರ ಮನವಿ ಮಾಡಿದರು.

ಮಳೆ ಬಂದಾಗ ಕಿವುಡ ಮತ್ತು ಮೂಗರ ಶಾಲೆ (ಸಯ್ಯಾಜಿ ರಾವ್ ರಸ್ತೆ) ಮುಂಭಾಗದ ಚರಂಡಿಯಿಂದ ಹರಿದು ಬರುವ ನೀರು, ತಿಲಕನಗರ ಕಡೆಯಿಂದ ಬರುವ ಯುಜಿಡಿ ನೀರು, ಸರಾಗವಾಗಿ ಹೋಗಲು ಜಾಗವಿಲ್ಲದ ಹಿನ್ನೆಲೆಯಲ್ಲಿ ರಸ್ತೆಯಲ್ಲೇ ನಿಲ್ಲುತ್ತದೆ. ಇದರಿಂದ ರಾತ್ರಿ ವೇಳೆ ಬನ್ನಿಮಂಟಪದಿಂದ ಕೆ.ಆರ್.ವೃತ್ತದ ಕಡೆಗೆ ಹೋಗಲು ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಜಾಗದಲ್ಲಿ ಸ್ವಲ್ಪ ಯಾಮಾರಿದರೂ ಅನಾಹುತ ಗ್ಯಾರಂಟಿ ಎಂದು ತಿಳಿಸಿದರು.

ರಸ್ತೆಗಿಂತ ಚರಂಡಿ ದಿಂಡೇ ಎತ್ತರ: ಆರ್‌ಎಂಸಿ ವೃತ್ತದಿಂದ ಶೇಷಾದ್ರಿ ಅಯ್ಯರ್ ರಸ್ತೆಗೆ ಹೋಗುವ ಮಾರ್ಗದಲ್ಲಿ ಪ್ರತಿ ಬಾರಿ ಮಳೆ ಬಂದಾಗಲೂ ಚರಂಡಿ ನೀರು ಸರಾಗವಾಗಿ ಹರಿದು ಹೋಗಲು ಸಾಧ್ಯವಾಗದ ಹಿನ್ನೆಲೆಯಲ್ಲಿ ರಸ್ತೆಯಲ್ಲೇ ನಿಂತು ಮಿನಿ ಕೆರೆಯಂತಾಗುತ್ತದೆ. ಈ ಜಾಗದಲ್ಲಿ ರಸ್ತೆಗಿಂತ ಚರಂಡಿಗೆ ಕಟ್ಟಿರುವ ದಿಂಡೇ ಎತ್ತರವಾಗಿದೆ. ಇದರಿಂದ ರಸ್ತೆ ನೀರು ಹರಿದು ಹೋಗಲು ಸಾಧ್ಯವಾಗುತ್ತಿಲ್ಲ. ಇದರಿಂದ ಪ್ರತಿ ಬಾರಿ ಮಳೆ ಬಂದಾಗಲೂ ಈ ಜಾಗದಲ್ಲಿ ವಾಹನ ಸವಾರರು ನೀರು ತಪ್ಪಿಸಲು ಹೋಗಿ ಆಯಾ ತಪ್ಪಿ ಬೀಳುತ್ತಿದ್ದಾರೆ ಎಂದು ಕೂಲಿ ಕಾರ್ಮಿಕ ಸತೀಶ್ ದೂರಿದರು.

ಮಿನಿ ಹೊಂಡ: ನಿರಂತರ ಮಳೆಗೆ ಹೈವೇ ವೃತ್ತದಲ್ಲಿ ಮಿನಿ ಹೊಂಡಗಳು ವೃತ್ತದ ತಿರುವಿನಲ್ಲಿ ನಿರ್ಮಾಣವಾಗಿದೆ. ಇಲ್ಲಿ ವಾಹನ ಸವಾರರು ಸ್ವಲ್ಪ ಯಾಮಾರಿದರೂ ಅಪಘಾತ ಕಟ್ಟಿಟ್ಟ ಬುತ್ತಿ. ಇದ ರತ್ತ ಅಧಿಕಾರಿಗಳು ಗಮನಹರಿಸಬೇಕು ಎಂದು ಬೀದಿಬದಿ ವ್ಯಾಪಾರಿಯೊಬ್ಬರು ಮನವಿ ಮಾಡಿದರು.



ಪಾದಚಾರಿಗಳ ಓಡಾಟಕ್ಕೆ ಕಿರಿಕಿರಿ: ಕೆ.ಆರ್.ವೃತ್ತ (ಸಯ್ಯಾಜಿರಾವ್ ರಸ್ತೆ)ದಲ್ಲಿ ಎರಡು ಕಡೆ ರಸ್ತೆಬದಿಯಲ್ಲಿ ವ್ಯಾಪಾರಿಗಳು ಪಾದಚಾರಿಗಳ ಓಡಾಟಕ್ಕೂ ಜಾಗ ಬಿಡದೆ ನಾನಾ ಪದಾರ್ಥಗಳನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಾರೆ. ಮಳೆ ಬಂದಾಗ 2 ಕಡೆ ಟ್ರಾಫಿಕ್ ಜಾಮ್ ಆಗುವುದರಿಂದ ಪಾದ ಚಾರಿಗಳ ಓಡಾಟಕ್ಕೆ ತೀವ್ರ ತೊಂದರೆಯಾಗುತ್ತಿದೆ. ಇದನ್ನು ಸಂಚಾರಿ ಪೊಲೀಸರು ತಪ್ಪಿಸಿ, ಪಾದಚಾರಿಗಳ ಓಡಾಟಕ್ಕೆ ಅನುವು ಮಾಡಿಕೊಡುವಂತೆ ಗೃಹಿಣಿ ಶ್ವೇತಶ್ರೀ ಮನವಿ ಮಾಡಿದರು. ಗ್ರಾಮೀಣ ಭಾಗದ ಜನರು ನಗರ ಬಸ್ ನಿಲ್ದಾಣದಿಂದ ತಮ್ಮ ತಮ್ಮ ಊರಿಗೆ ತೆರಳಲು, ನಗರದ ವಿವಿಧ ಭಾಗದಲ್ಲಿರುವ ಸರ್ಕಾರಿ ಕಚೇರಿ ಉದ್ಯೋಗಿಗಳು, ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು ನಗರ ಬಸ್ ನಿಲ್ದಾಣಕ್ಕೆ ಆಗಮಿಸುತ್ತಾರೆ. ಈ ವೇಳೆ ಕೆ.ಆರ್.ವೃತ್ತದ ಸಿಗ್ನಲ್ ದಾಟಲು ಹರಸಾಹಸ ಪಡುವಂತಾಗಿದೆ. ಅದರಲ್ಲೂ ಸಂಜೆ ವೇಳೆ ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ಮುಗಿಸಿ ಮನೆಗಳಿಗೆ ಹೋಗಲು ನಗರ ಬಸ್‌ನಿಲ್ದಾಣಕ್ಕೆ ಭಾರೀ ಜನ ಬರುವುದರಿಂದ ಈ ವೃತ್ತ ಮತ್ತು ಅಕ್ಕ–ಪಕ್ಕದ ರಸ್ತೆಗಳಲ್ಲಿ ಓಡಾಟ ಹೆಚ್ಚಾಗಿರುತ್ತದೆ. ಈ ವೇಳೆ ಮಳೆ ಬಂದರೆ, ಫುಟ್‌ಪಾತ್ ಅತಿ ಕ್ರಮಣದಿಂದ ಓಡಾಟಕ್ಕೆ ಮತ್ತಷ್ಟು ಕಷ್ಟವಾಗುತ್ತಿದೆ ಎಂದು ಸಮಸ್ಯೆಯನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

" ಕೆ.ಆರ್.ವೃತ್ತ ಹಾಗೂ ಆಜು–ಬಾಜಿನ ರಸ್ತೆಗಳ ಎರಡೂ ಬದಿಯ ಫುಟ್‌ಪಾತ್‌ನಲ್ಲಿ ವ್ಯಾಪಾರಿಗಳು ಅತಿಕ್ರಮಿಸಿಕೊಂಡು ಪಾದಚಾರಿಗಳ ಓಡಾಟಕ್ಕೆ ಸಮಸ್ಯೆಯಾಗಿರುವ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. –ಪರಮೇಶ್ವರಪ್ಪ, ಎಸಿಪಿ, ಸಂಚಾರ ವಿಭಾಗ

ಪಿಎಚ್.ಡಿ ಪದವೀಧರರು



ರಾಜೇಂದ್ರ ಡಿ. ಬಡಿಗೇರ

ಮೈಸೂರು, ಜು. 17–ಡಾ.ಅರವಿಂದ ಮಾಲಗತ್ತಿ ಅವರ ಮಾರ್ಗದರ್ಶನದಲ್ಲಿ ರಾಜೇಂದ್ರ ಡಿ. ಬಡಿಗೇರ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಡಿ.ಚಿನ್ನಸ್ವಾಮಿ



ಡಾ.ಕೆ.ಎನ್.ಗಂಗಾನಾಯಕ್ ಅವರ ಮಾರ್ಗದರ್ಶನದಲ್ಲಿ ಡಿ.ಚಿನ್ನಸ್ವಾಮಿ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಎಂ.ಜೆ.ರೇಖಾ

ಡಾ.ಕೆ.ಗೋವಿಂದರಾಜು ಅವರ ಮಾರ್ಗದರ್ಶನದಲ್ಲಿ ಎಂ.ಜೆ. ರೇಖಾ ಅವರು ಜೈವಿಕ ತಂತ್ರಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸೋಮಣ್ಣ



ಡಾ.ವಿಜಯಲಕ್ಷ್ಮಿ ಅವರ ಮಾರ್ಗದರ್ಶನದಲ್ಲಿ ಸೋಮಣ್ಣ ಅವರು ಜಾನಪದ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್‌ಗೆ ನೇಮಕ



ಮೈಸೂರು,ಜು.17–ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಚಾಮುಂಡಿ ಬೆಟ್ಟದ ಗ್ರಾಮ ಪಂಚಾಯಿತಿ ಅಧ್ಯಕ್ಷ ಭರತ್ ಕಾಳಯ್ಯ ಅವರನ್ನು ನೇಮಕ ಮಾಡಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಶೀಘ್ರದಲ್ಲಿ ಮೈಸೂರಿನ ಗೋಶಾಲೆ ಆರಂಭ

ಮುಕ್ತಾಯದ ಹಂತದಲ್ಲಿರುವ ನಿರ್ಮಾಣ ಕಾಮಗಾರಿ



ಪಶುಪಾಲನ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ.ಬಿ.ಎನ್.ಷಡಕ್ಷರ ಮೂರ್ತಿ ಹಾಗೂ ಸಿಬ್ಬಂದಿ ಮೈಸೂರು ಗೋಶಾಲೆಯಲ್ಲಿ ಇತ್ತೀಚೆಗೆ ವಿಘ್ನ ನಿವಾರಣ ಪೂಜೆ ಸಲ್ಲಿಸಿರುವುದು.


ಮೈಸೂರು, ಜು.17(ಜಿಎ)– ಮೈಸೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಗೋಶಾಲೆ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಶೀಘ್ರದಲ್ಲೇ ಲೋಕಾರ್ಪಣೆಗೊಳ್ಳಲಿದೆ.

ಪಶುಸಂಗೋಪನಾ ಇಲಾಖೆಯ ಪ್ರಮುಖ ಯೋಜನೆಗಳಲ್ಲಿ ಒಂದಾದ ಜಿಲ್ಲೆಗೊಂದು ಗೋಶಾಲೆ ಯೋಜನೆಯಡಿ ಮೈಸೂರಿನ ದೇವಲಾಪುರ ಬಳಿಯ ಆಯರಳ್ಳಿ ಗ್ರಾಮದಲ್ಲಿ 10 ಎಕರೆ ಪ್ರದೇಶದಲ್ಲಿ 1.85 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಗೋಶಾಲೆಯ ಕಾಮಗಾರಿಯೂ ಮುಕ್ತಾಯವಾಗಿ ಫೆನ್ಸಿಂಗ್ ಕಾರ್ಯ ಮಾತ್ರ ಅಂತಿಮ ಹಂತದಲ್ಲಿದ್ದು, ಸ್ವಾಂತ್ರತ್ಯೋತ್ಸವಕ್ಕೂ ಮುನ್ನ ಲೋಕಾರ್ಪಣೆಗೊಳ್ಳುವ ಸಾಧ್ಯತೆ ಇದೆ. ಈ ಗೋಶಾಲೆ ಮೂಲಕ ಮೈಸೂರು ಜಿಲ್ಲೆಯಲ್ಲಿರುವ ಬಿಡಾಡಿ ದನ, ಅಪಘಾತಕ್ಕೆ ಈಡಾಗಿರುವ ಪಶು, ಅಕ್ರಮವಾಗಿ ಸಾಗಿಸುವ ಪಶು, ಪೊಲೀಸರು ವಶಪಡಿಸಿಕೊಳ್ಳುವ ಪಶು ಮತ್ತು ಪಶುವಿನ ಮಾಲೀಕರು ಅವುಗಳನ್ನು ನೋಡಿಕೊಳ್ಳಲು ಸಾಧ್ಯವಾಗದಿದ್ದರೆ, ಅವುಗಳಿಗೂ ಔಷಧೋಪಚಾರ ಮಾಡಿ ಪೋಷಣೆ ಮಾಡಲು ಈ ಗೋಶಾಲೆಯು ಉಪಯುಕ್ತವಾಗಲಿದೆ.

ಆಯರಳ್ಳಿ ಗ್ರಾಮದಲ್ಲಿ ನಿರ್ಮಾಣಗೊಳ್ಳುತ್ತಿದ್ದ ಗೋಶಾಲೆಯ ಕಾಮಗಾರಿ ಸಂಪೂರ್ಣವಾಗಿ ಮುಗಿದಿದ್ದು, ಸುತ್ತಲೂ ಫೆನ್ಸಿಂಗ್ ಹಾಕುವ ಮತ್ತು ಸಣ್ಣ ಪುಟ್ಟ ಕೆಲಸಗಳು ಬಾಕಿ ಉಳಿದಿದ್ದು, ಆಗಸ್ಟ್ 15ರೊಳಗೆ ಸಚಿವರಿಂದ ಲೋಕಾರ್ಪಣೆಗೊಳ್ಳಲಿದೆ ಎಂದು ಪಶುಪಾಲನ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ.ಬಿ.ಎನ್.ಷಡಕ್ಷರ ಮೂರ್ತಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಗೋಶಾಲೆ 10 ಎಕರೆ ಪ್ರದೇಶದಲ್ಲಿ 1.85 ಕೋಟಿ ರೂ. ವೆಚ್ಚದೊಂದಿಗೆ ವ್ಯವಸ್ಥಿತವಾಗಿ ಎಲ್ಲಾ ಸೌಕರ್ಯಗಳನ್ನೊಳಗೊಂಡಂತೆ ನಿರ್ಮಾಣಗೊಂಡಿದೆ. ಇಲ್ಲಿಗೆ ಬರುವ ಪ್ರತಿಯೊಂದು ಹಸುವಿನ ಪೋಷಣೆ ಮಾಡಲು ಸರ್ಕಾರದ ವತಿಯಿಂದ 70 ರೂ.ಗಳನ್ನು ನೀಡಲಾಗುವುದು ನಮ್ಮ ಇಲಾಖೆ ವತಿಯಿಂದ ವಿವಿಧ ಸಂಘ ಸಂಸ್ಥೆಗಳ ಜೊತೆಗೂಡಿ ಅನುದಾನ ಪಡೆದುಕೊಂಡು ಉತ್ತಮ ರೀತಿಯಲ್ಲಿ ಪಶುಗಳನ್ನು ಪೋಷಿಸುವ ಗುರಿ ಹೊಂದಿದ್ದೇವೆ ಎಂದು ಷಡಕ್ಷರ ಮೂರ್ತಿ ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.07.2022 ಸೋಮವಾರ, ಮಳೆ ನಕ್ಷತ್ರ : ಪುನರ್ವಸು, 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ : ಧನಿಷ್ಠ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ, ಸೇಪಿಯಂಟ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು :** 2021–22ನೇ ಸಾಲಿನ ಚಾಮುಂಡಿ ವಲಯ ಅಂತರ ಕಾಲೇಜು ಫುಟ್‌ಬಾಲ್ ಪಂದ್ಯಾವಳಿ, ಸ್ಥಳ: ಮೈಸೂರು ವಿಶ್ವವಿದ್ಯಾನಿಲಯ ಫುಟ್‌ಬಾಲ್ ಮೈದಾನ, ಬೆಳಗ್ಗೆ 8 ಗಂಟೆಗೆ.

■ **ಅನ್ವೇಷಣಾ ಸೇವಾ ಟ್ರಸ್ಟ್ :** ಶ್ರೀಮಾನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರ 105ನೇ ಜನ್ಮ ದಿನೋತ್ಸವ, ಚಾಮುಂಡಿಬೆಟ್ಟದಲ್ಲಿ ನೂತನವಾಗಿ ನಿರ್ಮಿಸಿ ಲೋಕಾರ್ಪಣೆಗೊಂಡಿರುವ ಶ್ರೀ ಜಯಚಾಮರಾಜ ಒಡೆಯರ್ ಪುತ್ಥಳಿಗೆ ಮಾಲಾರ್ಪಣೆ, ರಾಜವಂಶಸ್ಥ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಂದ, ಉಪಸ್ಥಿತಿ: ಚಾಮುಂಡಿಬೆಟ್ಟದ ಗ್ರಾಪಂ ಅಧ್ಯಕ್ಷ ಭರತ್ ಕಾಳಯ್ಯ, ಪ್ರಧಾನ ಅರ್ಚಕರ ಶ್ರೀ ಶಶಿಶೇಖರ ದೀಕ್ಷಿತ್, ಸ್ಥಳ: ಚಾಮುಂಡಿಬೆಟ್ಟ, ಬೆಳಗ್ಗೆ 8 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಶ್ರೀ ಚಕ್ರ ಪೂಜೆ, ಮಹಾಗಣಪತಿ ಹೋಮ, ಬೆಳಗ್ಗೆ 7.30ಕ್ಕೆ, ಯೋಗ ವಸಿಷ್ಠ ಕುರಿತು ಪ್ರವಚನ, ವಿಶೇಷ ಕಾರ್ಯಕ್ರಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆ 8 ಗಂಟೆಗೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಶ್ರೀ ಜಯಚಾಮರಾಜೇಂದ್ರ ಒಡೆಯರ್ ಜಯಂತಿ, ಭಾವಚಿತ್ರಕ್ಕೆ ಪುಷ್ಪಾರ್ಚನೆ: ವಾಸವಿ ವಿದ್ಯಾನಿಕೇತನದ ಮುಖ್ಯೋಪಾಧ್ಯಾಯರಾದ ನಿರ್ಮಲಾ ಅವರಿಂದ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ವಾಸವಿ ವಿದ್ಯಾ ಕೇಂದ್ರ, ಕುವೆಂಪುನಗರ, ಬೆಳಗ್ಗೆ 9.30ಕ್ಕೆ.

■ **ಶ್ರೀ ವ್ಯಾಸರಾಜ ಮಠ (ಸೋಸಲೆ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ :** ಮಜ್ಜಯ ತೀರ್ಥ ಗುರು ಸಾರ್ವಭೌಮರ ಆರಾಧನಾ ಮಹೋತ್ಸವ, ಸಾನ್ನಿಧ್ಯ: ಶ್ರೀ ವ್ಯಾಸರಾಜ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶತೀರ್ಥ ಶ್ರೀ ಪಾದಂಗಳವರು, ಸ್ಥಳ: ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.30ರಿಂದ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಅಸೋಸಿಯೇಷನ್ ಆಫ್ ಫುಡ್ ಸೈಂಟಿಸ್ಟ್ಸ್ ಅಂಡ್ ಟೆಕ್ನಾಲಜೀಸ್ಟ್ (ಎಎಫ್‌ಎಸ್‌ಟಿಐ) :** ಆಜಾದಿಕಾ ಅಮೃತ ಮಹೋತ್ಸವ, ವಿಚಾರ ಸಂಕಿರಣ, ಸ್ಥಳ: ಸಿಎಸ್‌ಐಆರ್–ಸಿಎಫ್‌ಟಿಆರ್‌ಐನ ಐಎಫ್‌ಟಿಟಿಸಿ ಸಭಾಂಗಣ, ಬೆಳಗ್ಗೆ 10 ಗಂಟೆಗೆ.

■ **ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ :** ಶ್ರೀ ಜಯಚಾಮರಾಜ ಒಡೆಯರ್ ಅವರ ಜನ್ಮದಿನಾಚರಣೆ, ಶ್ರೀ ಜಯಚಾಮರಾಜ ಒಡೆಯರ್ ಅವರ ಪುತ್ಥಳಿ ಅನಾವರಣ, ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್‌ನ ಪೋಷಕರಾದ ಡಾ. ಶ್ರೀಮತಿ ಪ್ರಮೋದಾದೇವಿ ಒಡೆಯರ್ ಅವರಿಂದ, ಮುಖ್ಯ ಅತಿಥಿ: ಕುವೆಂಪು ಅಧ್ಯಯನ ಕೇಂದ್ರದ ಅತಿಥಿ ಉಪನ್ಯಾಸಕ ಡಾ. ಎನ್.ಎಸ್. ತಾರಾನಾಥ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷರು ಮತ್ತು ರಾಜವಂಶಸ್ಥರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಟ್ರಸ್ಟ್ ಕಚೇರಿ ಆವರಣ, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಬೆಳಗ್ಗೆ 10.30ಕ್ಕೆ

■ **ಶ್ರೀ ಕೃಷ್ಣ ಗಾನಸಭಾ :** ಶ್ರೀಮಾನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರ 104ನೇ ಜನ್ಮ ಮಹೋತ್ಸವ, ಮುಖ್ಯ ಅತಿಥಿಗಳು: ಶಾಸಕ ಎಲ್.ನಾಗೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ಕಾರ್ಯದರ್ಶಿ ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ: ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್, ಸಂಗೀತ ಕಾರ್ಯಕ್ರಮ, ಸ್ಥಳ: ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ, ಸಂಜೆ 6 ಗಂಟೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ: ಪುಷ್ಪ ಕುಟ್ಟಣ್ಣ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: 'ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು' ಲೇಖನ ಪ್ರಸ್ತುತಿ–ಡಿ.ಎನ್.ಶ್ರೀಪಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ರಾಘವೇಂದ್ರ, ಕೆ.ಬಿ.ಸುನೀತಾ ಆಚಾರ್ಯ, ಟಿ.ಎಸ್.ಸ್ನೇಹಾ, ವ್ಯಾಖ್ಯಾನ– ಡಾ. ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಚಿತ್ರಗೀತೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 9.45 'ಭಾಷಾ ಸೌಹಾರ್ದ ಹಾಗೂ ಸಾಹಿತ್ಯ' ಮಾತನಾಡುತ್ತಾರೆ ಸೈಯದ್ ಶಹಾಬುದ್ದೀನ್, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ: ಎಸ್.ಸುಬ್ರಹ್ಮಣ್ಯ, ಭಾಗವಹಿಸುವವರು: ಎಂ.ದ್ವಾರಕಾನಾಥ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.05 ವನಿತಾ ವಿಹಾರ: ಕೈ ತೋಟವನ್ನು ಹವ್ಯಾಸವಾಗಿಸಿಕೊಂಡ ಜಯಶ್ರೀ ಗದಗಕರ್ ಅವರೊಂದಿಗೆ ಮಾತುಕತೆ, 12.30 ಭಕ್ತಿಗೀತೆಗಳು–ಎನ್.ನಂಜುಂಡಸ್ವಾಮಿ, ಆರ್.ಗಿರೀಶ್, 12.45 ನಮ್ಮ ಆರೋಗ್ಯ: ಡೆಂಗ್ಯೂ ಷಾಕ್ ಸಿಂಡ್ರೋಮ್ ಕುರಿತು ಡಾ.ಸಂತೋಶ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು: ಅನುಪಮ ಎಂ., 4.00 ಮಹಿಳಾ ರಂಗ– 'ಆಕಾಶವಾಣಿ ಅಡುಗೆ ಮನೆ' ಪ್ರಸ್ತುತಿ–ಕೆ.ಬಿ.ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ. **ಸಂಜೆ:** 6.50 ಕೃಷಿರಂಗ: ಕೃಷಿ ವಿಜ್ಞಾನ ಕಲಿಕೆಯ ಹಾಗೂ ಉದ್ಯೋಗದ ಅವಕಾಶಗಳು ಕುರಿತು ಡಾ.ಎಸ್.ಎಸ್. ಪ್ರಕಾಶ್ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ.

ಭಾವಸಾರ ಕ್ಷತ್ರೀಯರು ಉದಾರ ದಾನಿಗಳು

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ



ಮೈಸೂರು, ಜು. 17 – ಭಾವಸಾರ ಕ್ಷತ್ರೀಯ ಸಮಾಜದಲ್ಲಿ ಉದಾರವಾಗಿ ದಾನ ನೀಡುವ ಹೃದಯವಂತರಿದ್ದು, ಇದೇ ರೀತಿ ಎಲ್ಲಾ ಸಮಾಜದಲ್ಲಿಯೂ ಉಳ್ಳವರು ಇಲ್ಲದವರಿಗೆ ದಾನ ಮಾಡಲು ಮನಸ್ಸು ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕರೆ ನೀಡಿದರು. ವಿಜಯನಗರ 3ನೇ ಹಂತದಲ್ಲಿರುವ ಶ್ರೀ ವಿಠ್ಠಲ ರುಕ್ಮಿಣಿ ಕನ್ವೆನ್ಷನ್ ಹಾಲ್‌ನಲ್ಲಿ ಮೈಸೂರು ಜಿಲ್ಲಾ ಭಾವಸಾರ ಕ್ಷತ್ರೀಯ ಪದವೀಧರರ ಸಂಘ ಹಾಗೂ ಶ್ರೀ ವಿಠ್ಠಲ ರುಕ್ಮಿಣಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ಸನ್ಮಾನ ಸಮಾರಂಭದಲ್ಲಿ ಪದವೀಧರರನ್ನು ಅಭಿನಂದಿಸಿ ಮಾತನಾಡಿದ ಅವರು, ಭಾವಸಾರ ಕ್ಷತ್ರೀಯ ಸಮಾಜದವರು ನಡೆಸುತ್ತಿರುವ ಶಾಲೆಯಲ್ಲಿ ಯಾವುದೇ ಜಾತಿ ಭೇದವಿಲ್ಲದೆ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದ್ದಾರೆ. ಆದರೆ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು ಕೆಲಸಕ್ಕೆ ಸೇರಿದ ಮೇಲೆ ನಿಮ್ಮ ತಂದೆ, ತಾಯಿ ಸಂಸಾರದ ಕಡೆ ಮಾತ್ರ ನೋಡಿಕೊಳ್ಳುತ್ತೀರಿ. ನೀವು ಓದಿದ ಶಾಲೆಗೆ ಏನಾದರು ಕೊಡುಗೆ ನೀಡಬೇಕು, ನಾನು ಓದುವ ಕಾಲದಲ್ಲಿ ಇಂತಹ ಸೌಲಭ್ಯವಿದ್ದರೆ ನಾನು ಸಹ ಪದವೀಧರನಾಗುತ್ತಿದ್ದೆ. ಆದುದರಿಂದ ಪ್ರತಿಯೊಬ್ಬ ಮನುಷ್ಯ ಹುಟ್ಟಿದ ಮೇಲೆ ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು. ವಿದ್ಯಾರ್ಥಿಗಳು ಈ ದೇಶದ ಸಂಪತ್ತು. ಆದ್ದರಿಂದ ಭವಿಷ್ಯದ ಉತ್ತಮ ಪ್ರಜೆಗಳಾಗಿ ಎಂದು ಹಾರೈಸಿದರು.

ಸಮಾರಂಭದಲ್ಲಿ ರಾಷ್ಟ್ರೀಯ ಅಧ್ಯಕ್ಷ ರಾಜು ಬಿ. ಜವಳ್ಕರ್, ರಾಜ್ಯಾಧ್ಯಕ್ಷ ಶ್ರೀನಿವಾಸರಾವ್ ಪಿಸ್ಸೆ, ಡಾ|| ಸೋಮಶೇಖರ್ ಪಿ.ಬಗರೆ, ಎಸ್. ಶಂಕರ್‌ರಾವ್ ಅಂಚಳಕರ್, ಜಿಲ್ಲಾ ಅಧ್ಯಕ್ಷ ಪಿ.ಎ. ಮಂಜುನಾಥ್ ಪತಂಗೆ, ಕಾರ್ಯದರ್ಶಿ ಡಿ.ಕೃಷ್ಣಬಗರೆ, ಖಜಾಂಚಿ ಜಯರಾವ್‌ರಾವ್ ಲಾಳಿಗೆ, ಡಿ.ನಾಗರಾಜು ಬಗರೆ ಉಪಸ್ಥಿತರಿದ್ದರು.

'ಕೇದಾರ್‌ತಾಲ್' ಚಾರಣ ಯಶಸ್ವಿಯಾಗಿ ಪೂರೈಸಿದ 25 ಚಾರಣಿಗರು




ಮೈಸೂರು, ಜು.17(ಎಂಕೆ)– ಹಿಮಾಲಯದ ಶಿಖರವೇರಿದ ಕಾವೇರಿ ಕಣಿವೆಯ 25 ಮಂದಿ ಚಾರಿಣಿಗರು 'ಕೇದಾರ್‌ತಾಲ್' ಚಾರಣವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.

ನಗರದ ಟೈಗರ್ ಅಡ್ವೆಂಚರ್ ಫೌಂಡೇಶನ್ ಹಾಗೂ ಮೌಂಟೇನ್ ಗೋಟ್ ಸಂಸ್ಥೆಯಿಂದ ಆಯೋಜಿಸಿದ್ದ ಕೇದಾರ್‌ತಾಲ್‌ಗೆ ಟ್ರೆಕ್ಕಿಂಗ್‌ನಲ್ಲಿ ಮೈಸೂರು, ಬೆಂಗಳೂರು, ಹಾಸನ, ಚಾಮರಾಜ ನಗರ ಸೇರಿ ಹಲವು ಜಿಲ್ಲೆಗಳ 25 ಮಂದಿ ಯಶಸ್ವಿಯಾಗಿ ಕೇದಾರ್‌ತಾಲ್ ಚಾರಣ ಪೂರ್ಣಗೊಳಿಸಿದ್ದಾರೆ.

ಟೈಗರ್ ಅಡ್ವೆಂಚರ್ ಫೌಂಡೇಶನ್‌ನ ಟೈಗರ್ ಸೋಲಂಕಿ ನೇತೃತ್ವದಲ್ಲಿ ಕೈಗೊಂಡಿದ್ದ ಚಾರಣಕ್ಕಾಗಿ ಹಲವಾರು ದಿನ ತರಬೇತಿ ನೀಡಲಾಗಿತ್ತು. ತರಬೇತಿ ಪಡದ ಗೃಹಿಣಿಯರು, ನಾನಾ ವೃತ್ತಿಗಳಲ್ಲಿ ತೊಡಗಿಕೊಂಡಿದ್ದವರು ಕಷ್ಟದ ಪರಿಸ್ಥಿತಿಯಲ್ಲಿಯೂ ಕೇದಾರ್‌ತಾಲ್ ಶಿಖರವೇರಿ 5200 ಮೀಟರ್ ಎತ್ತರದಲ್ಲಿರುವ ಸ್ವರ್ಗ ಸದೃಶವನ್ನು ಕಣ್ತುಂಬಿಗೊಂಡಿದ್ದಾರೆ.

ಎಂ.ಮೋಹನ್ ಕುಮಾರ್, ಡಾ.ರಶ್ಮಿ, ಡಾ.ಹರ್ಷಾರಾಣಿ, ಡಾ.ತನುಶ್ರೀ ಜೆನಾ, ಡಾ.ಸಂತೋಷ್, ಎಸ್.ಪ್ರಕಾಶ್, ಮಂಜುನಾಥ್ ನಾಯಕ್, ಸುಧಾ ಸತೀಶ್, ಪೂರ್ಣ, ಹರೀಶ್ ರಮೇಶ್, ಮಾನಸ ವಿನಯ್, ಉಮೇಶ, ಕೃಷ್ಣಪ್ಪ ಹರ್ಷವರ್ಧನ್, ರಮ್ಯಶ್ರೀ, ನಿಯತಾ, ದೀಪ್ತಿ ಪ್ರಸಾದ್, ಧನುಷಾ, ಸವಿತಾ ಮಂದಿ ಸೋಮಶೇಖರ್, ಪ್ರತಿಭಾ ಹೆಗ್ಗಡೆ, ಮಲ್ಲಿಕಾ ಸಿದ್ದವೀರಪ್ಪ, ಗೀತಾ ರಾಮು, ಅನಿತಾ ಶ್ರೀಧರ್ ಚಾರಣದಲ್ಲಿ ಭಾಗವಹಿಸಿದವರಾಗಿದ್ದಾರೆ. 2019 ರಲ್ಲಿ 2019 ರಲ್ಲಿ ಕೇದಾರ್‌ತಾಲ್ ಪ್ರಕಾಶ್ ಕೌಡಿನ್ಯ ಚಾರಣದಲ್ಲಿ ಪಾಲ್ಗೊಂಡಿದ್ದರು.

ಪಂತ್ ಅಬ್ಬರ: ಭಾರತಕ್ಕೆ ಏಕದಿನ ಸರಣಿ



ಹಾರ್ದಿಕ್ ಪಾಂಡ್ಯ ಸರಣಿ ಶ್ರೇಷ್ಠ, ರಿಷಬ್ ಪಂತ್ ಪಂದ್ಯ ಶ್ರೇಷ್ಠ


ಮ್ಯಾಂಚೆಸ್ಟರ್, ಜು.17– ರಿಷಬ್ ಪಂತ್ ಅವರ ಭರ್ಜರಿ ಶತಕ ಹಾಗೂ ಹಾರ್ದಿಕ್ ಪಾಂಡ್ಯ ಅವರ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧದ ಅಂತಿಮ ಪಂದ್ಯದಲ್ಲಿ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ 3 ಪಂದ್ಯಗಳ ಏಕದಿನ ಸರಣಿಯನ್ನು 2–1 ಅಂತರದಲ್ಲಿ ತನ್ನದಾಗಿಸಿಕೊಂಡಿದೆ.

ಇಲ್ಲಿನ ಓಲ್ಡ್ ಟ್ರಾಫರ್ಡ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 45.5 ಓವರ್‌ಗಳಲ್ಲಿ 259 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಜೇಸನ್ ರಾಯ್ 41 ರನ್ ಗಳಿಸಿದರಾದರೂ, ಇಂಗ್ಲೆಂಡ್ 74 ರನ್ ಆಗುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ನಾಯಕನಿಗೆ ತಕ್ಕ ಆಟವಾಡಿದ ಜೋಸ್ ಬಟ್ಲರ್ 2 ಸಿಕ್ಸರ್, 3 ಸಿಕ್ಸರ್ ಒಳಗೊಂಡ 60 ರನ್ ಗಳಿಸಿ ಔಟಾದರು. ಉಳಿದಂತೆ ಬೆನ್ ಸ್ಟೋಕ್ಸ್ 27, ಮೊಯಿನ್ ಅಲಿ 34, ಲಿವಿಂಗ್‌ಸ್ಟೋನ್ 27, ಡೇವಿಡ್ ವಿಲ್ಲಿ 18, ಕ್ರೇಗ್ ಓವರ್‌ಟನ್ 32 ರನ್ ಗಳಿಸಿದರು. ಭಾರತದ ಪರ ಹಾರ್ದಿಕ್ ಪಾಂಡ್ಯ 4, ಯುಜುವೇಂದ್ರ ಚಹಲ್ 3, ಮೊಹಮ್ಮದ್ ಸಿರಾಜ್ 2, ರವೀಂದ್ರ ಜಡೇಜಾ 1 ವಿಕೆಟ್ ಪಡೆದರು.

260 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 42.1 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 261 ರನ್ ಗಳಿಸುವ ಮೂಲಕ ಗೆಲುವಿನ ದಡ ಸೇರಿತು. ತಂಡದ ಮೊತ್ತ 38 ರನ್ ಆಗುವಷ್ಟರಲ್ಲೇ ಭಾರತ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಒಂದಾದ ರಿಷಬ್ ಪಂತ್ ಹಾಗೂ ಸೂರ್ಯ ಕುಮಾರ್ ಯಾದವ್ 34 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಅಲ್ಪ ಚೇತರಿಕೆ ನೀಡಿದರಾದರೂ 16 ರನ್ ಗಳಿಸಿದ್ದ ಯಾದವ್ ವಿಕೆಟ್ ಒಪ್ಪಿಸಿದರು. ನಂತರ ಕ್ರೀಸ್‌ಗೆ ಆಗಮಿಸಿದ ಹಾರ್ದಿಕ್ ಪಾಂಡ್ಯ ಪಂತ್ ಜೊತೆಗೂಡಿ 5ನೇ ವಿಕೆಟ್‌ಗೆ 133 ರನ್‌ಗಳ ಜೊತೆಯಾಟವಾಡಿದರು. ಈ ವೇಳೆ 10 ಬೌಂಡರಿ ಒಳಗೊಂಡ 71 ರನ್ ಗಳಿಸಿದ್ದ ಪಾಂಡ್ಯ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ಪಂತ್ 113 ಎಸೆತಗಳಲ್ಲಿ 2 ಸಿಕ್ಸರ್, 16 ಬೌಂಡರಿ ಒಳಗೊಂಡ ಅಜೇಯ 125 ರನ್ ಗಳಿಸಿ ತಂಡಕ್ಕೆ ಗೆಲುವು ತಂದು ಕೊಟ್ಟರು. ಉಳಿದಂತೆ ಶಿಖರ್ ಧವನ್ 1, ನಾಯಕ ರೋಹಿತ್ ಶರ್ಮಾ 17, ವಿರಾಟ್ ಕೊಹ್ಲಿ 17, ರವೀಂದ್ರ ಜಡೇಜಾ 7 ರನ್ ಗಳಿಸಿದರು. ಇಂಗ್ಲೆಂಡ್ ಪರ ರೀಸ್ ಟಾಪ್ಲಿ 3, ಬ್ರೈಡನ್ ಕಾರ್ಸ್, ಕ್ರೆಗ್ ಓವರ್‌ಟನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ರಿಷಬ್ ಪಂತ್ ಪಂದ್ಯಶ್ರೇಷ್ಠ, ಹಾರ್ದಿಕ್ ಪಾಂಡ್ಯ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಆಗಸದಲ್ಲಿ ಬಣ್ಣದ ಚಿತ್ತಾರ ಮೂಡಿಸಿದ ರಂಗು ರಂಗಿನ ಗಾಳಿಪಟಗಳು





ಮೈಸೂರು, ಜು.17(ಎಂಕೆ)– ಬಾನಂಗಳದಲಿ ಬಣ್ಣದ ಹಾಳೆಯ ಗಾಳಿಪಟಗಳ ಕಲರವ... ಮುಸ್ಸಂಜೆಯ ತಣ್ಣನೆಯ ಗಾಳಿಯಲ್ಲಿ ಗಾಳಿಪಟಗಳನ್ನು ಹಾರಿಸಿ ಸಂಭ್ರಮಿಸಿದ ಕ್ಷಣ...!

ಮೈಸೂರಿನ ಲಲಿತಮಹಲ್ ಹೋಟೆಲ್ ಬಳಿಯ ಹೆಲಿಪ್ಯಾಡ್ ಸಮೀಪದ ಮೈದಾನದಲ್ಲಿ ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಆಯೋಜಿಸಿದ್ದ 24ನೇ ವರ್ಷದ ಗಾಳಿಪಟ ಸ್ಪರ್ಧೆಯಲ್ಲಿ ಬಣ್ಣ ಬಣ್ಣದ ಗಾಳಿಪಟಗಳು ಮುಗಿಲೆತ್ತರಕ್ಕೆ ಹಾರಿ ಪೈಪೋಟಿ ನಡೆಸಿದವು. ಚಿಕ್ಕದಾದ, ದೊಡ್ಡದಾದ, ಬಾಲವಿರುವ ಹಾಗೂ ಬಾಲವಿಲ್ಲದ ದೇಶ ಮತ್ತು ವಿದೇಶ ಸಂಸ್ಕೃತಿಯ ಗಾಳಿಪಟಗಳು ಗಮನ ಸೆಳೆದವು.

ಸುಂದರ, ಅಲಂಕಾರಿಕ, ದೊಡ್ಡದಾದ ಹಾಗೂ ಅತೀ ದೂರಕ್ಕೆ ಹಾರುವ ಗಾಳಿಪಟಗಳನ್ನು ಹಾರಿಸಿದ 500ಕ್ಕೂ ಹೆಚ್ಚು ಮಂದಿ ಗಾಳಿಪಟ ಪ್ರಿಯರು, ಗಾಳಿಪಟಗಳನ್ನು ತೇಲಿಸಿ ಸಂಭ್ರಮಿಸಿದರಲ್ಲದೆ ಅತೀ ದೂರಕ್ಕೆ ಪಟ ಹಾರಿಸುವುದರ ಜೊತೆಗೆ ದೊಡ್ಡದಾದ ಪಟಗಳನ್ನು ತಯಾರಿಸಿ, ಹಾರಿಸಿ ಖುಷಿಪಟ್ಟರು.

ಪುನೀತ್ ಅಭಿಮಾನ: ಮೈಸೂರಿನ ಕುವೆಂಪುನಗರದ ನಿವಾಸಿ ನಾಗರಾಜ್ 15 ಅಡಿ ಎತ್ತರದ ಡಾ.ಪುನೀತ್ ರಾಜ್‌ಕುಮಾರ್ ಭಾವಚಿತ್ರವುಳ್ಳ ಗಾಳಿಪಟ ತಯಾರಿಸಿ ಬಾನಂಗಳದಲ್ಲಿ ಹಾರಿಸಿ ಅಭಿಮಾನ ತೋರಿದರು. ಅಲ್ಲದೆ ಮತ್ತೊಬ್ಬರು ತಮ್ಮ ಗಾಳಿಪಟ್ಟಕ್ಕೆ ಪುನೀತ್ ಫೋಟೊ ಅಂಟಿಸಿ ಗಾಳಿಯಲ್ಲಿ ತೇಲಿಸಿದರು.

ಚಿಕ್ಕ ಗಾಳಿಪಟಗಳದ್ದೇ ಕಾರುಬಾರು: ಗಾಳಿಪಟ ಸ್ಪರ್ಧೆಯಲ್ಲಿ ರಂಗು ರಂಗಿನಿಂದ ಕೂಡಿದ್ದ ಚಿಕ್ಕ ಗಾಳಿಪಟಗಳ ಹಾರಾಟವೇ ಜೋರಾಗಿತ್ತು. ಎತ್ತರಕ್ಕೆ ಹಾರಿದ್ದ ಗಾಳಿಪಟಗಳು ಮೋಡಗಳಿಗೆ ಮುತ್ತಿಡುವ ಪ್ರಯತ್ನವನ್ನು ನಡೆಸಿದವು. ಇನ್ನೂ ದೊಡ್ಡ ಗಾಳಿಪಟಗಳು ಗಾಳಿಯ ವೇಗ ಹೆಚ್ಚಾಗಿದ್ದ ಸಂದರ್ಭದಲ್ಲಿ ಮಾತ್ರವೇ ಒಂದಷ್ಟು ಎತ್ತರಕ್ಕೆ ಹಾರಿ ನೋಡುಗರನ್ನು ನಿಬ್ಬೆರಗಾಗುವಂತೆ ಮಾಡಿದವು.

ಸಂಭ್ರಮ: 2 ವರ್ಷದ ಬಳಿಕ ಗಾಳಿಪಟ ಹಾರಿಸುವುದಕ್ಕೆ ಬಂದಿದ್ದವರ ಮೊಗದಲ್ಲಿ ಮಂದಹಾಸ ಮೂಡಿತ್ತು. ಸುಂದರ ಮುಸ್ಸಂಜೆಯ ವೇಳೆ ಎಲ್ಲರೂ ಮೈಮರೆತು ಗಾಳಿಪಟ ಹಾರಿಸಿದರು. ನನ್ನ ಪಟವೇ ಗೆಲ್ಲಬೇಕು ಎಂದು ಸ್ಪರ್ಧೆಗಿಳಿದವರು ಗಾಳಿಪಟದ ದಾರ ಬಿಗಿ ಹಿಡಿದು ಮುಗಿಲೆತ್ತರಕ್ಕೆ ಹಾರಿಸಿದರು.

ಬಹುಮಾನ ವಿತರಣೆ: ಭಾರತೀಯ ಶೈಲಿ ಗಾಳಿಪಟ ವಿಭಾಗದಲ್ಲಿ ಜ್ಯೋತಿ ಪ್ರಭುದೇವ್ ಪ್ರಥಮ, ಭವಾನಿ ಶಿವಕುಮಾರ್ ದ್ವಿತೀಯ, ನಿಶ್ಚಯ್ ತೃತೀಯ ಬಹುಮಾನ ಪಡೆದರೆ, ವಿದೇಶಿ ಶೈಲಿ ವಿಭಾಗದಲ್ಲಿ ಪ್ರಥಮ್ ಕಂಠಿ ಪ್ರಥಮ, ನಾಗರಾಜ್ (ಆಟೋ ನಾಗರಾಜ್) ದ್ವಿತೀಯ ಹಾಗೂ ಎಂ.ಮನೋಹರ್ ತೃತೀಯ ಬಹುಮಾನ ಪಡೆದುಕೊಂಡರು.

ದೊಡ್ಡ ಗಾಳಿಪಟ(ಬಾಲ ಇರುವುದು) ವಿಭಾಗದಲ್ಲಿ ನಾಗರಾಜ್ ಪ್ರಥಮ, ಯು.ಮನೋಹರ್ ದ್ವಿತೀಯ, ಶರತ್ ನಾಗರಾಜ್ ತೃತೀಯ ಬಹುಮಾನ ಗೆದ್ದರೆ, ಬಾಲವಿಲ್ಲದ ದೊಡ್ಡ ಗಾಳಿಪಟ ಸ್ಪರ್ಧೆಯಲ್ಲಿ ಪ್ರಭು ದೇವಾ ಪ್ರಥಮ, ಸುಷ್ಮಾ ದ್ವಿತೀಯ ಬಹುಮಾನ ಪಡೆದರು. ಅತೀದೂರ ಹಾರಿದ ಬಾಲವಿರುವ ಗಾಳಿಪಟ ಸ್ಪರ್ಧೆಯಲ್ಲಿ ವಿನಯ್ ಪ್ರಥಮ, ಪ್ರಾಣೇಶ್ ಕುಮಾರ್ ದ್ವಿತೀಯ, ಸುಷ್ಮಾ ತೃತಿಯ ಬಹುಮಾನ ಪಡೆದರೆ, ಬಾಲ ಇಲ್ಲದ ಅತೀ ದೂರ ಹಾರಿದ ಗಾಳಿಪಟ ವಿಭಾಗದಲ್ಲಿ ಸುಷ್ಮಾ ಪ್ರಥಮ, ಲೋಕೇಶ್ ದ್ವಿತೀಯ ಹಾಗೂ ಪ್ರಥಮ್ ಕಂಠಿ ತೃತೀಯ ಬಹುಮಾನ ಜಯಿಸಿದರು.

ಗಾಳಿಪಟ ಸ್ಪರ್ಧೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅಂಡರ್‌ವಾಟರ್ ಮತ್ತು ವೈಲ್ಡ್‌ಲೈಫ್ ಫೋಟೋಗ್ರಾಫರ್ ಎಂ.ಎನ್.ನಂದಕುಮಾರ್ ಬಹುಮಾನ ವಿತರಣೆ ಮಾಡಿದರು. ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಸ್.ರಮಾನಂದ, ಮಾಜಿ ಉಪಾಧ್ಯಕ್ಷ ಎಸ್.ಆರ್. ಜಗದೀಶ್, ಎನ್.ದಿನೇಶ್, ಅನಿಲ್ ಮತ್ತಿತರು ಉಪಸ್ಥಿತರಿದ್ದರು.

ಕೈಗಾರಿಕಾ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆ ಅನಾವರಣ

ಮೇಯರ್ ಸುನಂದಾ ಪಾಲನೇತ್ರ



ಮೈಸೂರು,ಜು.17(ಎಂಟಿವೈ)– ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ ಸಂಸ್ಥೆಯ ಮಹಿಳಾ ಘಟಕವಾದ ಸ್ಫೂರ್ತಿ ಸಂಸ್ಥೆಯು ಕುವೆಂಪು ನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಭಾನುವಾರ ಮಹಿಳಾ ಉದ್ಯಮಿಗಳಿಗಾಗಿ ಆಯೋಜಿಸಿದ್ದ 'ಸ್ಫೂರ್ತಿ ಜಾತ್ರೆ'ಯಲ್ಲಿ ಮಹಿಳಾ ಉದ್ಯಮಿಗಳು ಪಾಲ್ಗೊಂಡು ಗಮನ ಸೆಳೆದರು.

ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಆಯೋಜಿಸಿದ್ದ ಸ್ಫೂರ್ತಿ ಜಾತ್ರೆಯನ್ನು ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಕೈಗಾರಿಕಾ ಕ್ಷೇತ್ರದಲ್ಲಿ ಸಾಧನೆ ಮಾಡುವ ಮೂಲಕ ತಮ್ಮ ಪ್ರತಿಭೆಯನ್ನು ಅನಾವರಣ ಮಾಡುತ್ತಿದ್ದಾರೆ. ಈ ಹಿಂದೆ ಪುರುಷ ಉದ್ಯಮಿಗಳ ಹಿಂದೆ ಮಹಿಳೆಯರು ಇರುತ್ತಿದ್ದರು ಎಂದು ಹೇಳಲಾಗುತ್ತಿತ್ತು. ಆದರೆ, ಈಗ ಪುರುಷರಿಗೆ ಸರಿಸಮಾನವಾಗಿ ಮಹಿಳೆಯರು ಉದ್ಯಮಿಗಳಾಗಿ ಹೊರ ಹೊಮ್ಮಿದ್ದಾರೆ. ಹಲವು ಉದ್ಯಮಗಳನ್ನು ಮಹಿಳೆಯರೇ ಮುನ್ನಡೆಸುತ್ತಿದ್ದಾರೆ. ಮಹಿಳೆಯರು ಯಶಸ್ಸಿನ ಹಾದಿಯಲ್ಲಿ ಸಾಗುತ್ತಿರುವುದು ಒಳ್ಳೆಯ ಬೆಳವಣಿಗೆ. ಈ ಹಿನ್ನೆಲೆಯಲ್ಲಿ ಮಹಿಳೆಯರು ಇನ್ನಷ್ಟು ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

53 ಮಳಿಗೆ: ಸ್ಫೂರ್ತಿ ಜಾತ್ರೆಯಲ್ಲಿ 53 ಮಳಿಗೆಗಳನ್ನು ತೆರೆಯಲಾಗಿತ್ತು. ಮೈಸೂರು, ಬೇಲೂರು, ಮದ್ದೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದಲೂ ಮಹಿಳಾ ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ತಂದು ಪ್ರದರ್ಶನಕ್ಕಿಟ್ಟಿದ್ದರು. ಅಲ್ಲದೇ, ರಾಜಸ್ಥಾನದಿಂದಲೂ ಮೂವರು ಉದ್ಯಮಿಗಳು ಉಡುಪು ಸೇರಿದಂತೆ ಇನ್ನಿತರ ಕೈಮಗ್ಗದ ಉತ್ಪನ್ನಗಳನ್ನು ತಂದು ಮಾರಾಟ ಮಾಡಿದರು.

ಸ್ಫೂರ್ತಿ ಮಹಿಳಾ ಘಟಕವು ನಡೆಸುತ್ತಿರುವುದರಿಂದ 7ನೇ ವರ್ಷದ ಸ್ಫೂರ್ತಿ ಜಾತ್ರೆಯದ್ದಾಗಿದೆ. ಉಡುಪುಗಳು, ಆಭರಣ, ಫ್ಯಾಷನ್ ಮತ್ತು ಸೌಂದರ್ಯ ಪರಿಕರ, ಗೃಹಾಲಂಕಾರ, ಸಜ್ಜುಗೊಳಿಸುವ ಪರಿಕಲ್ಪನೆ, ಕುಂಬಾರಿಕೆ, ಹಸಿರು ಪರಿ ಕಲ್ಪನೆ, ಉಡುಗೊರೆ, ಕಲಾಕೃತಿ, ಫುಡ್‌ಕೋರ್ಟ್ ಸೇರಿದಂತೆ ಇನ್ನಿತರ ಉತ್ಪನ್ನಗಳನ್ನು ಮಾರಾಟಕ್ಕಿಡಲಾಗಿತ್ತು. ಬೆಳಗ್ಗಿನಿಂದ ಸಂಜೆವರೆಗೂ ನಡೆದ ಪ್ರದರ್ಶನ ಮೇಳದಲ್ಲಿ ನೂರಾರು ಮಂದಿ ಗ್ರಾಹಕರು ಪಾಲ್ಗೊಂಡಿದ್ದರು. ಗ್ರಾಹಕರು ತಮಗೆ ಇಷ್ಟವಾದ ವಸ್ತುಗಳನ್ನು ಖರೀದಿಸಲು ಮುಗಿ ಬಿದ್ದಿದ್ದರಿಂದ ಉದ್ಯಮಿಗಳಿಗೆ ಉತ್ತಮ ವ್ಯಾಪಾರವಾಯಿತು.

ಈ ಸಂದರ್ಭದಲ್ಲಿ ಸ್ಫೂರ್ತಿ ಸಂಸ್ಥೆಯ ಅಧ್ಯಕ್ಷೆ ವಾಣಿ ಸುಬ್ರಹ್ಮಣ್ಯ, ಕಾರ್ಯದರ್ಶಿ ನಂದಾ ರತ್ನರಾಜ್, ಪದಾಧಿಕಾರಿಗಳಾದ ರೇಖಾ ಯೋಗನರಸಿಂಹ, ಶ್ವೇತಾ ದಿನೇಶ್, ಮಾಧುರಿ ಮಲ್ಲಿನಾಥ್, ಸಂಧ್ಯಾರಾಣಿ, ರೀನಾ ಪಾಲ್, ಪುಷ್ಪಾಸ್ವಾಮಿ ಸೇರಿದಂತೆ ಇನ್ನಿತರರು ಹಾಜರಿದ್ದರು.

10ನೇ ತರಗತಿ ಪರೀಕ್ಷಾ ಫಲಿತಾಂಶ ಪ್ರಕಟ

ನವದೆಹಲಿ, ಜು.17– ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್ (CISCE) 10 ನೇ ತರಗತಿಯ ಇಂಡಿಯನ್ ಸರ್ಟಿಫಿಕೇಟ್ ಆಫ್ ಸ್ಕೂಲ್ ಎಕ್ಸಾಮ್ (ICSE) ಫಲಿತಾಂಶವನ್ನು ಜುಲೈ 17ರಂದು ಸಂಜೆ 5 ಗಂಟೆಗೆ ಪ್ರಕಟಿಸಿದೆ. ಮಂಡಳಿಯು ತನ್ನ ಅಧಿಕೃತ ವೆಬ್‌ಸೈಟ್ – cisce.orgನಲ್ಲಿ ಶೀಘ್ರದಲ್ಲೇ ಟಾಪರ್‌ಗಳ ಪಟ್ಟಿಯನ್ನು ಬಿಡುಗಡೆಯಾಗಲಿದೆ.

4 ವಿದ್ಯಾರ್ಥಿಗಳು ಶೇಕಡಾ 99.8 ಅಂಕಗಳೊಂದಿಗೆ ಉನ್ನತ ಶ್ರೇಣಿಯನ್ನು ಹಂಚಿಕೊಂಡಿದ್ದಾರೆ, 34 ಮಂದಿ ಶೇಕಡಾ 99.6 ರೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

ICSE ಬೋರ್ಡ್ 2020 ಮತ್ತು 2021 ರಲ್ಲಿ ಟಾಪರ್‌ಗಳ ಪಟ್ಟಿಯನ್ನು ಬಿಡುಗಡೆ ಮಾಡಲಿಲ್ಲ. 2020ರಲ್ಲಿ 2,15,036 ವಿದ್ಯಾರ್ಥಿಗಳಲ್ಲಿ ಒಟ್ಟು 2,06,525 ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದರು. 2021ರಲ್ಲಿ, ಒಟ್ಟಾರೆ ಉತ್ತೀರ್ಣ ಪ್ರಮಾಣ ಶೇ. 99.98 ರಷ್ಟಿತ್ತು.



ರೋಟರಿ ಸೆಂಟ್ರಲ್ ಮೈಸೂರ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜರುಗಿತು. ಸಂಸ್ಥೆಯ ನೂತನ ಅಧ್ಯಕ್ಷರಾಗಿ ರೊ. ಡಾ. ಪ್ರತಾಪ್ ಶೆಟ್ಟಿ ಅವರಿಗೆ ಪದಗ್ರಹಣ ಅಧಿಕಾರಿಯಾಗಿ ರೊ. ಅನಿಲ್ ಪದಕಿ ಅಧಿಕಾರ ವಹಿಸಿಕೊಟ್ಟರು. ಕಾರ್ಯದರ್ಶಿ ರೊ. ಸಚ್ಚಿದಾನಂದ ಹೆಗಡೆ, ಎಜಿ ರೊ. ವೆಂಕಟೇಶ್, ಪಿಡಿಜಿ ರೊ. ಶಿವಣ್ಣ, ಉಪಾಧ್ಯಕ್ಷ ರೊ. ವಿಜೇಂದ್ರ, ಪದಾಧಿಕಾರಿಗಳಾದ ರೊ. ಕಿಶೋರ್ ಸಾರ್ಜೆಂಟ್, ಜಂಟಿ ಕಾರ್ಯದರ್ಶಿ ರೊ. ವಿವೇಕ್ ಅತಾವರ್, ಖಜಾಂಚಿ ರೊ. ಪ್ರೇಮ್ ಸಾಗರ್, ರೊ. ಉಮೇಶ್, ರೊ. ಅಂತೋಣಿ ಮೋಸಸ್, ಜಂಟಿ ಕಾರ್ಯದರ್ಶಿ ರೊ. ರಾಮ್ ಮೋಹನ್, ರೊ. ಸಮರ್ಥ್ ವೈದ್ಯ, ರೊ. ಕಿರಣ್ ಲೋಖಂಡೆ, ರೊ. ಅನುಭವ್ ರಾಸ್ತೋಬಿ, ರೊ. ದಿನೇಶ್ ಸೋಮಸುಂದರ್, ರೊ. ಜಯಪ್ರಕಾಶ್ ಹಾಗೂ ಗುರುಪ್ರಸಾದ್ ಉಪಸ್ಥಿತರಿದ್ದರು.

ಸೇನಾ ಹೆಲಿಕಾಪ್ಟರ್‌ಗಳನ್ನು ಅಭಿವೃದ್ಧಿಪಡಿಸಲು ಖಾಸಗಿ ಕಂಪನಿಗಳಿಗೆ ಅನುಮತಿ

ನವದೆಹಲಿ, ಜು.17– ಭಾರತೀಯ ಮಿಲಿಟರಿ ಹಾರ್ಡ್‌ವೇರ್ ವಲಯದಲ್ಲಿ 'ಆತ್ಮ ನಿರ್ಭರ ಭಾರತ್'ಗೆ ಉತ್ತೇಜನ ನೀಡಲು ರಕ್ಷಣಾ ಸಚಿವಾಲಯ ಮುಂದಾಗಿದ್ದು, ಅದಕ್ಕಾಗಿ ರಕ್ಷಣಾ ಸ್ವಾಧೀನ ಪ್ರಕ್ರಿಯೆ (DAP) ಕೈಪಿಡಿಯನ್ನು ತಿದ್ದುಪಡಿ ಮಾಡಲು ನಿರ್ಧರಿಸಿದೆ. ಇದರೊಂದಿಗೆ ಖಾಸಗಿ ವಲಯವು ಭಾರತೀಯ ರಕ್ಷಣಾ PSUಗಳೊಂದಿಗೆ (ಸಾರ್ವಜನಿಕ ವಲಯದ ಉದ್ಯಮ) ಅಗತ್ಯವಿರುದ್ಧ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಲು ಅನುವು ಮಾಡಿಕೊಡುತ್ತದೆ ಎಂದು ವರದಿಯಾಗಿದೆ.

ಅಧಿಕಾರಿಗಳ ಪ್ರಕಾರ, ಉದ್ಯಮದಲ್ಲಿನ ಈ ಸಹಯೋಗವನ್ನು ಭಾರತೀಯ ಮಲ್ಟಿ–ರೋಲ್ ಹೆಲಿಕಾಪ್ಟರ್ (IMRH) ತಯಾರಿಕೆ ಮತ್ತು ಅಭಿವೃದ್ಧಿಯಲ್ಲಿ ಪರೀಕ್ಷಿಸಲಾಗುತ್ತದೆ. ಅಂತಿಮವಾಗಿ ಭಾರತೀಯ ಮಿಲಿಟರಿಯ ಪ್ರಸ್ತುತ ದಾಸ್ತಾನುಗಳಲ್ಲಿ ರಷ್ಯಾದ ನಿರ್ಮಿತ ಎಲ್ಲಾ Mi–17 ಮತ್ತು Mi–8 ಹೆಲಿಕಾಪ್ಟರ್‌ಗಳನ್ನು ಬದಲಾಯಿಸುತ್ತದೆ. ಇದರೊಂದಿಗೆ ವಾಯು ದಾಳಿ, ಜಲಾಂತರ್ಗಾಮಿ ನೌಕೆಗಳು, ಮಿಲಿಟರಿ ಸಾರಿಗೆ ಹಾಗೂ ಮೊದಲಾದ ವಿಭಾಗಗಳಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

ವಿದ್ಯಾರ್ಥಿನಿ ಆತ್ಮಹತ್ಯೆ: ತಮಿಳುನಾಡಿನ ಕಲ್ಲಕುರಿಚಿಯಲ್ಲಿ ತೀವ್ರ ಹಿಂಸಾಚಾರ

ಕಲ್ಲಕುರಿಚಿ(ತಮಿಳುನಾಡು), ಜು.17– ವಿದ್ಯಾರ್ಥಿನಿಯ ಸಾವಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿ ನಡೆಯುತ್ತಿದ್ದ ಪ್ರತಿಭಟನೆ ಹಿಂಸಾರೂಪಕ್ಕೆ ತಿರುಗಿ ಪ್ರತಿಭಟನಾಕಾರರು ಶಾಲಾ ಆವರಣಕ್ಕೆ ನುಗ್ಗಿ ಶಾಲಾ ಬಸ್ಸು ಮತ್ತು ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಿ ದಾಂಧಲೆ ನಡೆಸಿದ್ದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದ ಘಟನೆ ತಮಿಳುನಾಡಿನ ಕಲ್ಲಕುರಿಚಿ ಜಿಲ್ಲೆಯ ಕನ್ನಿಯಮೂರಿನಲ್ಲಿ ಭಾನುವಾರ ನಡೆದಿದೆ.

ಖಾಸಗಿ ಶಾಲೆಯಲ್ಲಿ ಶಿಕ್ಷಕರ ಕಿರುಕುಳ ತಾಳಲಾರದೆ 12ನೇ ತರಗತಿ ವಿದ್ಯಾರ್ಥಿನಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹೇಳಲಾಗುತ್ತಿದ್ದು, ತಮಿಳುನಾಡು ಶಾಲಾ ಶಿಕ್ಷಣ ಇಲಾಖೆ ಘಟನೆಗೆ ಸಂಬಂಧಿಸಿದಂತೆ ವಿವರವಾದ ವರದಿ ನೀಡುವಂತೆ ಮುಖ್ಯ ಶಿಕ್ಷಣಾಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಕಲ್ಲಕುರಿಚಿಯ ಚಿನ್ನಸೇಲಂ ಎಂಬಲ್ಲಿ ಪೊಲೀಸರು ಹಾಕಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿ ಪ್ರತಿಭಟನಾಕಾರರು ಶಾಲೆಯ ಆವರಣದೊಳಗೆ ನುಗ್ಗಿದ ಪ್ರತಿಭಟನಾಕಾರರು ಅಲ್ಲಿ ನಿಲ್ಲಿಸಿದ್ದ ಶಾಲಾ ಬಸ್ಸುಗಳ ಕಿಟಕಿ ಗಾಜುಗಳನ್ನು ಮುರಿದು ಬೆಂಕಿ ಹಚ್ಚಿದರು. ಬಸ್ಸಿನ ಮೇಲೆ ಏರಿ ಕೇಕೆ ಹಾಕುತ್ತಾ, ಆಕ್ರೋಶ ವ್ಯಕ್ತಪಡಿಸುತ್ತಾ ಧ್ವಂಸ ಮಾಡಿದರು. ಹಲವು ಬಸ್ಸುಗಳು ತಲೆಕೆಳಗಾಗಿ ಬಿದ್ದವು. ಬೆಂಕಿ ಹಚ್ಚಿದ್ದರಿಂದ ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿತು.

ಪರಿಸ್ಥಿತಿಯನ್ನು ತಿಳಿಗೊಳಿಸಲು ಕಲ್ಲಕುರಿಚಿ ಜಿಲ್ಲಾ ಪೊಲೀಸರು ಲಾಠಿಪ್ರಹಾರ ಮಾಡಿದರು. ಅಶ್ರುವಾಯು ಸಿಡಿಸಿದರು. ಆಗ ಪ್ರತಿಭಟನಾಕಾರರು ಪೊಲೀಸ್ ಸಿಬ್ಬಂದಿ ಮೇಲೆ ಕಲ್ಲು ತೂರಾಟ ನಡೆಸಿದರು. ಘಟನೆಯಲ್ಲಿ ಡಿಐಜಿ ಎಂ.ಪಾಂಡಿಯಾನ್ ಸೇರಿದಂತೆ 20ಕ್ಕೂ ಹೆಚ್ಚು ಪೊಲೀಸರು ಗಾಯಗೊಂಡಿದ್ದಾರೆ. 13ಕ್ಕೂ ಹೆಚ್ಚು ಬಸ್ಸುಗಳಿಗೆ ಬೆಂಕಿ ಹಚ್ಚಿ ಕೆಲವು ಬಸ್ಸುಗಳನ್ನು ಜಖಂಗೊಳಿಸಿದ್ದಾರೆ.

ರಮ್ಮನಹಳ್ಳಿಯಲ್ಲಿ 'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಕಾರ್ಯಕ್ರಮಕ್ಕೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ

ಗ್ರಾಮಸ್ಥರ ದೂರುಗಳಿಗೆ ಸ್ಪಂದಿಸಿದ ಶಾಸಕರು; ಸಮಸ್ಯೆಗಳ ನಿವಾರಣೆಗೆ ಸ್ಥಳದಲ್ಲೇ ಅಧಿಕಾರಿಗಳಿಗೆ ಸೂಚನೆ



ಮೈಸೂರು, ಜು.17 (ಆರ್‌ಕೆಬಿ)– ಗ್ರಾಮೀಣ ಜನತೆ ಕಛೇರಿಗಳಿಗೆ ಹೋಗುವ ಬದಲು ಅಧಿಕಾರಿಗಳೆ ಗ್ರಾಮಗಳಿಗೆ ಬಂದು ಜನರ ಸಮಸ್ಯೆ ಆಲಿಸಿ ಸ್ಥಳದಲ್ಲಿಯೇ ಪರಿಹಾರ ಒದಗಿಸುವ ಕಾರ್ಯಕ್ರಮ ಉತ್ತಮವಾದದ್ದು ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ರಮ್ಮನಹಳ್ಳಿಯಲ್ಲಿ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಗ್ರಾಮದ ಕೆರೆ ಅಭಿವೃದ್ಧಿಪಡಿಸುವಂತೆ ರಮ್ಮನಹಳ್ಳಿ ಗ್ರಾಮಸ್ಥರ ಕೋರಿಕೆಯಂತೆ ಸ್ಥಳ ಪರಿಶೀಲನೆ ನಡೆಸಿದರು. ಕೆರೆ ಸರ್ವೆ ಮಾಡಿ, ಒತ್ತುವರಿ ತೆರವುಗೊಳಿಸುವಂತೆ ತಹಸೀಲ್ದಾರ್, ಎಡಿಎಲ್‌ಆರ್ ಮತ್ತು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗೆ ಸೂಚನೆ ನೀಡಿದರು.

ಹದಿನೈದು ಸಾವಿರ ಜನಸಂಖ್ಯೆ ಇರುವ ರಮ್ಮನಹಳ್ಳಿ ಗ್ರಾಮಕ್ಕೆ ಸೂಕ್ತ ಬಸ್ ಸೌಲಭ್ಯವಿಲ್ಲದ ಬಗ್ಗೆ ಗ್ರಾಮಸ್ಥರು ಶಾಸಕರ ಗಮನ ಸೆಳೆದರು. ಇದಕ್ಕೆ ಸ್ಪಂದಿಸಿದ ಶಾಸಕರು ಗ್ರಾಮಸ್ಥರ ಕೋರಿಕೆಯಂತೆ ಗ್ರಾಮಕ್ಕೆ ಕೂಡಲೇ ಅಗತ್ಯ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸಾತಗಳ್ಳಿ ಬಸ್ ಡಿಪೋ ವ್ಯವಸ್ಥಾಪಕರಿಗೆ ಸ್ಥಳದಲ್ಲಿಯೇ ಸೂಚನೆ ನೀಡಿದರು.

ಬೆಳಕು ಯೋಜನೆಯಡಿ ರಮ್ಮನಹಳ್ಳಿ ಗ್ರಾಮದಲ್ಲಿ ಕೇವಲ 10 ಜನರಿಗೆ ಮಾತ್ರ ಮೀಟರ್ ನೀಡಿದ್ದು, ಅವಶ್ಯವಿರುವರೆಗೆ ಬೆಳಕು ಯೋಜನೆಯಡಿ ಮೀಟರ್ ನೀಡಲು ಶಾಸಕರು ಸೆಸ್ಕಾಂ ಅಧೀಕ್ಷಕ ಅಭಿಯಂತರರಿಗೆ ತಿಳಿಸಿದರು.

ಅಕ್ಷರ ದಾಸೋಹ ಯೋಜನೆಯಡಿ ಶಾಲೆಯಲ್ಲಿ ಅಡುಗೆ ನಿರ್ಮಾಣ ಮಾಡಲು ನೀಡಲಾಗಿದ್ದ 6 ಲಕ್ಷ ಅನುದಾನದಲ್ಲಿ 1 ಲಕ್ಷ ರೂ. ಖರ್ಚು ಮಾಡಿ ಬಾಕಿ ಹಣ ದುರಪಯೋಗವಾಗಿರುವ ಬಗ್ಗೆ ಗ್ರಾಮಸ್ಥರು ಶಾಸಕರಲ್ಲಿ ದೂರಿದರು. ಈ ಬಗ್ಗೆ ಕೂಡಲೇ ತನಿಖೆ ನಡೆಸಿ ವರದಿ ನೀಡಿ, ತಪ್ಪು ಮಾಡಿದವರ ಮೇಲೆ ಕ್ರಮಕೈಗೊಳ್ಳುವಂತೆ ಜಿಪಂ ಸಿಇಓಗೆ ದೂರವಾಣಿ ಮೂಲಕ ಸೂಚಿಸಿದರು.

ಬಿಸಿಯೂಟದಲ್ಲಿ ಹುಳು: ಶಾಲಾ ಮಕ್ಕಳಿಗೆ ನೀಡಲಾಗುವ ಬಿಸಿಯೂಟದಲ್ಲಿ ಹುಳುಗಳಿರುವ ಬಗ್ಗೆ ಪೋಷಕರು ದೂರಿಗೆ ಸ್ಪಂದಿಸಿದ ಶಾಸಕರು, ತನಿಖೆ ನಡೆಸಿ ಕ್ರಮಕೈಗೊಳ್ಳಲು ಬಿಇಓ ಆಗೂ ತಾಪಂ ಇಓಗೆ ಸೂಚಿಸಿದರು. ಆಸ್ಪತ್ರೆಯಲ್ಲಿ ಕೊರತೆಯಿರುವ ಸ್ಟಾಫ್ ನರ್ಸ್‌ಗಳನ್ನು ಕೂಡಲೇ ಸ್ಥಳ ನಿಯುಕ್ತಿಗೊಳಿಸಲು ಡಿಹೆಚ್‌ಓಗೆ ತಿಳಿಸಿದರು.

ಮುಡಾ ವತಿಯಿಂದ ಬಾಕಿಯಿರುವ ಒಳಚರಂಡಿ, ಎಸ್‌ಟಿಪಿ ಚರಂಡಿ ಮತ್ತು ರಸ್ತೆ ನಿರ್ಮಾಣಕ್ಕೆ 3 ಕೋಟಿ ರೂ. ಅನುದಾನ ಒದಗಿಸಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿದೆ. ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ವಾಣಿ ವಿಲಾಸದಿಂದ ರಮ್ಮನಹಳ್ಳಿಗೆ ಸರಿಯಾಗಿ ನೀರು ಪೂರೈಸದೆ ತೊಂದರೆಯಾಗುತ್ತಿರುವುದರಿಂದ ಸರಿಯಾಗಿ ನೀರು ಪೂರೈಸುವಂತೆ ಹಾಗೂ ಅಗತ್ಯವಿರುವ ಕಡೆ ಒಂದು ಟ್ಯಾಂಕ್ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ವಾಣಿವಿಲಾಸ ಇಇ ಸುವರ್ಣ ಅವರಿಗೆ ಶಾಸಕ ಜಿ.ಟಿ.ದೇವೇಗೌಡರು ಸೂಚಿಸಿದರು.

ಇದಕ್ಕೂ ಮೊದಲು 50 ಲಕ್ಷ ರೂ.ವೆಚ್ಚದಲ್ಲಿ ರಮ್ಮನಹಳ್ಳಿ ಗ್ರಾಮದ ಪರಿಮಿತಿಯಲ್ಲಿ ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಹಾಗೂ 25 ಲಕ್ಷ ರೂ. ಅನುದಾನದಲ್ಲಿ ನಾಲೆ ಏರಿ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗಿರೀಶ್, ತಾಪಂ ಇಒ ರಮೇಶ್, ಬಿಇಒ ಮಹೇಶ್ವರಿ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಪುಷ್ಪಲತಾ ಇನ್ನಿತರರು ಉಪಸ್ಥಿತರಿದ್ದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	123.24 ಅಡಿ
ಒಳಹರಿವು	77154 ಕ್ಯೂಸೆಕ್
ಹೊರಹರಿವು	84509 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಭಾನುವಾರ	2283.00 ಅಡಿ
ಒಳ ಹರಿವು	34000 ಕ್ಯೂಸೆಕ್
ಹೊರ ಹರಿವು	33500 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಭಾನುವಾರ	2854.40 ಅಡಿ
ಒಳ ಹರಿವು	9080 ಕ್ಯೂಸೆಕ್
ಹೊರ ಹರಿವು	10000 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಭಾನುವಾರ	2920.30 ಅಡಿ
ಒಳ ಹರಿವು	34867 ಕ್ಯೂಸೆಕ್
ಹೊರ ಹರಿವು	34816 ಕ್ಯೂಸೆಕ್

ನಕ್ಕರೆ ಅದೇ ಸ್ವರ್ಗ

ಸೂಪರ್‌ವೈಸರ್ : (ಪರೀಕ್ಷಾ ಹಾಲ್‌ನಲ್ಲಿ) ಯಾಕಮ್ಮ ರೀಟಾ, ಕಣ್ಣು ಮುಚ್ಚಿಕೊಂಡು ಕುಳಿತಿದ್ದೀಯಾ?

ರೀಟಾ : ಪ್ರಶ್ನೆ ಅರ್ಥವಾಗದಿದ್ದರೆ ಪರೀಕ್ಷೆ ಹಾಲ್‌ನಲ್ಲಿ ಕಣ್ ಕಣ್ ಬಿಡುತ್ತಾ ಕೂರಬೇಡ ಅಂತ ನಮ್ಮಪ್ಪ ಹೇಳಿದ್ದಾರೆ, ಅದಕ್ಕೆ...

ಮೈಸೂರು ಮಿತ್ರ

ಸೋಮವಾರ, 18 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಮ್ಮ ಕೈಯಿಂದ ನಮ್ಮ ಬೆನ್ನು ತಟ್ಟಿಕೊಳ್ಳಲು ಸಾಧ್ಯವಾಗದೆ ಇರಬಹುದು, ಆದರೆ ಬೇರೆಯವರು ನಮ್ಮ ಬೆನ್ನು ತಟ್ಟುವಂತೆ ಕೆಲಸ ಮಾಡಬಹುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಳೆದು ಹೋದ ಹೊತ್ತು, ಒಡೆದ ಮುತ್ತು ಮರಳಿ ಸಿಗದು.

ನಿಮ್ಮ ಪತ್ರಗಳು

ಯಾರಿಗೆ ಬೇಕು ನಿಮ್ಮ ಉತ್ಸವಗಳು...

ಮಾನ್ಯರೆ,

ಸಿದ್ದರಾಮಯ್ಯ ಉತ್ಸವ, ಡಿ.ಕೆ. ಶಿವಕುಮಾರ್ ಉತ್ಸವ, ಈಗ ಬೊಮ್ಮಾಯಿ ಉತ್ಸವ ಅಂತೆ. ಯಾರಿಗೆ ಬೇಕು ನಿಮ್ಮ ಉತ್ಸವಗಳು, ಮೊದಲು ಜನಪರ ಕೆಲಸಗಳನ್ನು ಮಾಡಿ.

ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿ ಜನಸಾಮಾನ್ಯರು ಜೀವನ ನಡೆಸುವುದೇ ದುಸ್ತರವಾಗಿದೆ. ಜೊತೆಗೆ ರಾಜ್ಯದ ನಾನಾ ಭಾಗಗಳಲ್ಲಿ ಮಳೆ ಸುರಿದು ಜನರು ಅತಂತ್ರ ಸ್ಥಿತಿಯಲ್ಲಿ ಪರಿತಪಿಸುತ್ತಿದ್ದಾರೆ. ಇದರೊಂದಿಗೆ ನಾನಾ ಕಾರಣಗಳಿಂದ ದೇಶ-ರಾಜ್ಯ ಹೊತ್ತಿ ಉರಿಯುತ್ತಿದೆ. ಈ ಮಧ್ಯೆ ಉತ್ಸವಗಳಂತೆ ಉತ್ಸವ... ನಾಚಿಕೆಯಾಗಬೇಕು.

ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ಜನರ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲ. ತಪ್ಪು ದಾರಿಗೆ ಹೋಗುವ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು ಸರಿದಾರಿಗೆ ತರಬೇಕಾದ ಪ್ರತಿಪಕ್ಷವೂ ಮುಂದಿನ ಚುನಾವಣೆ ಮೇಲೆ ಕಣ್ಣಿಟ್ಟು ಉತ್ಸವಗಳ ಮೂಲಕ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದೆ. ಆದರೆ ಸರ್ಕಾರ ತಾನೇನು ಕಮ್ಮಿ ಇಲ್ಲ ಎಂದು ಅದೂ ಸಹ ಶಕ್ತಿ ಪ್ರದರ್ಶನಕ್ಕೆ ಸಿದ್ಧತೆ ನಡೆಸಿದೆ.

ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಬೊಮ್ಮಾಯಿ ಉತ್ಸವಗಳಿಂದ ಯಾರಿಗೆ ಪ್ರಯೋಜನ. ರಾಜ್ಯ ಮತ್ತು ದೇಶಕ್ಕೆ ಏನಾದರೂ ಅನುಕೂಲವಾಗುವುದೇ. ಜನ ಸಾಮಾನ್ಯರ ಜೀವನದ ಬಗ್ಗೆ ತಲೆ ಕೆಡಿಸಿಕೊಳ್ಳದ ಜನ ನಾಯಕರು ಯಾವ ಪುರುಷಾರ್ಥಕ್ಕಾಗಿ ಉತ್ಸವ ನಡೆಸುತ್ತಿದ್ದಾರೆ. ಮೊದಲು ಅದನ್ನು ಸ್ಪಷ್ಟಪಡಿಸಿ. ನಿಮ್ಮ ಉತ್ಸವಗಳು ನಮಗೆ ಬೇಡ.

ಜನರು ನೆಮ್ಮದಿಯಾಗಿ ಜೀವನ ನಡೆಸಲು ಅನುಕೂಲ ಮಾಡಿಕೊಡಿ. ಅಷ್ಟೇ ಸಾಕು. ನಮ್ಮ ಜನರು ಕೂಡ ಇಂತಹ ಉತ್ಸವಗಳಿಗೆ ಮತ್ತು ನಾಯಕರುಗಳಿಗೆ ಸೊಪ್ಪು ಹಾಕಬಾರದು. ಉತ್ಸವಗಳಿಗೆ ಖರ್ಚು ಮಾಡುವ ಹಣವನ್ನು ಮಳೆಯಿಂದ ಮನೆ-ಮಠ, ಆಸ್ತಿ-ಪಾಸ್ತಿ ಕಳೆದುಕೊಂಡವರಿಗೆ ವಿನಿಯೋಗಿಸಿ ಪುಣ್ಯ ಕಟ್ಟಿಕೊಳ್ಳಿ. ಯಾರೇ ಬಂದರೂ ಬಡವರ ಬದುಕು ಮೂರಾಬಟ್ಟೆ ಎನ್ನುವಂತೆ ಮಾಡಬೇಡಿ ಎಂದು ಕೋರುತ್ತೇನೆ.

– ಅನುರಾಧ ಶ್ರೀನಿವಾಸ್, ಅಗ್ರಹಾರ, ಮೈಸೂರು.

ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ವೇಗಮಿತಿ ಇರಲಿ

ಮಾನ್ಯರೆ,

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ದ್ವಿಚಕ್ರ ವಾಹನಗಳು ಮತ್ತು ಕಾರುಗಳು ಅತೀ ವೇಗದಲ್ಲಿ ಚಲಿಸುತ್ತಿದ್ದು, ಇದರಿಂದ ಪ್ರತಿನಿತ್ಯ ಹತ್ತಾರು ಅಳಿಲುಗಳು ಚಕ್ರದಡಿ ಸಿಲುಕಿ ಪ್ರಾಣ ಬಿಡುತ್ತಿವೆ. ಕೆಲವು ದಿನಗಳ ಹಿಂದೆ ನನ್ನ ಕಣ್ಮುಂದೆ ಅಳಿಲೊಂದು ದ್ವಿಚಕ್ರ ವಾಹನ ಚಕ್ರಕ್ಕೆ ಸಿಕ್ಕಿ ಅಪ್ಪಚ್ಚಿಯಾಯ್ತು. ಅದನ್ನು ನೋಡಿ ನನಗೆ ದುಃಖವಾಗಿ ಈ ಪತ್ರ ಬರೆಯಬೇಕಾಯಿತು.

ಅಳಿಲು ಸುಂದರವಾದ, ನಿರುಪದ್ರವಿ ಪ್ರಾಣಿ. ತ್ರೇತಾಯುಗದಲ್ಲಿ ಶ್ರೀರಾಮ ಸೀತಾನ್ವೇಷಣೆಗೆ ಲಂಕೆಗೆ ಹೊರಟಾಗ ಸಮುದ್ರಕ್ಕೆ ಸೇತುವೆ ನಿರ್ಮಾಣಕ್ಕೆ ಮುಂದಾದಾಗ ವಾನರ (ಕೋತಿ)ಗಳ ಜೊತೆ ಅಳಿಲು ಕೂಡ 'ಶ್ರೀರಾಮ ಸೇತುವೆ'ಗೆ ಸಹಕರಿಸಿತ್ತು. ಜೊತೆಗೆ ಶ್ರೀರಾಮನ ಕೃಪಾಶೀರ್ವಾದಕ್ಕೆ ಪಾತ್ರವಾಗಿತ್ತು. ಅಂತಹ ಅಳಿಲು ಇಂದು ಅಳಿವಿನ ಅಂಚಿನಲ್ಲಿದೆ. ಪ್ರತಿನಿತ್ಯ 20ಕ್ಕೂ ಹೆಚ್ಚು ಅಳಿಲು ದ್ವಿಚಕ್ರ, ಕಾರುಗಳ ಅಡಿ ಸಿಲುಕಿ ಸಾಯುತ್ತಿವೆ. ಮೈಸೂರು ವಿವಿ ಕುಲಪತಿಗಳು ದಯಮಾಡಿ ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ವೇಗ ಮಿತಿಗೊಳಿಸಬೇಕು. ಇಲ್ಲದಿದ್ದರೆ ಮತ್ತಷ್ಟು ಅಪಾಯ ಸಂಭವಿಸಲಿದೆ. ಕ್ಯಾಂಪಸ್‌ನಲ್ಲಿ 730 ಸಿಸಿ ಕ್ಯಾಮರಾಗಳಿದ್ದು, ಆ ಮೂಲಕ ವೇಗಮಿತಿ ಪಾಲಿಸದ ವಾಹನ ಸವಾರರಿಗೆ ದಂಡ ವಿಧಿಸಬೇಕು. ಅಳಿಲುಗಳನ್ನು ಉಳಿಸಬೇಕು ಎಂದು ಈ ಮೂಲಕ ಮನವಿ ಮಾಡುತ್ತೇನೆ.

– ಜಿ. ನಾಗೇಂದ್ರ ಶರ್ಮ, ಸಾಮಾಜಿಕ ಕಾರ್ಯಕರ್ತ, ಕುವೆಂಪುನಗರ, ಮೈಸೂರು.

ಮೈಸೂರು ನಗರ ಫುಟ್‌ಪಾತ್ ಅಂಗಡಿಗಳನ್ನು ತೆರವುಗೊಳಿಸಲಿ

ಮಾನ್ಯರೆ,

ಮೈಸೂರಿನ ಹೃದಯ ಭಾಗಗಳಾದ ಸಯ್ಯಾಜಿರಾವ್ ರಸ್ತೆ, ಚಿಕ್ಕ ಗಡಿಯಾರ, ದೊಡ್ಡ ಗಡಿಯಾರ, ಕೆ.ಆರ್. ಸರ್ಕಲ್, ಮೈಸೂರಿನ ಇನ್ನೂ ಇತರೆ ಜನನಿಬಿಡ ರಸ್ತೆ ಬದಿಯ ಫುಟ್‌ಪಾತ್‌ಗಳನ್ನು ಅತಿಕ್ರಮಿಸಿಕೊಂಡು ಬಟ್ಟೆ, ಚಪ್ಪಲಿ, ಸ್ವೆಟರ್, ತರಕಾರಿ ಇನ್ನು ಮುಂತಾದ ಅಗತ್ಯ ವಸ್ತುಗಳ ವ್ಯಾಪಾರ ಮಾಡಲಾಗುತ್ತಿದೆ. ಜನರು ಫುಟ್‌ಪಾತ್ ಬಿಟ್ಟು ರಸ್ತೆಯಲ್ಲಿ ಓಡಾಡಬೇಕಾಗಿದೆ. ಯಾವ ಪೊಲೀಸರೂ ಈ ಬಗ್ಗೆ ಕೇಳುವುದಿಲ್ಲ.

ಫುಟ್‌ಪಾತ್ ಮಾಡಿರುವುದು ಜನರು ಓಡಾಡಲು, ವ್ಯಾಪಾರ ಮಾಡಲು ಅಲ್ಲ ಎಂಬ ಕನಿಷ್ಠ ಜ್ಞಾನವು ಇದ್ದಂತಿಲ್ಲ. ಪೊಲೀಸರು ತೀರ ಒಳ್ಳೆಯವರಾದರೆ ರಸ್ತೆಯನ್ನೇ ಅಕ್ರಮಿಸಿ ವ್ಯಾಪಾರ ಮಾಡುವವರು ಇಲ್ಲದಿಲ್ಲ. ಜನನಿಬಿಡ ಪ್ರದೇಶಗಳಲ್ಲಿ ಫುಟ್‌ಪಾತ್ ಅಕ್ರಮಿಸಿಕೊಂಡರೆ ಜನ ಓಡಾಡುವುದಾದರೂ ಹೇಗೆ. ನಗರ ಪೊಲೀಸ್ ಆಯುಕ್ತರು, ಒಮ್ಮೆ ಈ ಸ್ಥಳಗಳಿಗೆ ಭೇಟಿ ನೀಡಿ ಫುಟ್‌ಪಾತ್ ಅಂಗಡಿಗಳನ್ನು ತೆರವುಗೊಳಿಸಲು ಕಠಿಣ ಕ್ರಮಗಳನ್ನು ತೆಗೆದುಕೊಂಡು ಮೈಸೂರು ನಗರದ ಸೌಂದರ್ಯ ಹೆಚ್ಚಿಸಲಿ ಹಾಗೂ ಜನರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲಿ. ವ್ಯಾಪಾರಿಗಳಿಗೆ ಬೇರೆ ಜಾಗದಲ್ಲಿ ಅವಕಾಶ ನೀಡಲಿ ಎಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

– ಬಿ.ಜಿ. ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.

ಅಪಾಯದಿಂದ ಪಾರು ಮಾಡಿ...

ಮಾನ್ಯರೆ,

ಮೈಸೂರಿನ ಸಿಎಫ್‌ಟಿಆರ್‌ಐನ 2ನೇ ಬಡಾವಣೆಗೆ ಸೇರಿದ ಪಾರ್ಕ್ ಜಾಗದ ಮೂಲೆಯಲ್ಲಿ 30ರಿಂದ 40 ವರ್ಷಗಳಷ್ಟು ಹಳೆಯ ಆಲದ ಮರ ಬೆಳೆದು ಭಾರೀ ಗಾತ್ರದ ಕೊಂಬೆಗಳು ಮರದ ಬುಡಕ್ಕೆ ಭಾರವಾಗಿ ಒಂದೇ ಕಡೆ ಬಾಗಿ ಅಪಾಯದ ಸ್ಥಿತಿಯಲ್ಲಿದೆ. ಸತತ ಮಳೆಯಿಂದ ಭೂಮಿ ಸಡಿಲಗೊಂಡು ಬೀಳುವ ಸಂಭವವಿದೆ. ಹಾಗೂ "ಹೈ ಟೆನ್ಷನ್" ವೈಯರ್ ಹಾದು ಹೋಗಿರುವುದರಿಂದ ಅಪಾಯದ ಸೂಚನೆ ಕಾಣುತ್ತಿದೆ.

ಇದೇ ರೀತಿ ಹಳೆಯ ಮರವೊಂದು ಬೆಂಗಳೂರಿನ ನೆಲಮಂಗಲದಲ್ಲಿ ಇತ್ತೀಚೆಗೆ ರಾತ್ರಿ ಸಮಯದಲ್ಲಿ ಉರುಳಿ ಬಿದ್ದು ಮೂವರು ಸಾವನ್ನಪ್ಪಿರುವುದನ್ನು ಟಿವಿಯಲ್ಲಿ ನೋಡಿರುತ್ತೇವೆ. ಇದರಿಂದ ನಿವಾಸಿಗಳಿಗೆ ಭಯ ಕಾಡುತ್ತಿದೆ. ಆದ್ದರಿಂದ ಮಹಾನಗರ ಪಾಲಿಕೆಯ ಅಧಿಕಾರಿಗಳು ಎಚ್ಚರಿಕೆ ವಹಿಸಿ, ಅಪಾಯದ ಅಂಚಿನಲ್ಲಿರುವ ಆಲದ ಮರದ ಭಾರೀ ಗಾತ್ರದ ಕೊಂಬೆಗಳನ್ನು ಅಥವಾ ಮರವನ್ನು ತೆರವುಗೊಳಿಸಬೇಕೆಂದು ಸಾರ್ವಜನಿಕರ ಪರವಾಗಿ ಹಾಗೂ ಸಿಎಫ್‌ಟಿಆರ್‌ಐ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ ಮನವಿ ಮಾಡುತ್ತೇನೆ.

– ಜಿ. ಶಂಕರ್‌ರಾವ್, ಸಿಎಫ್‌ಟಿಆರ್‌ಐ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಮೈಸೂರು.

ರಾಷ್ಟ್ರ ಲಾಂಛನ ಗೌರವದ ಪ್ರತೀಕ



ಸಾಮಾನ್ಯವಾಗಿ ಸ್ವತಂತ್ರ ರಾಷ್ಟ್ರಗಳು ರಾಷ್ಟ್ರ ಗೌರವದ ಪ್ರತೀಕವಾಗಿ ತಮ್ಮದೆ ರಾಷ್ಟ್ರ ಲಾಂಛನಗಳಾದ ರಾಷ್ಟ್ರ ಪಕ್ಷಿ, ರಾಷ್ಟ್ರ ಗೀತೆ, ರಾಷ್ಟ್ರ ಹಾಡು, ರಾಷ್ಟ್ರ ಧ್ವಜ, ರಾಷ್ಟ್ರ ಹಣ್ಣು, ರಾಷ್ಟ್ರ ನದಿ, ರಾಷ್ಟ್ರ ಹೂವು, ರಾಷ್ಟ್ರ ಪ್ರಾಣಿ, ರಾಷ್ಟ್ರ ಮರ, ರಾಷ್ಟ್ರ ಜಲಚರ ಅಲ್ಲದೆ ತಮ್ಮದೇ ದೇಶದ ಅಗತ್ಯವಾದ ಗುರುತುಗಳನ್ನು ಹೊಂದಿ ಪ್ರತೀ ಹಂತದಲ್ಲೂ ಪ್ರಜೆಗಳಲ್ಲಿ ರಾಷ್ಟ್ರೀಯ ಮನೋಭಾವನ್ನು ಉಂಟು ಮಾಡುತ್ತವೆ.

ಅಂತೆಯೇ ಭಾರತದಲ್ಲೂ ರಾಷ್ಟ್ರ ಲಾಂಛನವಾಗಿ ಅಶೋಕ ಸ್ತಂಭ, ರಾಷ್ಟ್ರ ಪಕ್ಷಿಯಾಗಿ ನವಿಲು, ರಾಷ್ಟ್ರ ಗೀತೆ ಜನಗಣಮನ, ರಾಷ್ಟ್ರ ಹಾಡು ವಂದೇಮಾತರಂ, ತ್ರಿವರ್ಣದ ರಾಷ್ಟ್ರ ಧ್ವಜ, ರಾಷ್ಟ್ರ ಹಣ್ಣು ಮಾವು, ರಾಷ್ಟ್ರ ಪ್ರಾಣಿ ಹುಲಿ, ರಾಷ್ಟ್ರ ನದಿ ಗಂಗಾ, ರಾಷ್ಟ್ರ ಹೂವು ತಾವರೆ, ರಾಷ್ಟ್ರ ಮರ ಆಲದಮರ, ರಾಷ್ಟ್ರ ಜಲಚರವಾಗಿ ಡಾಲ್ಫಿನ್‌ಗಳನ್ನು ಹೊಂದಿರುವುದು ಹೆಮ್ಮೆಯ ಸಂಕೇತ. ರಾಷ್ಟ್ರ ಘೋಷಣೆಯಾಗಿ 'ಸತ್ಯ ಮೇವ ಜಯತೇ' ವಾಕ್ಯವನ್ನು ಹೊಂದಿದೆ.

ದೇಶದ ಕೇಂದ್ರ ಹಾಗೂ ಎಲ್ಲಾ ರಾಜ್ಯ ಸರ್ಕಾರಗಳೂ ಸಹ ತಮ್ಮ ಆಡಳಿತದ ವಿವಿಧ ಹಂತಗಳಲ್ಲಿ ಇವುಗಳನ್ನು ಬಳಕೆ ಮಾಡುತ್ತವೆ. ಅಲ್ಲದೆ ಗೌರವದ ಪ್ರತೀಕವಾಗಿ ರಾಷ್ಟ್ರ ಲಾಂಛನವಾದ ಅಶೋಕ ಸ್ತಂಭದ ಚಿತ್ರವನ್ನು ಸರ್ಕಾರಿ ಪತ್ರಗಳಲ್ಲಿಯು, ಭಾರತದ ಪಾಸ್‌ಪೋರ್ಟ್, ನಿತ್ಯ ಬಳಕೆಯ ಭಾರತೀಯ ನೋಟು ಮತ್ತು ನಾಣ್ಯಗಳಲ್ಲಿಯೂ ಕಾಣಬಹುದಾಗಿದೆ.

ಸ್ವಾತಂತ್ರ್ಯದ ನಂತರ ಪ್ರಥಮ ಪ್ರಧಾನಮಂತ್ರಿ ಜವಹರಲಾಲ್ ನೆಹರು ಅವರು ರಾಷ್ಟ್ರ ಲಾಂಛನವನ್ನು ಜಾರಿಗೆ ತರಲು ಬನಾರ್ಸ್ ಹಿಂದೂ ವಿಶ್ವವಿದ್ಯಾಲಯದ ಇತಿಹಾಸ ತಜ್ಞ, ಭಾರತದ ಶಿಲ್ಪ ಕಲಾಕೃತಿಯ ಬಗ್ಗೆ ಅಪಾರ ಜ್ಞಾನ ಹೊಂದಿದ ವಿ.ಎಸ್.ಅಗರವಾಲ್ ಅವರಿಗೆ ರಾಷ್ಟ್ರ ಲಾಂಛನದ ಆಯ್ಕೆಯ ಜವಾಬ್ದಾರಿಯನ್ನು ನೀಡಿದ್ದರು. ತಮ್ಮ ಅನುಭವದ ಮೇರೆಗೆ ವಿ.ಎಸ್.ಅಗರವಾಲ್ ಅವರು ಭಾರತದ ಉತ್ತರ ಪ್ರದೇಶದ ವಾರಣಾಸಿ ಬಳಿಯ ಸಾರನಾಥದಲ್ಲಿನ Lion Capital of Ashoka ನಾಲ್ಕು ಮುಖದ ಸಿಂಹ ಸ್ತಂಭವನ್ನು ರಾಷ್ಟ್ರ ಲಾಂಛನವನ್ನಾಗಿ ಶಿಫಾರಸ್ಸು ಮಾಡಿದರು.

ನಂತರ ಲಾಂಛನವನ್ನು ಚಿತ್ರಿಸುವ ಕೆಲಸವನ್ನು ವಿಶ್ವವಿದ್ಯಾಲಯದ ನಂದಲಾಲ್ ಬೋಸ್ ಮತ್ತು ದೀನನಾಥ ಭಾರ್ಗವ ಅವರು ಅಂತಿಮಗೊಳಿಸಿದರು. ನಂತರ ಡಿಸೆಂಬರ್ 1947ರಲ್ಲಿ ಭಾರತದ ಲಾಂಛನವಾಗಿ ಅಧಿಕೃತವಾಗಿ ಅಶೋಕ ಸ್ತಂಭದ ಚಿತ್ರವನ್ನು ಆಯ್ಕೆಮಾಡಿ 26-01-1950 ರಿಂದ ರಾಷ್ಟ್ರ ಲಾಂಛನವನ್ನಾಗಿ ಅಂಗೀಕರಿಸಿ ಬಳಕೆ ಮಾಡಲಾಗುತ್ತಿದೆ. ರಾಷ್ಟ್ರಲಾಂಛನದಲ್ಲಿ 4 ದಿಕ್ಕುಗಳಿಗೆ ಸಿಂಹವು ಮುಖ ಮಾಡಿ, ಪರಸ್ಪರ ಬೆನ್ನು ಸೇರಿಕೊಂಡಂತೆ ಇದ್ದು ಮೂರು ದಿಕ್ಕುಗಳಲ್ಲಿ ಘರ್ಜಿಸುವ ಭಾವದಂತೆಯು ಹಾಗೂ ಮುಂಭಾಗದಲ್ಲಿ ಗಂಭೀರ ಸಿಂಹದ ಮುಖವನ್ನು ಹೊಂದಿ ಭಾರತ ಶಕ್ತಿಶಾಲಿಯಾದರೂ, ಶಾಂತ ಶಾಲಿಯೂ ಹೌದು ಎಂಬ ಸಂದೇಶ ಸಾರುವಂತಿದೆ. ಅದರ ಕೆಳಭಾಗದಲ್ಲಿ ವೃತ್ತಾಕಾರದಲ್ಲಿ ಓಡುತ್ತಿರುವ ಆನೆ, ಗೂಳಿ, ಕುದುರೆ, ಸಿಂಹ ಹಾಗೂ ಇವುಗಳ ನಡುವೆ ಧರ್ಮಚಕ್ರದ ಆಕೃತಿಯನ್ನು ಕಾಣಬಹುದಾಗಿದೆ.

ಬುದ್ಧನಾದ ಸಿದ್ಧಾರ್ಥನು ತಾನು ಈ ಲೋಕದಲ್ಲಿ ಜನ್ಮ ತಾಳುವ ಮೊದಲು ಸ್ವರ್ಗದಿಂದ ತಾಯಿಯ ಗರ್ಭಕ್ಕೆ ಅವತರಿಸಿ ಬರುವಾಗ ಬಿಳಿಯ ಆನೆಯ ರೂಪದಲ್ಲಿ ಬಂದ ಹಾಗೆ ಅವನ ತಾಯಿ ಕನಸು ಕಂಡಿದ್ದಳಂತೆ. ಸಿದ್ಧಾರ್ಥನು ಲೋಕದ ದುಃಖ, ಜಂಜಾಟಗಳಿಗೆ ಮರುಗಿ ವಿರಕ್ತನಾಗಿ ಮನೆ ಬಿಟ್ಟು ಮಹಾಭಿನಿಷ್ಕ್ರಮಣವನ್ನು ಆಚರಿಸಿದಾಗ, ಕಂಥಕನೆಂಬ ತನ್ನ ಕುದುರೆಯನ್ನು ಏರಿಹೋದ ಎಂಬುದು ಮತ್ತೊಂದು ಉಲ್ಲೇಖ. ಅಲ್ಲದೆ ಕುದುರೆಯು ನಿಷ್ಠೆ, ಶಕ್ತಿ ವೇಗದ ಗುಣವು ಆಗಿದೆ. ಅದಾದ ಆರು ವರ್ಷದ ನಂತರ ತಾನು ಬೋಧಿಯನ್ನು ಸಾಕ್ಷಾತ್ಕರಿಸಿಕೊಂಡ ಮೇಲೆ, ಬೌದ್ಧ ಧರ್ಮವನ್ನು ಘೋಷಣೆ ಮಾಡಿದನು. ಬುದ್ಧನ ಈ ಘೋಷಣೆಯನ್ನು ಸಿಂಹನಾದ ಎಂದು ಕರೆಯಲಾಗುತ್ತದೆ.

> **ನವದೆಹಲಿಯ ಹೊಸ ಸಂಸತ್ ಭವನದ ಛಾವಣಿಯ ಮೇಲೆ ಕಂಚಿನ ಭವ್ಯವಾದ ರಾಷ್ಟ್ರೀಯ ಲಾಂಛನವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅನಾವರಣಗೊಳಿಸಿದ್ದು, ದೇಶದ ಹೆಮ್ಮೆಯ ಸಂಕೇತಗಳಲ್ಲಿ ಒಂದಾಗಿದೆ. ಸುಮಾರು 9,500ಕೆ.ಜಿ ಕಂಚಿನ ಲೋಹದಿಂದ ನಿರ್ಮಾಣವಾಗಿದ್ದು, 6.4ಮೀ. ಎತ್ತರವಿದೆ. ನೆಲಮಟ್ಟದಿಂದ 33ಮೀ. ಎತ್ತರದಲ್ಲಿದ್ದು, 3ಡಿ ವಾಸ್ತುಶಿಲ್ಪವನ್ನು ಹೊಂದಿದ್ದು ಸುಮಾರು 100ಕ್ಕೂ ಹೆಚ್ಚಿನ ಪ್ರಸಿದ್ಧ ಕಲಾವಿದರಿಂದ ಸತತ ಆರು ತಿಂಗಳ ಕಾಲ ನಿರ್ಮಾಣ ಕಾರ್ಯ ನಡೆಯಿತು. ಇದು ದೇಶದಲ್ಲೇ ಅತಿ ದೊಡ್ಡ ರಾಷ್ಟ್ರೀಯ ಲಾಂಛನವಾಗಿದೆ.**

ಸಿಂಹವು ಶಕ್ತಿ, ಜ್ಞಾನದ ಸಂಕೇತವು ಹೌದು. ಇವೆಲ್ಲವನ್ನು ಸಾಂಕೇತಿಕವಾಗಿ ಲಾಂಛನದಲ್ಲಿ ಮೂಡಿಸಲಾಗಿದೆ. ಅವುಗಳ ನಡುವೆ 24 ಗೆರೆಳಿರುವ ಧರ್ಮಚಕ್ರವು ಪ್ರೀತಿ, ಧೈರ್ಯ, ತಾಳ್ಮೆ, ಶಾಂತಿ, ದೊಡ್ಡತನ, ಒಳ್ಳೆತನ, ನಂಬಿಕೆ, ಸೌಮ್ಯತೆ, ನಿಸ್ವಾರ್ಥ, ಸ್ವನಿಯಂತ್ರಣ, ಸ್ವಯಂ ತ್ಯಾಗ, ಸತ್ಯಾಸತ್ಯತೆ, ಸದಾಚಾರ, ನ್ಯಾಯ, ದಯೆ, ಆಕರ್ಷಕತೆ, ನಮ್ರತೆ, ನಿಷ್ಠೆ, ಸಹಾನುಭೂತಿ, ಆಧ್ಯಾತ್ಮಿಕ ಜ್ಞಾನ, ಕ್ಷಮೆ, ಪ್ರಮಾಣಿಕತೆ, ಶಾಶ್ವತತೆ, ಭರವಸೆಯ ಪ್ರತೀಕವಾಗಿದೆ. ಇವುಗಳೊಂದಿಗೆ ಮುಂಡಕೋಪನಿಷತ್‌ನ ಅಥರ್ವಣ ವೇದದಲ್ಲಿ ಶೌನಕ ಶಾಖೆಗೆ ಸೇರಿದ **ಸತ್ಯ ಮೇವ ಜಯತೇ** ಎಂಬ ವಾಕ್ಯವು ದೇವನಾಗರಿ ಲಿಪಿಯಲ್ಲಿರುವುದನ್ನು ಕಾಣಬಹುದು. ಈ ಎಲ್ಲಾ ಭಾಗಗಳು ತಾವರೆ ಹೂವಿನ ಮೇಲಿರುವಂತೆ ರೂಪಿಸಲಾಗಿದ್ದು, ಕೆಸರಿನಲ್ಲಿ ಹುಟ್ಟಿದರೂ ಕೆಸರಿನ ಗುಣವನ್ನು ಪಡೆದುಕೊಳ್ಳದೆ ಬೆಳೆದು ತಾವರೆಯಾಗಿ ಮುದ ನೀಡುತ್ತದೆ ಎಂದು ವಿಶ್ಲೇಷಿಸಲಾಗುತ್ತದೆ.

ಸಾಮ್ರಾಟ್ ಅಶೋಕನ ಕಾಲದ 1.6ಮೀ ಎತ್ತರದ ಸಿಂಹ ಲಾಂಛನದ ಮೂಲ ಸ್ವರೂಪವನ್ನು ಸಾರನಾಥದ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿದೆ. ಭಾರತದ ಅಶೋಕ ಸ್ತಂಭ ರಾಷ್ಟ್ರೀಯ ಲಾಂಛನವನ್ನು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳು ಯಾವುದೇ ರೀತಿಯಲ್ಲಿ ಬಳಸಿಕೊಳ್ಳುವಂತಿಲ್ಲ. ಹಾಗೆ ಬಳಸಿಕೊಳ್ಳುವುದನ್ನು ಅನಧಿಕೃತ ಎಂದು 2005ರ ರಾಷ್ಟ್ರೀಯ ಕಾಯ್ದೆ ಅಡಿಯಲ್ಲಿ ನಿಯಂತ್ರಿಸಿದ್ದು ಬಳಕೆಯನ್ನು ನಿಷೇಧಿಸಲಾಗಿದೆ. ಹಾಗಾಗಿ, ಬಳಕೆಯು ಶಿಕ್ಷಾರ್ಹ ಅಪರಾಧವಾಗುತ್ತದೆ ಎಂದು ಹೇಳಲಾಗಿದೆ.

ನವದೆಹಲಿಯ ಸಂಸತ್ ಭವನದ ಛಾವಣಿಯ ಮೇಲೆ ಕಂಚಿನ ಭವ್ಯವಾದ ರಾಷ್ಟ್ರೀಯ ಲಾಂಛನವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಅನಾವರಣಗೊಳಿಸಿದ್ದು, ದೇಶದ ಹೆಮ್ಮೆಯ ಸಂಕೇತಗಳಲ್ಲಿ ಒಂದಾಗಿದೆ. ಸುಮಾರು 9,500ಕೆ.ಜಿ ಕಂಚಿನ ಲೋಹದಿಂದ ನಿರ್ಮಾಣವಾಗಿದ್ದು, 6.4ಮೀ. ಎತ್ತರವಿದೆ. ನೆಲಮಟ್ಟದಿಂದ 33ಮೀ. ಎತ್ತರದಲ್ಲಿದ್ದು, 3ಡಿ ವಾಸ್ತುಶಿಲ್ಪವನ್ನು ಹೊಂದಿದ್ದು ಸುಮಾರು 100ಕ್ಕೂ ಹೆಚ್ಚಿನ ಪ್ರಸಿದ್ಧ ಕಲಾವಿದರಿಂದ ಸತತ ಆರು ತಿಂಗಳ ಕಾಲ ನಿರ್ಮಾಣ ಕಾರ್ಯ ನಡೆಯಿತು. ಇದು ದೇಶದಲ್ಲೇ ಅತಿ ದೊಡ್ಡ ರಾಷ್ಟ್ರೀಯ ಲಾಂಛನವಾಗಿದೆ.

ಕರ್ನಾಟಕದ ರಾಜಧಾನಿ ಬೆಂಗಳೂರು ನಗರಾಭಿವೃದ್ಧಿ ಸಮಿತಿಯಿಂದ ಜಯನಗರದ ಬಡಾವಣೆಯಲ್ಲಿ ಅಖಿಲ ಭಾರತದ ಗವರ್ನರ್ ಜನರಲ್ ಆಗಿದ್ದ ಘನತೆ ಹೊಂದಿದ ಸಿ.ರಾಜಗೋಪಾಲ ಚಾರ್ಯ ಅವರಿಂದ ಮೈಸೂರು ಸಂಸ್ಥಾನದ ಜಯಚಾಮರಾಜ ಒಡೆಯರ್ ಬಹದ್ದೂರ್ ಆಳ್ವಿಕೆಯ 8ನೇ ವರ್ಷದಲ್ಲಿ ಅಂದರೆ ಶಾಲಿವಾಹನ ಶಕ 1871ನೇ ಸರ್ವಧಾರಿ ಸಂವತ್ಸರದ ಶ್ರಾವಣ ಬಹುಳ ಪಾಡ್ಯಮಿ ರಂದು (20-08-1948) ನಡೆದ ಸಮಾರಂಭದಲ್ಲಿ ಅಶೋಕ ಸ್ತಂಭವು ಸ್ಥಾಪಿಸಲ್ಪಟ್ಟಿತು.

ನವದೆಹಲಿಯಲ್ಲಿನ ಹೊಸ ಸಂಸತ್ ಭವನದಲ್ಲಿನ ರಾಷ್ಟ್ರ ಲಾಂಛನದ ಅನಾವರಣದ ಪೂಜಾ ಕೈಂಕರ್ಯವನ್ನು ಶೃಂಗೇರಿ ಶ್ರೀಮಠದ ಜಗದ್ಗುರುಗಳಾದ ಶ್ರೀಶ್ರೀ ಭಾರತೀ ತೀರ್ಥ ಮಹಾಸ್ವಾಮೀಜಿ ಅವರ ಆಶೀರ್ವಾದದೊಂದಿಗೆ ಪುರೋಹಿತರಾದ ವೇದಬ್ರಹ್ಮಶ್ರೀ ಋಷ್ಯ ಶೃಂಗಭಟ್‌ರವರು ನೆರವೇರಿಸಿದ್ದು ಕನ್ನಡಿಗರ ಹೆಮ್ಮೆಯ ವಿಷಯವಾಗಿದೆ.



ಸಂ. ಶ್ರೀಕಂಠ ಕುಮಾರ್
ಮೊ: 9481067333

2025ರೊಳಗೆ ಮಲೇರಿಯಾ ಮುಕ್ತ ರಾಜ್ಯವನ್ನಾಗಿಸಲು ಸಂಪೂರ್ಣ ಬೆಂಬಲ

ಬೆಂಗಳೂರು, ಜು.17– ದೇಶ ಮತ್ತು ರಾಜ್ಯವನ್ನು ಮಲೇರಿಯಾ ಮುಕ್ತಗೊಳಿಸಲು ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ಹೇಳಿದ್ದಾರೆ.



ಆರೋಗ್ಯ ಇಲಾಖೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ನಿರಂತರ ನಿಗಾ, ತಪಾಸಣೆ ಮತ್ತು ಜಾಗೃತಿ ಕಾರ್ಯಕ್ರಮಗಳೊಂದಿಗೆ ಮಲೇರಿಯಾ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. 2025ರೊಳಗೆ ಗುರಿ ಸಾಧಿಸಲು ಸರ್ಕಾರದ ಕಾರ್ಯಕ್ರಮಗಳಿಗೆ ಎನ್‌ಜಿಓ ಹಾಗೂ ಸಾರ್ವಜನಿಕರಿಂದ ಬೆಂಬಲದ ಅಗತ್ಯವಿದೆ ಎಂದರು.

ಮಲೇರಿಯಾ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿರುವ ದಕ್ಷಿಣ ಕನ್ನಡ ಮತ್ತು ಉಡುಪಿಯಂತಹ ಕಡೆಗಳಲ್ಲಿ ಜಾಗೃತಿ ಮೂಡಿಸುವುದು ಪ್ರಮುಖವಾಗಿದೆ. ಪ್ರಕರಣ ಇಲ್ಲದ ಕಡೆಯೂ ಸೂಕ್ತ ನಿಗಾ ವಹಿಸಬೇಕಾಗಿದೆ. 2020ರಲ್ಲಿ ದೇಶಾದ್ಯಂತ 1,86,532 ಮಲೇರಿಯಾ ಪ್ರಕರಣ ಪತ್ತೆಯಾಗಿತ್ತು. ಈ ಪೈಕಿ ಕರ್ನಾಟಕದಲ್ಲಿ ಕೇವಲ 1,701 ಪ್ರಕರಣಗಳು ಅಥವಾ ಶೇ.0.9ರಷ್ಟು ಕಂಡುಬಂದಿದ್ದಾಗಿ ತಿಳಿಸಿದರು. ಕಳೆದ ಆರು ತಿಂಗಳಲ್ಲಿ ಕೇವಲ 100 ಮಲೇರಿಯಾ ಪ್ರಕರಣಗಳು ದಾಖಲಾಗಿದೆ. ಆದರೆ, ಮುಂಗಾರಿನೊಂದಿಗೆ ದಕ್ಷಿಣ ಕನ್ನಡ, ಉಡುಪಿ ಮತ್ತು ಅರಣ್ಯಕ್ಕೆ ಹತ್ತಿರದಲ್ಲಿರುವ ಪ್ರದೇಶಗಳಲ್ಲಿ ಮಲೇರಿಯಾ ಪ್ರಕರಣಗಳು ಏರಿಕೆಯಾಗುತ್ತಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರಾಗಿ ಅರುಣಕುಮಾರ್, ಕಾರ್ಯದರ್ಶಿಯಾಗಿ ಬಸವರಾಜು ಆಯ್ಕೆ

ಮೈಸೂರು, ಜು.17(ಎಸ್‌ಪಿಎನ್)– ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಮೈಸೂರು ಜಿಲ್ಲಾ ಸಂಘಕ್ಕೆ 2022ರಿಂದ 2027ರ ಅವಧಿಗೆ ಅಧ್ಯಕ್ಷರಾಗಿ ಮೈಸೂರು ತಾಲೂಕು ಕಲ್ಲೂರು ನಾಗನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಸಿ.ಬಿ.ಅರುಣಕುಮಾರ್ ಆಯ್ಕೆಯಾದರೆ, ಕಾರ್ಯದರ್ಶಿಯಾಗಿ ದೇವಲಾಪುರ ಪ್ರೌಢಶಾಲೆಯ ಶಿಕ್ಷಕ ಎಂ.ಬಸವರಾಜು ಆಯ್ಕೆಯಾಗಿದ್ದಾರೆ.



ಕೋಶಾಧ್ಯಕ್ಷರಾಗಿ ಹುಣಸೂರು ತಾಲೂಕು ಕಟ್ಟೆಮಳಲವಾಡಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಪಿ.ಎಂ.ಹೇಮಪ್ರಸಾದ್, ಸಂಘಟನಾ ಕಾರ್ಯದರ್ಶಿಯಾಗಿ ಮರಿಮಲ್ಲಪ್ಪ ಪ್ರೌಢಶಾಲೆಯ ಶಿಕ್ಷಕ ಬಿ.ಆರ್.ಶಿವಕುಮಾರ್ (ಅವಿರೋಧ ಆಯ್ಕೆ) ವಿನಾಯಕ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಎಸ್.ಆನಂದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ನಂಜನಗೂಡು ತಾಲೂಕು ತಾಂಡವಪುರ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಹೆಚ್.ಎಸ್. ಮಹೇಶ್ ಕುಮಾರ್ ಸಹ ಕಾರ್ಯದರ್ಶಿ ಸ್ಥಾನಕ್ಕೆ ಆಯ್ಕೆಯಾಗಿದ್ದು, ಒಟ್ಟು ಆರು ಮಂದಿ ಚುನಾವಣೆ ಮೂಲಕ ಪದಾಧಿಕಾರಿಗಳಾಗಿ ಜಿಲ್ಲಾ ಸಂಘಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದು, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾತಂತ್ರ್ಯ ಅಮೃತ ಮಹೋತ್ಸವ ಪ್ರಯುಕ್ತ ; ನೈರುತ್ಯ ರೈಲ್ವೆಯ ಮೈಸೂರು ವಿಭಾಗದಿಂದ



ಜು.18ರಿಂದ 23ರವರೆಗೆ 'ಆಜಾದಿ ಕಿ ರೈಲ್ ಗಾಡಿ, ಔರ್ ಸ್ಟೇಷನ್ಸ್' ಸಪ್ತಾಹ ಕಾರ್ಯಕ್ರಮ

ರೈಲ್ವೆ ಸಚಿವಾಲಯದ ನಿರ್ದೇಶನದ ಮೇರೆಗೆ ಆಯೋಜನೆ

ಮೈಸೂರು, ಜು.17(ಪಿಎಂ)– ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ರೈಲ್ವೆ ಸಚಿವಾಲಯದ (ರೈಲ್ವೆ ಮಂಡಳಿ) ನಿರ್ದೇಶನದ ಮೇರೆಗೆ ನೈರುತ್ಯ ರೈಲ್ವೆಯ ಮೈಸೂರು ವಿಭಾಗವು ಜು.18ರಿಂದ 23ರವರೆಗೆ 'ಆಜಾದಿ ಕಿ ರೈಲ್ ಗಾಡಿ, ಔರ್ ಸ್ಟೇಷನ್ಸ್ (ಸ್ವಾತಂತ್ರ್ಯ ರೈಲು ಮತ್ತು ರೈಲು ನಿಲ್ದಾಣ) ಸಾಂಪ್ರದಾಯಿಕ ಸಪ್ತಾಹ ಕಾರ್ಯಕ್ರಮ ಆಚರಿಸಲಿದೆ.

ರೈಲ್ವೆ ಸಚಿವಾಲಯವು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ 75 ರೈಲು ನಿಲ್ದಾಣಗಳನ್ನು ಗುರುತಿಸಿದೆ. ಈ ಪೈಕಿ ಹಾವೇರಿಯ ಶ್ರೀ ಮಹದೇವಪ್ಪ ಮೈಲಾರ ರೈಲ್ವೆ ನಿಲ್ದಾಣವೂ ಸೇರಿದೆ. ಅಂತೆಯೇ ದೇಶದಾದ್ಯಂತ 27 ರೈಲುಗಳನ್ನು ಆಯ್ಕೆ ಮಾಡಿದ್ದು, ಟಿಪ್ಪು ಎಕ್ಸ್‌ಪ್ರೆಸ್ ಸಹ ಆಯ್ಕೆಯಲ್ಲಿ ಸ್ಥಾನ ಪಡೆದಿದೆ. ಜು.18ರಂದು ಸಂಜೆ 4ಕ್ಕೆ ರೈಲ್ವೆ ಮಂಡಳಿಯ ರೈಲ್ವೆ ಭವನದಿಂದ ಸಾಂಪ್ರದಾಯಿಕ ಸಪ್ತಾಹವನ್ನು (ಐಕಾನಿಕ್ ವೀಕ್) ರೈಲ್ವೆ ಮಂಡಳಿಯ ಅಧ್ಯಕ್ಷರೂ ಆದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿ.ಕೆ.ತ್ರಿಪಾಠಿ ಉದ್ಘಾಟಿಸಲಿದ್ದಾರೆ.

ಹಾವೇರಿ ಶ್ರೀ ಮಹದೇವಪ್ಪ ಮೈಲಾರ ರೈಲ್ವೆ ನಿಲ್ದಾಣ: ಹಾವೇರಿ ರೈಲು ನಿಲ್ದಾಣಕ್ಕೆ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಮೈಲಾರ ಮಹದೇವಪ್ಪ ಅವರ ಹೆಸರನ್ನು ನಾಮಕರಣ ಮಾಡಲು ಕರ್ನಾಟಕ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಕ್ರಾಂತಿಕಾರಿ ಹೋರಾಟಕ್ಕಾಗಿ ಅವರು 'ಕರ್ನಾಟಕದ ಭಗತ್ ಸಿಂಗ್' ಎಂದೇ ಖ್ಯಾತನಾಮ ಗಳಿಸಿದವರು. ದಂಡಿ ಮೆರವಣಿಗೆಯಲ್ಲಿ ಪಾಲ್ಗೊಂಡು ಮಹಾತ್ಮ ಗಾಂಧೀಜಿಯವರೊಂದಿಗೆ ನಡೆದವರಲ್ಲಿ ಅವರು ಅಂದಿನ ಮೈಸೂರು ಸಂಸ್ಥಾನದ ಏಕೈಕ ಪ್ರತಿನಿಧಿಯಾಗಿದ್ದರು. 6 ತಿಂಗಳ ಕಾಲ ಜೈಲು ಶಿಕ್ಷೆ ಅನುಭವಿಸಿ, ಹಿಂದಿರುಗಿದ ನಂತರವೂ ತಮ್ಮ ಕ್ರಾಂತಿಕಾರಿ ಸ್ನೇಹಿತರ ಜೊತೆಗೂಡಿ, ಹಾವೇರಿ ಬಳಿಯ ಬ್ಯಾಡಗಿ ರೈಲು ನಿಲ್ದಾಣದ ಮೇಲೆ ದಾಳಿ ಮಾಡಿದ್ದರು.



ರೈಲ್ವೆ ಮಂಡಳಿಯ ನಿರ್ದೇಶನದಂತೆ ಮೈಸೂರು ವಿಭಾಗವು ಜು.18ರಿಂದ 23ರವರೆಗೆ ಶ್ರೀ ಮಹದೇವಪ್ಪ ಮೈಲಾರ ಹಾವೇರಿ ರೈಲ್ವೆ ನಿಲ್ದಾಣದ ವ್ಯಾಪ್ತಿಯಲ್ಲಿರುವ ರೈಲ್ವೆಯ ಎಲ್ಲಾ ಪಾಲುದಾರರು, ಶಾಲಾ-ಕಾಲೇಜುಗಳು ಮತ್ತು ವಸತಿ ಕಾಲೋನಿಗಳನ್ನು ಸೇರಿಸಿಕೊಂಡು ವಾರಪೂರ್ತಿ ಕಾರ್ಯಕ್ರಮ ಸರಣಿಯನ್ನು ಆಯೋಜಿಸಿದೆ.


ಅದರಂತೆ ವಾರ ಪೂರ್ತಿ ಶ್ರೀ ಮಹದೇವಪ್ಪ ಮೈಲಾರ ಹಾವೇರಿ ನಿಲ್ದಾಣದ ದೀಪಾಲಂಕಾರ ಮತ್ತು ಸಿಂಗಾರ, ಡಿಜಿಟಲ್ ಪರದೆ ಅಳವಡಿಸುವುದು ಮತ್ತು ಐತಿಹಾಸಿಕ ವಿಷಯಗಳ ಛಾಯಾಚಿತ್ರ ಪ್ರದರ್ಶನ, ವೀಡಿಯೋ ಚಿತ್ರ, ದೇಶಭಕ್ತಿ ಗೀತೆಗಳು, ಸ್ಥಳೀಯ ಭಾಷೆಯಲ್ಲಿ ತನ್ನದೇ ಆದ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಬಗ್ಗೆ ಬೀದಿ ನಾಟಕವನ್ನು ಪ್ರತಿದಿನ ಸಂಜೆ 6ರಿಂದ ಗಂಟೆಯಿಂದ 7ರವರೆಗೆ ನಡೆಸುವುದು. ವಾರದ ಕೊನೆಯ ದಿನದಂದು ಸ್ಥಳೀಯ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬ ಸದಸ್ಯರನ್ನು ಆಹ್ವಾನಿಸುವುದು. ನಿಲ್ದಾಣದಲ್ಲಿ ಸೆಲ್ಫಿ ಪಾಯಿಂಟ್ ರಚಿಸಲಾಗುವುದು.

ಟಿಪ್ಪು ಎಕ್ಸ್‌ಪ್ರೆಸ್: ಬ್ರಿಟಿಷರ ವಿರುದ್ಧ ಹೋರಾಡಿದ ಟಿಪ್ಪು ಸುಲ್ತಾನ್ ಅವರ ಹೆಸರನ್ನು ಈ ರೈಲಿಗೆ ಇಡಲಾಗಿದೆ. ಟಿಪ್ಪು ಸುಲ್ತಾನ್ (1751ರ ಡಿ.1ರಂದು ಜನನ, 1799ರ ಮೇ 4ರಂದು ಮರಣ) ಅವರಿಗೆ 'ಮೈಸೂರು ಹುಲಿ' ಎಂದೇ ಬಿರಿದು ನೀಡಲಾಗಿದೆ. ಬ್ರಿಟಿಷರ ವಿರುದ್ಧ 4 ಯುದ್ಧಗಳನ್ನು ನಡೆಸಿ, ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಹುತಾತ್ಮರಾದರು. ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಅವರನ್ನು ಸ್ಮರಿಸಲು ಈ ರೈಲಿಗೆ ಟಿಪ್ಪು ಎಕ್ಸ್‌ಪ್ರೆಸ್ ಎಂದು ಹೆಸರಿಸಲಾಗಿದೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ಟಿಪ್ಪು ಎಕ್ಸ್‌ಪ್ರೆಸ್‌ಗೆ ಹಸಿರು ನಿಶಾನೆ: ಸಪ್ತಾಹದ ಯಾವುದಾದರೂ ಒಂದು ದಿನ ಸ್ಥಳೀಯ ಸ್ವಾತಂತ್ರ್ಯ ಹೋರಾಟಗಾರರು ಅಥವಾ ಅವರ ಕುಟುಂಬದ ಸದಸ್ಯರು ಮೈಸೂರಿನಿಂದ ಟಿಪ್ಪು ಎಕ್ಸ್‌ಪ್ರೆಸ್ ಪ್ರಯಾಣಕ್ಕೆ ಹಸಿರು ನಿಶಾನೆ ತೋರಿಸುವ ಕಾರ್ಯಕ್ರಮ ರೂಪಿಸಲಾಗುವುದು ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರೂ ಆದ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ.ಮಂಜುನಾಥ್ ಕನಮಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ 944 ಮಂದಿಗೆ ಪಾಸಿಟಿವ್


ಬೆಂಗಳೂರು, ಜು.17– ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕಳೆದ 24 ಗಂಟೆಯಲ್ಲಿ 944 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 39,86,320ಕ್ಕೆ ಏರಿಕೆಯಾಗಿದೆ.



ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೊನಾದಿಂದ ಇಂದು ಒಬ್ಬರು ಮೃತಪಟ್ಟಿದ್ದು, ಇದರೊಂದಿಗೆ ಸಾವಿನ ಸಂಖ್ಯೆ 40,089ಕ್ಕೆ ಏರಿಕೆ ಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಗಳೂರಿನಲ್ಲಿ ಇಂದು 799 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 18,19,445ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ. ರಾಜ್ಯದಲ್ಲಿ ಇಂದು 670 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 39,38,620ಕ್ಕೆ ಏರಿಕೆಯಾಗಿದೆ. ಇನ್ನು 7,569 ಸಕ್ರಿಯ ಪ್ರಕರಣಗಳಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರಿನ ದಟ್ಟಗಳ್ಳಿಯಲ್ಲಿರುವ ಖಾಸಗಿ ಹೆಲ್ತ್ ಕೇರ್ ಕೇಂದ್ರದಲ್ಲಿ ವಿಶ್ವ ಪ್ಲಾಸ್ಟಿಕ್ ಸರ್ಜರಿ ಆಚರಣೆ ವೇಳೆ ಡಾ.ನಾರಾಯಣ ಹೆಗಡೆಯವರ 'ದಿ ಆರ್ಟ್ ಅಂಡ್ ಸೈನ್ಸ್ ಆಫ್ ಪ್ಲಾಸ್ಟಿಕ್ ಸರ್ಜರಿ' ಪುಸ್ತಕವನ್ನು ಶಾಸಕ ಜಿ.ಟಿ.ದೇವೇಗೌಡರು ಬಿಡುಗಡೆ ಮಾಡಿದರು. ಡಾ.ಬಾಲಕೃಷ್ಣೆಗೌಡ, ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಮುಂಗಾರು ಅಧಿವೇಶನಕ್ಕೆ ಮುನ್ನ ಸರ್ವಪಕ್ಷ ಸಭೆ

ನವದೆಹಲಿ, ಜು.17– ನಾಳೆ (ಸೋಮವಾರ) ಸಂಸತ್ತಿನ ಮುಂಗಾರು ಅಧಿವೇಶನ ಆರಂಭವಾಗಲಿದ್ದು, ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇಂದು ದೆಹಲಿಯಲ್ಲಿ ಸರ್ವಪಕ್ಷ ಸಭೆಯನ್ನು ಕರೆದಿತ್ತು. ಮುಂಗಾರು ಅಧಿವೇಶನದಲ್ಲಿ ಹೆಚ್ಚಿನ ಸದಸ್ಯರು ಕಲಾಪದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ, ಕಲಾಪಕ್ಕೆ ಸಹಕರಿಸುವಂತೆ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಮನವಿ ಮಾಡಿದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಸಚಿವ ಪೀಯೂಷ್ ಗೋಯಲ್, ಎಐಎಡಿಎಂಕೆ ಸಂಸದ ಎಂ ತಂಬಿದುರೈ, ವೈಎಸ್‌ಆರ್ ಸಿಪಿ ಸಂಸದ ವಿಜಯಸಾಯಿ ರೆಡ್ಡಿ, ಟಿಎಂಸಿ ಸಂಸದ ಸುದೀಪ್ ಬಂದೋಪಾಧ್ಯಾಯ್, ಅಪ್ನಾ ದಳ್ ಸಂಸದೆ ಅನುಪ್ರಿಯಾ ಪಟೇಲ್, ಕಾಂಗ್ರೆಸ್ ಸಂಸದರಾದ ಮಲ್ಲಿಕಾರ್ಜುನ ಖರ್ಗೆ, ಜೈರಾಮ್ ರಮೇಶ್, ರಾಷ್ಟ್ರೀಯ ಲೋಕ ದಳ್ ಸಂಸದರಾದ ಜಯಂತ್ ಚೌಧರಿ ಮತ್ತು ಡಿಎಂಕೆ ಸಂಸದ ತಿರುಚಿ ಸಿವ ಸೇರಿದಂತೆ 36 ಮಂದಿ ಸಂಸದರು ಹಾಜರಾಗಿದ್ದರು. ಈ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಗೈರಾಗಿದ್ದು, ಇದನ್ನು ವಿಪಕ್ಷ ಕಾಂಗ್ರೆಸ್ ತೀವ್ರವಾಗಿ ಟೀಕಿಸಿದೆ. ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ, ನಾವು 45 ಮಂದಿ ರಾಜಕೀಯ ಮುಖಂಡರನ್ನು ಸಭೆಗೆ ಆಹ್ವಾನಿಸಿದ್ದೆವು. ಅವರಲ್ಲಿ 36 ಮಂದಿ ಭಾಗಿಯಾಗಿದ್ದರು. ಅಧಿವೇಶನ ಸುಗಮವಾಗಿ ನಡೆಯಲು ಸಹಕರಿಸುವುದಾಗಿ ಸಂಸದರು ಭರವಸೆ ನೀಡಿದ್ದಾರೆ ಎಂದರು. ಇನ್ನು ಪ್ರಧಾನಿ ಗೈರಾಗಿದ್ದ ಬಗ್ಗೆ ಕಾಂಗ್ರೆಸ್ ಟೀಕೆಗೆ ಉತ್ತರಿಸಿದ ಅವರು, 2014ರ ಮೊದಲು ಸರ್ವಪಕ್ಷ ಸಭೆಯಲ್ಲಿ ಪ್ರಧಾನಿ ಭಾಗವಹಿಸುತ್ತಿರಲಿಲ್ಲ. ಮನಮೋಹನ್ ಸಿಂಗ್ ಅವರು ಎಷ್ಟು ಬಾರಿ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸುತ್ತಿದ್ದರು ಎಂದು ತಿರುಗೇಟು ನೀಡಿದರು.

ಒಂದನೇ ಪುಟದಿಂದ

ತಡೆಗೋಡೆಗೆ ಭಾರೀ ಹಾನಿ

ನಡೆಸಿದ ಘಟನೆಯೂ ನಡೆದಿದೆ. ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ.

ಜಿಲ್ಲಾಡಳಿತ ಭವನಕ್ಕೆ ಕಂಟಕ: ನಗರದ ಜನರಲ್ ತಿಮ್ಮಯ್ಯ ವೃತ್ತದ ಬಳಿಯಲ್ಲಿ, ಮಂಗಳೂರು ರಸ್ತೆಯ ಬಲ ಪಾರ್ಶ್ವದ ಬೆಟ್ಟ ಪ್ರದೇಶದಲ್ಲಿ ಜಿಲ್ಲಾಡಳಿತ ಭವನವಿದೆ. ಎರಡು ವರ್ಷದ ಹಿಂದೆ ಭವನದ ಮುಂಭಾಗದ ಬರೆ ಕುಸಿತ ಉಂಟಾಗಿತ್ತು. ಭವಿಷ್ಯದ ದಿನಗಳಲ್ಲಿ ಬರೆ ಕುಸಿತ ಜಿಲ್ಲಾಡಳಿತ ಭವನಕ್ಕೆ ಸಂಕಷ್ಟ ತಂದೊಡ್ಡುವ ಸಾಧ್ಯತೆಗಳನ್ನರಿತು 7 ಕೋಟಿ ರೂ.ಗಳನ್ನು ವ್ಯಯಿಸಿ, ಹೈದರಾಬಾದ್ ಮೂಲದ ಗುತ್ತಿಗೆದಾರರಿಂದ ಜಪಾನ್ ತಂತ್ರಜ್ಞಾನದಂತೆ ನೂರಾರು ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ಜೋಡಿಸಿ ತಡೆಗೋಡೆಯನ್ನು ನಿರ್ಮಿಸಲಾಗಿದೆ. 60ಕ್ಕೂ ಹೆಚ್ಚು ಅಡಿ ಎತ್ತರದ ಬರೆಗೆ ಅಡ್ಡಲಾಗಿ ಅಂದಾಜು 100 ಮೀಟರ್‌ಗಳವರೆಗೆ ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ಅಳವಡಿಸಿ, ನಡುವಿನ ಖಾಲಿ ಜಾಗಕ್ಕೆ ಸಾವಿರಾರು ಲೋಡ್ ಮಣ್ಣು ತುಂಬಿಸಲಾಗಿದೆ. ಇದರ ಒತ್ತಡವನ್ನು ತಡೆದುಕೊಳ್ಳಲಾಗದೆ, ಅಡಿ ಭಾಗದ ಕೆಲ ಸ್ಲ್ಯಾಬ್‌ಗಳು ಒಡೆದಿದ್ದು ಮತ್ತೆ ಕೆಲವು ಬಿರುಕು ಬಿಟ್ಟಿವೆ. ಈ ಭಾರೀ ಒತ್ತಡವನ್ನು ತಡೆಗೋಡೆ ತಡೆದುಕೊಳ್ಳಬಲ್ಲದೆ ಎಂಬುದೇ ಒಂದು ಯಕ್ಷ ಪ್ರಶ್ನೆಯಾಗಿದ್ದು, ಜಿಲ್ಲಾಡಳಿತ ಭವನಕ್ಕೆ ಕಂಟಕ ಎದುರಾಗಿದೆ.

ಪ್ರಸಕ್ತ ಸಾಲಿನ ಮುಂಗಾರಿನ ಆರಂಭದಲ್ಲೆ ತಡೆಗೋಡೆಯ ಕೆಳ ಭಾಗದ ಕೆಲ ಕಾಂಕ್ರೀಟ್ ಸ್ಲ್ಯಾಬ್‌ಗಳು ಮಣ್ಣಿನ ಒತ್ತಡಕ್ಕೆ ಹೊರ ಬಂದಿದೆ. ಈ ಹಂತದಲ್ಲಿ ಜಿಲ್ಲೆಯ ವಿವಿಧ ಸಂಘಟನೆಗಳು, ಸಾರ್ವಜನಿಕರು ತಡೆಗೋಡೆಯ ಬಗ್ಗೆ ತಮ್ಮ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಈ ಹಂತದಲ್ಲಿ ಜಿಲ್ಲಾಡಳಿತ ಮತ್ತು ಇಂಜಿನಿಯರ್‌ಗಳು, ತಡೆಗೋಡೆಯನ್ನು ಅತ್ಯಾಧುನಿಕ ತಂತ್ರಜ್ಞಾನದಲ್ಲಿ ನಿರ್ಮಿಸಲಾಗಿದೆ. ಯಾವುದೇ ಅಪಾಯವಿಲ್ಲ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲವೆಂದು ಸ್ಪಷ್ಟನೆ ನೀಡಿದ್ದರು.

ದುರಸ್ತಿ ಕಾರ್ಯ ಆರಂಭ: ಮಂಗಳೂರು ರಸ್ತೆಯ ಬಲಪಾರ್ಶ್ವದಲ್ಲಿ ಬೃಹತ್ ತಡೆ ಗೋಡೆ ಇದ್ದರೆ, ಎಡ ಪಾರ್ಶ್ವದಲ್ಲಿ ಟಯರ್ ವರ್ಕ್ಸ್, ವರ್ಕ್ ಶಾಪ್, ಜನವಸತಿ ಪ್ರದೇಶಗಳಿವೆ. ಮುಂಜಾಗ್ರತಾ ಕ್ರಮವಾಗಿ ಈಗಾಗಲೆ ಈ ಮನೆಗಳು ಮತ್ತು ಮಳಿಗೆಗಳಿಗೆ ಜಿಲ್ಲಾಡಳಿತ ನೋಟಿಸ್ ನೀಡಿದ್ದು, ಸ್ಥಳದಿಂದ ಹೊರ ತೆರಳುವಂತೆ ಸೂಚನೆಯನ್ನು ನೀಡಿದೆ ಎಂದು ತಿಳಿದು ಬಂದಿದೆ. ಮುಂದಾಗುವ ಅಪಾಯವನ್ನು ತಪ್ಪಿಸುವ ಸಲುವಾಗಿ ತಡೆಗೋಡೆಯ ತಾತ್ಕಾಲಿಕ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ಹೊರಚಾಚಿರುವ ಕಾಂಕ್ರೀಟ್ ಸ್ಲ್ಯಾಬ್‌ಗಳ ಮುಂಭಾಗ ಭಾರೀ ಗಾತ್ರದ ಕಬ್ಬಿಣದ ರಾಡ್‌ಗಳನ್ನು ಅಳವಡಿಸಿ ಸ್ಲ್ಯಾಬ್‌ಗಳು ಮತ್ತಷ್ಟು ಹೊರಚಾಚದಂತೆ ಬೇರೆ ಸ್ಲ್ಯಾಬ್‌ಗಳನ್ನು ಅಳವಡಿಸಲಾಗುತ್ತಿದೆ. ಹೀಗಿದ್ದರೂ ಅಪಾಯ ತಪ್ಪಿದ್ದಲ್ಲ ಎಂದು ಸಾರ್ವಜನಿಕ ವಲಯದಿಂದ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಮೈಸೂರು ಮಿತ್ರ ಸೋಮವಾರ 18 ಜುಲೈ 2022

ಲೂಟಿ ಮಾಡಲೆಂದೇ ಬಂದ ಬಿಜೆಪಿ ಸರ್ಕಾರಕ್ಕೆ ಜನರ ಪರ ಕಾಳಜಿ ಎಲ್ಲಿದೆ

ಮೈಸೂರು, ಜು.17(ಜಿಎ)– ಲೂಟಿ ಮಾಡುವ ಸಲುವಾಗಿಯೇ ಬಿಜೆಪಿ ಆಪರೇಷನ್ ಕಮಲದ ಮೂಲಕ ಸರ್ಕಾರ ರಚಿಸಿದ್ದು, ಅವರಿಗೆಲ್ಲಿ ಜನಪರ ಕಾಳಜಿ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿ ಕಾರಿದ್ದಾರೆ.



ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಭಾನುವಾರ ಮೈಸೂರಿಗೆ ಆಗಮಿಸಿದ್ದ ಅವರು ರಾಮಕೃಷ್ಣ ನಗರದಲ್ಲಿರುವ ತಮ್ಮ ಮನೆ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಮಳೆಯಿಂದ ಹಾನಿಯಾಗಿರುವ ಪ್ರದೇಶಗಳಿಗೆ ಸಚಿವರು ಹೋಗುತ್ತಿಲ್ಲ. ಸಚಿವರು ಲೂಟಿ ಹೊಡೆಯುವುದರಲ್ಲಿ ಮುಳುಗಿದ್ದಾರೆ. ಅವರು ಎಲ್ಲಿ ಜನರ ಸಮಸ್ಯೆ ಆಲಿಸುತ್ತಾರೆ. ಆಪರೇಷನ್ ಕಮಲದ ಮೂಲಕ ಬಂದಿರುವ ಸರ್ಕಾರ ಲೂಟಿ ಮಾಡುತ್ತಿದ್ದು, ಜನರ ಸಮಸ್ಯೆ ಬಗ್ಗೆ ಇವರಿಗೆ ಕಾಳಜಿ ಇದ್ಯಾ? ಎಂದು ಪ್ರಶ್ನಿಸಿದರು.

ರಾಷ್ಟ್ರಪತಿ ಚುನಾವಣೆ ಹಿನ್ನೆಲೆಯಲ್ಲಿ ಮಳೆಹಾನಿ ಪ್ರದೇಶಗಳ ಪ್ರವಾಸ ಮುಂದೂಡಿದ್ದೇನೆ. ಪ್ರವಾಹ ಪೀಡಿತ ಪ್ರದೇಶಗಳಿಗೆ ಸರ್ಕಾರ ಕೂಡಲೇ ಪರಿಹಾರ ಘೋಷಿಸಬೇಕು. ಅಂದಾಜು 500 ಕೋಟಿಯಷ್ಟು ನಷ್ಟವಾಗಿರುವ ಸಾಧ್ಯತೆ ಇದೆ. 2019ರಲ್ಲಿ ಬಿಎಸ್‌ವೈ ಸಿಎಂ ಆಗಿದ್ದ ವೇಳೆಯೂ ಪ್ರವಾಹ ಉಂಟಾಗಿ ಮನೆಗಳಿಗೆ ಹಾನಿಯಾಗಿತ್ತು. ಅಂದು ಮನೆ ಕಳೆದುಕೊಂಡವರಿಗೆ ಇನ್ನೂ ಮನೆ ಕೊಟ್ಟಿಲ್ಲ. 2020ರಲ್ಲಿ ಮತ್ತೆ ಪ್ರವಾಹ ಬಂತು ಆಗಲೂ ಪರಿಹಾರ ನೀಡಲಿಲ್ಲ. ಈಗ ಮತ್ತೆ ಪ್ರವಾಹ ಬಂದಿದೆ. ಈಗಲಾದರೂ ಸರ್ಕಾರ ಪರಿಹಾರ ನೀಡಬೇಕು. ಕೇವಲ ಭರವಸೆ ಕೊಟ್ಟು ಮುಂದೂಡಬಾರದು ಎಂದರು.

ಸೋನಿಯಾಗಾಂಧಿ ಅವರಿಗೆ ಇಡಿ ಸಮನ್ಸ್ ನೀಡುವ ಮೂಲಕ ಕೇಂದ್ರ ಸರ್ಕಾರ ರಾಜಕೀಯವಾಗಿ ಕಿರುಕುಳ ನೀಡುತ್ತಿದೆ. ನ್ಯಾಷನಲ್ ಹೆರಾಲ್ಡ್ ವಿಚಾರದಲ್ಲಿ ಮನಿಲಾಂಡ್ರಿಂಗ್ ಆಗಿಲ್ಲ. ಕಾಂಗ್ರೆಸ್ ಪಕ್ಷವೇ 90 ಕೋಟಿ ಸಾಲ ಕೊಟ್ಟಿದೆ. ಹೀಗಾಗಿ ಇದು ರಾಜಕೀಯ ಪ್ರೇರಿತವಾದ ಸಮನ್ಸ್. ಸುಳ್ಳು ಕೇಸ್‌ಗಳನ್ನು ಹಾಕಿ ಹಿಂಸೆ ನೀಡುತ್ತಿದ್ದಾರೆ. ಇದೇ ರೀತಿ ರಾಹುಲ್ ಗಾಂಧಿಗೆ ಐದು ದಿನ ಕಿರುಕುಳ ನೀಡಲಾಗಿದೆ. ಇಡಿಯವರು ಅನಗತ್ಯ ಕಿರುಕುಳ ನೀಡುತ್ತಿದ್ದಾರೆ. ಇಡಿ, ಸಿಬಿಐ ಎಲ್ಲಾ ಸ್ವಾಯತ್ತ ಸಂಸ್ಥೆಗಳಾಗಿದ್ದು, ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಮೋದಿ ಬಂದಾಗಿನಿಂದಲೂ ಹೀಗೆ ಮಿಸ್‌ಯೂಸ್ ಆಗ್ತಿದೆ ಎಂದು ತಿಳಿಸಿದರು.

ಶೋಷಿತ ಸಮುದಾಯಗಳ ಪರಧ್ವನಿ ಎತ್ತುವುದು ಅಪರಾಧವಾಗಿದೆ

ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ. ಫೈಝಿ



ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ.ಫೈಝಿ ಜನಾಧಿಕಾರ ಸಮಾವೇಶದಲ್ಲಿ ಮಾತನಾಡುತ್ತಿರುವುದು.

ಮೈಸೂರುಜು.17(ಜಿಎ)–ಮೋದಿ ಆಡಳಿತದಲ್ಲಿ ದೇಶದ ಶೋಷಿತ ಸಮುದಾಯಗಳಾದ ದಲಿತರು, ಮುಸ್ಲಿಮರು, ಕ್ರೈಸ್ತರ ಪರವಾಗಿ ಧ್ವನಿ ಎತ್ತುವುದು, ಅವರ ಪರವಾಗಿ ಕೆಲಸ ಮಾಡುವುದು ಅಪರಾಧವಾಗಿದೆ. ಅಂತಹವರನ್ನು ಹಿಡಿದು ಜೈಲಿಗೆ ಹಾಕಲಾಗುತ್ತಿದೆ ಎಂದು ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ.ಫೈಝಿ ಹೇಳಿದರು.

ಮೈಸೂರಿನ ರಾಜೀವ್ ನಗರದ ಅಲ್ ಬದ್ರ್ ಮೈದಾನದಲ್ಲಿ ಭಾನುವಾರ ಎಸ್‌ಡಿಪಿಐ ಏರ್ಪಡಿಸಿದ್ದ ಬೃಹತ್ ಜನಾಧಿಕಾರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಸ್‌ಡಿಪಿಐ ಕೇವಲ ಅಲ್ಪಸಂಖ್ಯಾತರ ಪರವಾದ ಪಕ್ಷವಲ್ಲ. ಇದು ಈ ದೇಶದ ಬಹುಸಂಖ್ಯಾತರ ಪರವಾಗಿ ಕೆಲಸ ಮಾಡುತ್ತಿದೆ. ಈ ದೇಶದ ಮೂಲ ನಿವಾಸಿಗಳಾದ ದಲಿತ, ಮುಸ್ಲಿಂ, ಕ್ರೈಸ್ತ, ಹಿಂದುಳಿದ ವರ್ಗಗಳು ಈ ದೇಶದ ಬಹುಸಂಖ್ಯಾತರಾಗಿದ್ದು ಸಂಘ ಪರಿವಾರವೇ ಇಲ್ಲಿನ ಅಲ್ಪಸಂಖ್ಯಾತರ ಗುಂಪಾಗಿದೆ ಎಂದರು.

ಬಿಜೆಪಿ ಮತ್ತು ಸಂಘ ಪರಿವಾರದವರು ಸಂವಿಧಾನವನ್ನು ಬದಲಾವಣೆ ಮಾಡಲು ಚಿಂತಿಸುತ್ತಿದ್ದಾರೆ. ಇದಕ್ಕೆ ಪೂರಕವೆಂಬಂತೆ ಆರ್‌ಎಸ್‌ಎಸ್ ಸಿದ್ಧಾಂತವನ್ನು ಸಂವಿಧಾನದಲ್ಲಿ ಅಳವಡಿಸುತ್ತೇವೆ ಎಂದು ಒಬ್ಬ ಬಿಜೆಪಿ ಮುಖಂಡ ಹೇಳುತ್ತಾನೆ. ಆದರೆ ಸರ್ಕಾರದ ಈ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡಲು ಮುಂದಾದರೆ ತಕ್ಷಣ ಅವರ ಮನೆ ಮುಂದೆ ಐಟಿ, ಇಡಿ, ಎನ್‌ಐಎ ಮತ್ತು ನಾರ್ಕೊಟಿಕ್ಸ್‌ನವರು ಬಂದು ನಿಲ್ಲುತ್ತಾರೆ ಎಂದರು.

ಕಷ್ಟ ಕಾಲದಲ್ಲಿ ಯಾವುದಾದರೂ ಒಂದು ಶಕ್ತಿ ಜನಿಸಿ ನಮನ್ನು ಕಾಪಾಡುತ್ತದೆ ಎಂಬ ನಂಬಿಕೆ ಮುಸ್ಲಿಮರಲ್ಲಿದೆ ಅದೇ ರೀತಿ ಎಸ್‌ಡಿಪಿಐ ಪಕ್ಷ ಬಂದಿದೆ. ಎಸ್‌ಡಿಪಿಐ ಪಕ್ಷವೂ ಯಾವುದೇ ಕಾರ್ಪೋರೇಟ್ ಸಂಸ್ಥೆ ಜೊತೆಗೆ ಕೈ ಜೋಡಿಸಿಲ್ಲ. ಯಾವುದೇ ವಿಷಯದಲ್ಲಿಯೂ ನಾವು ಬೇರೆ ಪಕ್ಷಗಳೊಂದಿಗೆ ಕಾಂಪ್ರೊಮೈಸ್ ಆಗುವುದಿಲ್ಲ. ನಾವು ದೇಶದ ಜನರಿಗೆ ಎಂತಹದೇ ಸಂದರ್ಭ ಬಂದರೂ ಮೋಸ ಮಾಡಿ ಬಿಟ್ಟು ಹೋಗುವುದಿಲ್ಲ ಎಂದು ಭರವಸೆ ನೀಡಿದರು.

ಇದೇ ವೇಳೆ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಈ ಸರ್ಕಾರದ ಆಡಳಿತದಲ್ಲಿ ದೇಶದ ಪ್ರಜೆಗಳ ಎಲ್ಲಾ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತಿದೆ. ಆರ್ಥಿಕ ಸುಧಾರಣೆಯ ಹೆಸರಿನಲ್ಲಿ ಸರ್ಕಾರದ ಆಸ್ತಿಗಳನ್ನು ಅದಾನಿ ಅಂಬಾನಿಗಳಿಗೆ ಮಾರಿದ ಸರ್ಕಾರ ಕೊನೆಗೆ ಮೈಸೂರಿನ ಲಲಿತ್ ಮಹಲ್ ಅನ್ನೂ ಬಿಡದೇ ಖಾಸಗಿಯವರಿಗೆ ಮಾರಿದೆ ಎಂದ ಅವರು ಎಸ್‌ಡಿಪಿಐ ಈ ದೇಶದ ಶೋಷಿತ ಸಮುದಾಯಗಳ ವಿಮೋಚನೆಗಿರುವ ದಾರಿಯಾಗಿದ್ದು ಎಂತಹ ಕಠಿಣ ಸಂದರ್ಭಗಳಲ್ಲೂ ಪಕ್ಷ ಈ ಶೋಷಿತ ಸಮುದಾಯಗಳ ಜೊತೆ ನಿಲ್ಲಲಿದೆ ಎಂದರು.

75 ವರ್ಷಗಳಿಂದ ದೇಶದಲ್ಲಿ ರಾಜಕೀಯ ನ್ಯಾಯ ಯಾರಿಗೂ ದೊರೆತ್ತಿಲ್ಲ. ರಾಜ್ಯದಲ್ಲಿ ಒಂದು ಕೋಟಿ ಮಂದಿ ದಲಿತರು, ಒಂದು ಕೋಟಿ ಮುಸ್ಲಿಂಮರು ಇದ್ದಾರೆ. ಯಾವ ರಾಜಕೀಯ ಪಕ್ಷಗಳು ಅವರನ್ನು ಮುಖ್ಯಮಂತ್ರಿ ಮಾಡಿಲ್ಲ. ಹಾಗೂ ಕಳೆದ ಎಂಟು ವರ್ಷಗಳ ಅವಧಿಯಲ್ಲಿ ಮುಸ್ಲಿಂ ಎಂಪಿಯಾಗಿಲ್ಲ. ವಿಧಾನ ಸಭೆಯಲ್ಲಿ ಏಳು ಮಂದಿ ಮಾತ್ರ ಶಾಸಕರಿದ್ದಾರೆ ಇದೇನಾ ರಾಜಕೀಯ ನ್ಯಾಯ ಎಂದು ಪ್ರಶ್ನಿಸಿದರು.

ಹಲವಾರು ವರ್ಷಗಳಿಂದ ಮುಸ್ಲಿಂ ಸಮುದಾಯದವರು ಕಾಂಗ್ರೆಸ್ ಓಟು ನೀಡಿ ಅಧಿಕಾರ ನೀಡುತ್ತ ಬಂದಿದ್ದಾರೆ. ಆದರೆ ಆ ಪಕ್ಷದ ಯಾವ ಒಬ್ಬ ನಾಯಕ ಹಿಜಾಬ್ ವಿಚಾರವಾಗಿ ಮಾತನಾಡಲಿಲ್ಲ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಇದರ ಬಗ್ಗೆ ಯಾರು ಮಾತನಾಡಬೇಡಿ ಎಂದು ಆದೇಶ ಮಾಡುತ್ತಾರೆ. ನಮ್ಮ ದೇಶದಲ್ಲಿ ರಾಜಕೀಯ ಪಕ್ಷಗಳನ್ನು ಜನರು ಯಾವ ವಿಚಾರವಾಗಿ ಪ್ರಶ್ನೆ ಮಾಡಬೇಕು ಎಂಬ ಉದ್ದೇಶಕ್ಕಾಗಿಯೇ ಜನಾಧಿಕಾರ ಸಮಾವೇಶ ಆಯೋಜಿಸುತ್ತಿರುವುದು ಎಂದರು.

ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಆರ್.ಭಾಸ್ಕರ್ ಪ್ರಸಾದ್ ಮಾತನಾಡಿ, ಬಿಜೆಪಿ ಸರ್ಕಾರದ ಆಡಳಿತದಲ್ಲಿ ಮೈಸೂರಿನಲ್ಲಿ ಫಾರೂಖಿಯಾ ಶಾಲೆ ಮುಚ್ಚಿದಾಗ, ಚಿಕ್ಕಮಗಳೂರಿನಲ್ಲಿ ಬಡವರ ಮನೆಗಳ ಬುಲ್ಡೋಜರ್ ಹಾಯಿಸಿದಾಗ ಮಾತನಾಡದ ಸಿದ್ದರಾಮಯ್ಯ ಅದ್ದೂರಿ ಹುಟ್ಟುಹಬ್ಬದ ಆಚರಣೆಯ ಸಿದ್ಧತೆಯಲ್ಲಿದ್ದಾರೆ. ಈ ಕಾರಣಕ್ಕಾಗಿ ನಾವು ಅವರಿಗೆ ಹ್ಯಾಪಿ ಬರ್ತ್ ಡೇ ಹೇಳಬೇಕೇ ಎಂದು ವ್ಯಂಗ್ಯವಾಡಿದರು.

ನಂತರ ಎಸ್‌ಡಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಅಲ್ಫೋನ್ಸ್ ಫ್ರ್ಯಾಂಕೋ, ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ಪ್ರೊ. ಸಯಿದಾ ಸಾದಿಯಾ, ರಾಜ್ಯ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಲತೀಫ್, ಅಫ್ಸರ್ ಕೊಡ್ಲಿಪೇಟೆ, ರಾಜ್ಯ ಸಮಿತಿ ಸದಸ್ಯ ಅಬ್ದುಲ್ ಹನ್ನಾನ್, ಮೌಲಾನಾ ನೂರುದ್ದಿನ್ ಫಾರೂಕಿ, ಮೈಸೂರು ಜಿಲ್ಲಾಧ್ಯಕ್ಷ ರಫತುಲ್ಲಾ ಖಾನ್ ಮಾತನಾಡಿದರು.

ಸಮಾವೇಶದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಶಾಫಿ ಬೆಳ್ಳಾರೆ, ರಾಜ್ಯ ಸಮಿತಿ ಸದಸ್ಯ ರಿಯಾಜ್ ಕಡಂಬು, ದಲಿತ ಮುಖಂಡ ಚೋರನಹಳ್ಳಿ ಶಿವಣ್ಣ, ಲಕ್ಷ್ಮಣ್ ಚೀರಣಹಳ್ಳಿ, ಮಾಜಿ ಕಾರ್ಪೋರೇಟರ್ ಸ್ವಾಮಿ, ಅಬೂಬಕ್ಕರ್ ಕುಳಾಯಿ, ಮಜಾಜ್ ಹುಣಸೂರು, ಸಿದ್ದಿಕ್ ಆನೆಮಹಲ್, ಖಲೀಲ್ ಮಡಿಕೇರಿ, ಸಾದಾತ್ ಮಂಡ್ಯ ಮತ್ತಿತರರು ಭಾಗವಹಿಸಿದರು.

ಪ್ರಬಂಧ ಮಂಡನೆ



ಮೈಸೂರು: ಸಿಂಗಾಪೂರ್‌ನಲ್ಲಿ ಇಂಟರ್ ನ್ಯಾಷನಲ್ ಕಲ್ಚರಲ್ ಫೆಸ್ಟ್ ಕೌನ್ಸಿಲ್ ಆಫ್ ಇಂಡಿಯಾ ಸಂಸ್ಥೆಯು ಏರ್ಪಡಿಸಿದ್ದ ಭಾರತೀಯ ಸಂಸ್ಕೃತಿ ಸಮ್ಮೇಳನದ ಸೆಮಿನಾರ್‌ನಲ್ಲಿ ಮೈಸೂರಿನ ಡಾ.ಪ್ರಶಾಂತ್ 'ಕಾಂಟ್ರಿಬ್ಯೂಷನ್ ಆಫ್ ಆದಿ ಶಂಕರಾಸ್ ಫಿಲಾಸಫಿ ರಿಲೇಟಿಂಗ್ ಟು ಗ್ಲೋಬಲ್ ಪೀಸ್ ಅಂಡ್ ಹಾರ್ಮೋನಿ' ಪ್ರಬಂಧವನ್ನು ಮಂಡಿಸಿದರು.

ಎಂ.ಆರ್.ನರಸಿಂಹಮೂರ್ತಿ ನಿಧನ

ಮೈಸೂರು, ಜು.17– ಮೈಸೂರಿನ ಗೊಲ್ಲಗೇರಿ ನಿವಾಸಿ ಎಂ.ಆರ್.ನರಸಿಂಹಮೂರ್ತಿ(71) ಶನಿವಾರ ನಿಧನರಾದರು.



ಮೃತರು ಪತ್ನಿ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಿಲ್ಯಾಕ್ಸ್ ಮೂಡ್‌ನಲ್ಲಿ ಸಿದ್ದರಾಮಯ್ಯ

ಗಂಟೆಗೂ ಹೆಚ್ಚು ಕಾಲ ರಾಜಕೀಯ ಮರೆತು ಕುಸ್ತಿ ಪಂದ್ಯಾವಳಿ ವೀಕ್ಷಣೆ



ಮೈಸೂರು, ಜು.17(ಜಿಎ)– ರಾಜಕೀಯ ಜಂಜಾಟಗಳ ನಡುವೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕುಸ್ತಿ ಪಂದ್ಯಾವಳಿ ವೀಕ್ಷಿಸುವ ಮೂಲಕ ರಿಲ್ಯಾಕ್ಸ್ ಮೂಡಿನಲ್ಲಿ ಕಾಲ ಕಳೆದರು. ಈ ವೇಳೆ 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ' ಎಂಬ ಘೋಷಣೆಗಳು ಮೊಳಗಿದವು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬದ ಅಂಗವಾಗಿ ಕಾಳ ಸಿದ್ದನಹುಂಡಿ ಗ್ರಾಮದ ಅಖಿಲ ಕರ್ನಾಟಕ ಬಡವರ ಬಂಧು ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ವತಿಯಿಂದ ಮೈಸೂರಿನ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ 30 ಜೊತೆ ಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.

ಕುಸ್ತಿ ಪಂದ್ಯಾವಳಿಯನ್ನು ವೀಕ್ಷಿಸಲು ಬಂದ ಸಿದ್ದರಾಮಯ್ಯ ಅವರು ಒಂದು ಗಂಟೆಗೂ ಹೆಚ್ಚು ಕಾಲ ವಿವಿಧ ಕುಸ್ತಿ ಪಂದ್ಯಗಳನ್ನು ವೀಕ್ಷಿಸಿದರು. ದಾವಣಗೆರೆಯ ಪೈಲ್ವಾನ್ ಕಾರ್ತಿಕ್ ಕಾಟೆ ಮತ್ತು ಹರಿಯಾಣದ ಪೈಲ್ವಾನ್ ಪ್ರವೀಣ್ ಕುಮಾರ್ ಅವರ ನಡುವೆ ನಡೆದ ರೋಚಕ ಪಂದ್ಯವನ್ನು ಕುತೂಹಲದಿಂದ ನೋಡಿ ಆನಂದಿಸಿದರು. ನಂತರ ಈ ಪಂದ್ಯದಲ್ಲಿ ವಿಜೇತರಾದ ಪೈಲ್ವಾನ್ ಕಾರ್ತಿಕ್ ಕಾಟೆಯನ್ನು ಅಭಿನಂದಿಸಿದರು.

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕಾಂಗ್ರೆಸ್ ಮುಖಂಡರಾದ ಶಿವಣ್ಣ, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಕುಸ್ತಿ ವ್ಯವಸ್ಥಾಪಕ ಪೈಲ್ವಾನ್ ಕೃಷ್ಣ, ಕಾಳ ಸಿದ್ದನಹುಂಡಿ ಗ್ರಾಮದ ಮುಖಂಡರು ಸೇರಿದಂತೆ ಮತ್ತಿತರರಿದ್ದರು.

'ಅನಾಥ ಶವಗಳ ತ್ರಿವಿಕ್ರಮ' ಖ್ಯಾತಿಯ ಮಹದೇವ್ ನಿಧನ

ಬೆಂಗಳೂರು, ಜು.17– ಅನಾಥ ಶವಗಳ ಅಂತ್ಯಸಂಸ್ಕಾರದ ಮೂಲಕ 'ಅನಾಥ ಶವಗಳ ತ್ರಿವಿಕ್ರಮ' ಎಂದೇ ಖ್ಯಾತಿ ಪಡೆದಿದ್ದ ಎಂ.ಮಹದೇವ್ ನಿಧನರಾಗಿದ್ದಾರೆ.



ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿ ನೆಲೆಸಿದ್ದ ಮಹದೇವ್ ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಕ್ಯಾನ್ಸರ್‌ನಿಂದ ಮಹದೇವ್ ಅವರನ್ನು ಕೆಲ ದಿನಗಳ ಹಿಂದೆಯಷ್ಟೇ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮಹದೇವ್ ಅವರು ನಿಧನರಾಗಿದ್ದಾರೆ.

ಮೂಲಗಳ ಪ್ರಕಾರ, ಮಹದೇವ್ 9ನೇ ವಯಸ್ಸಿನಿಂದಲೇ ಅನಾಥ ಶವಗಳ ಅಂತ್ಯ ಸಂಸ್ಕಾರ ನೆರವೇರಿಸಲಾರಂಭಿಸಿದ್ದರು. ಅಪಘಾತ, ಆತ್ಮಹತ್ಯೆ ಹೀಗೆ ಹಲವು ಕಾರಣಗಳಿಂದ ಮೃತಪಡುತ್ತಿದ್ದ ಅನಾಥ ಶವಗಳನ್ನು ಮರಣೋತ್ತರ ಪರೀಕ್ಷೆ ಬಳಿಕ ಕೊಂಡೊಯ್ಯುತ್ತಿದ್ದ ಮಹದೇವ, ಸಂಬಂಧಿಕರ ಸ್ಥಾನದಲ್ಲಿ ನಿಂತು ಅಂತ್ಯ ಸಂಸ್ಕಾರ ನೆರವೇರಿಸುತ್ತಿದ್ದರು. ಪೊಲೀಸರು ಹಾಗೂ ವೈದ್ಯರು ಮಹದೇವ ಅವರನ್ನು 'ಅನಾಥ ಶವಗಳ ತ್ರಿವಿಕ್ರಮ' ಎಂದೇ ಕರೆಯುತ್ತಿದ್ದರು. ಶವಗಳನ್ನು ಟಾಂಗಾ (ಕುದುರೆ ಗಾಡಿ) ಬಳಿಕ ಆಟೊದಲ್ಲಿ ಸ್ಮಶಾನಕ್ಕೆ ಸಾಗಿಸುತ್ತಿದ್ದ ಮಹದೇವ್ ಅವರಿಗೆ ಐಎಎಸ್ ಅಧಿಕಾರಿ ಮದನ್ ಗೋಪಾಲ್ ಈ ಹಿಂದೆ ಒಮ್ನಿ ವಾಹನ ನೀಡಿದ್ದರು. ನಂತರ, ಅದರಲ್ಲೇ ಶವ ಸಾಗಣೆ ಮುಂದುವರಿದಿತ್ತು. 51 ವರ್ಷಗಳ ನಿರಂತರ ಕೆಲಸದಲ್ಲಿ ಮಹದೇವ ಅವರು 1 ಲಕ್ಷಕ್ಕಿಂತ ಹೆಚ್ಚು ಅನಾಥ ಶವಗಳ ಅಂತ್ಯಸಂಸ್ಕಾರ ನೆರವೇರಿಸಿದ್ದಾರೆಂದು ವಿಕ್ಟೋರಿಯಾ ಆಸ್ಪತ್ರೆ ವೈದ್ಯರು ಹೇಳುತ್ತಾರೆ.

ಮಹದೇವ್ ಅವರ ಕೆಲಸಕ್ಕೆ ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ನಮ್ಮ ಬೆಂಗಳೂರು ಪ್ರತಿಷ್ಠಾನದ ಪ್ರಶಸ್ತಿ ಲಭಿಸಿತ್ತು.

ಶವಸಂಸ್ಕಾರ ಕಾರ್ಯ ಮಕ್ಕಳಿಂದ ಕೆಲಸ ಮುಂದುವರಿಕೆ: ಮಹದೇವ್ ಅವರ ನಿಧನದ ಬಳಿಕವೂ ಅನಾಥ ಶವಗಳ ಸಂಸ್ಕಾರ ಕಾರ್ಯ ಮುಂದುವರೆಯಲಿದೆ ಎಂದು ಕುಟುಂಬಸ್ಥರು ಹೇಳಿದ್ದಾರೆ. ಮಹದೇವ್ ಅವರ ಕೆಲಸವನ್ನು ಮಕ್ಕಳಾದ ಪ್ರವೀಣ್ ಹಾಗೂ ಕಿರಣ್ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಪಿಎಸ್‌ಎಸ್‌ಕೆ ಕಾರ್ಖಾನೆಯಿಂದ ರೈತರಿಗೆ ಅನುಕೂಲ

ಎಂಆರ್‌ಎನ್ ಆಡಳಿತ ನಿರ್ದೇಶಕ ಸಂಗಮೇಶ್ ನಿರಾಣಿ ಭರವಸೆ



ಪಾಂಡವಪುರ, ಜು.17– ರೈತರಿಗೆ ಅನುಕೂಲವಾಗುವಂತೆ ಪಿಎಸ್‌ಎಸ್‌ಕೆ ಕಾರ್ಖಾನೆ ನಡೆಸಲಾಗುವುದು ಎಂದು ಎಂಆರ್‌ಎನ್ ಆಡಳಿತ ನಿರ್ದೇಶಕ ಸಂಗಮೇಶ್ ನಿರಾಣಿ ತಿಳಿಸಿದರು.

ಎಂಆರ್‌ಎನ್ ಸಂಸ್ಥೆಗೆ ಗುತ್ತಿಗೆ ನೀಡಲಾಗಿರುವ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ(ಪಿಎಸ್‌ಎಸ್‌ಕೆ)ಯ 2022–23ನೇ ಸಾಲಿನ ಕಬ್ಬು ಅರೆಯುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾರ್ಖಾನೆ ಆರಂಭಿಸುವುದಕ್ಕೂ ಮೊದಲು ಹಲವು ರೈತರು, ಮುಖಂಡರೊಂದಿಗೆ ಸಭೆ ನಡೆಸಿದ್ದೇವೆ. ರೈತರಿಂದ ಹಲವು ಸಲಹೆಗಳನ್ನು ಪಡೆದುಕೊಂಡಿದ್ದೇವೆ. ಕಬ್ಬು ಸಾಗಾಣಿಕೆ ಹಾಗೂ ಕಟಾವು ಮಾಡುವ ಸಂದರ್ಭದಲ್ಲಿ ರೈತರು ಅಕಾಲಿಕವಾಗಿ ಸಾವನ್ನಪ್ಪಿದರೆ ಅವರಿಗೆ ಪರಿಹಾರ ನೀಡುವಂತೆ ಮನವಿ ಮಾಡಿದ್ದಾರೆ. ಅದೇ ರೀತಿ ಒಂದು ವೇಳೆ ಅಕಾಲಿಕ ಮರಣ ಹೊಂದಿದ ಕಾರ್ಮಿಕರು ಹಾಗೂ ರೈತರಿಗೆ ಲಕ್ಷದವರೆಗೆ ಪರಿಹಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಎಂಆರ್‌ಎನ್ ಸಂಸ್ಥೆಯ ಅಧ್ಯಕ್ಷರಾಗಿರುವ ಮುರುಗೇಶ್ ನಿರಾಣಿ ಅವರು ಜಿಲ್ಲೆಯ ರೈತರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಪಿಎಸ್‌ಎಸ್‌ಕೆ ಕಾರ್ಖಾನೆ ಗುತ್ತಿಗೆ ಪಡೆದು ನಡೆಸುತ್ತಿದ್ದಾರೆ. ರೈತರಿಗೆ ಎಲ್ಲಾ ರೀತಿಯ ಅನುಕೂಲ ಮಾಡಿಕೊಡಿ ರೈತರು ಖುಷಿಯಿಂದ ಕಾರ್ಖಾನೆಗೆ ಕಬ್ಬು ನೀಡಿದರೆ ಕಾರ್ಖಾನೆ ಹಾಗೂ ನಮಗೂ ಒಳ್ಳೆಯದಾಗಲಿದೆ ಎಂದು ಮುರುಗೇಶ್ ನಿರಾಣಿ ಅವರು ತಿಳಿಸಿದ್ದಾರೆ. ಅದರಂತೆ ರೈತರಿಗೆ ಅನುಕೂಲವಾಗುವಂತೆ ಕಾರ್ಖಾನೆಯನ್ನು ನಡೆಸುತ್ತೇವೆ ಎಂದು ತಿಳಿಸಿದರು.

ಕಾರ್ಖಾನೆಯಲ್ಲಿ ಯಾವುದೇ ಉಪ ಉತ್ಪನ್ನಗಳು ಇಲ್ಲ. ಬರೀ ಸಕ್ಕರೆ ಉತ್ಪಾದನೆ ಮಾಡಿ ಕಾರ್ಖಾನೆ ನಡೆಸುವುದು ಕಷ್ಟ, ಮುಂದಿನ ದಿನಗಳಲ್ಲಿ ಕಾರ್ಖಾನೆಯಲ್ಲಿ ಉಪ ಉತ್ಪನ್ನಗಳನ್ನು ಆರಂಭಿಸಲಾಗುವುದು. ಎಥೆನಾಲ್ ಉತ್ಪಾದನೆಯಲ್ಲಿ ಎಂಆರ್‌ಎನ್ ಸಂಸ್ಥೆಯು ದೇಶದಲ್ಲಿ ಮೊದಲ ಸ್ಥಾನದಲ್ಲಿ ಶೀಘ್ರವೇ ಪ್ರಪಂಚದಲ್ಲಿ ಮೊದಲ ಸ್ಥಾನಕ್ಕೆ ಏರಲಿದೆ ಎಂದರು.

ಕಬ್ಬು ಕಟಾವು ಮಾಡುವುದಕ್ಕಾಗಿ ಕಾರ್ಮಿಕರಿಗೆ ಯಾವುದೇ ತೊಂದರೆಯಾಗಂತೆ ಕೊಪ್ಪಳ ಜಿಲ್ಲೆಯಿಂದ ಕಾರ್ಮಿಕರನ್ನು ಕರೆಸಲಾಗಿದೆ. ರೈತರು ಕಬ್ಬು ಕಟಾವು ಮಾಡಲು ಕಾರ್ಖಾನೆ ನಿಗದಿ ಮಾಡುವ ದರಕ್ಕೆ ಬದ್ಧರಾಗಿ ಸಹಕರಿಸಬೇಕು ಎಂದು ತಿಳಿಸಿದರು. ಮಾಜಿ ಅಧ್ಯಕ್ಷ ನಾಗರಾಜಪ್ಪ ಮಾತನಾಡಿ, ಜಿಲ್ಲೆಯಲ್ಲಿ ಇದ್ದ ಎರಡು ಸಕ್ಕರೆ ಕಾರ್ಖಾನೆಗಳು ಸ್ಥಗಿತಗೊಂಡಿದ್ದವು. ಆ ಸಂದರ್ಭದಲ್ಲಿ ಮಂಡ್ಯ ಮೈಷುಗರ್, ಪಿಎಸ್‌ಎಸ್‌ಕೆ ಕಾರ್ಖಾನೆಯನ್ನು ಹಿಂದಿನ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ಆರಂಭಿಸಿ ಜಿಲ್ಲೆಯ ಜನರಿಗೆ ನೆರವಾದರು ಎಂದರು.

ಕಾರ್ಯಕ್ರಮದಲ್ಲಿ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ವಚನಾನಂದ ಮಹಾಸ್ವಾಮೀಜಿ, ಬೇಬಿ ಮಠದ ಶ್ರೀತ್ರಿನೇತ್ರಮಹಾಂತ ಶಿವಯೋಗಿ ಸ್ವಾಮೀಜಿ, ಎಂಎಲ್‌ಸಿ ಮಧು ಮಾದೇಗೌಡ, ಪಿಎಸ್‌ಎಸ್‌ಕೆ ಕಾರ್ಖಾನೆ ಮಾಜಿ ಅಧ್ಯಕ್ಷ ಡಾ.ಎಂ.ಮಾಯಿಗೌಡ, ಗ್ರಾಪಂ ಅಧ್ಯಕ್ಷೆ ಶ್ವೇತಾ ಸುರೇಶ್, ಬಿಜೆಪಿ ಮುಖಂಡ ಡಾ.ಎನ್.ಎಸ್.ಇಂದ್ರೇಶ್, ವ್ಯವಸ್ಥಾಪಕ ನಿರ್ದೇಶಕ ವಿಕ್ರಮರಾಜ ಅರಸ್, ಸಿಇಓ ಶಿವಾನಂದ ಸಲಹೆಗಾರ ಸೇರಿದಂತೆ ಇತರರಿದ್ದರು.

ಶಾಸಕರ ವಿರುದ್ಧ ಪ್ರತಿಭಟನೆ ರಾಜಕೀಯ ಪ್ರೇರಿತ



ನಾಗಮಂಗಲ,ಜು.17–ಶಾಸಕ ಸುರೇಶ್‌ಗೌಡ ಅವರ ವಿರುದ್ಧ ಪುರಸಭಾ ಕಾಂಗ್ರೆಸ್ ಸದಸ್ಯರು ನಡೆಸಿದ ಪ್ರತಿಭಟನೆ ಕೇವಲ ರಾಜಕೀಯ ಪ್ರೇರಿತವಾಗಿದೆ ಎಂದು ಪುರಸಭಾ ಅಧ್ಯಕ್ಷೆಆಶಾ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನುದಾನದ ಹಂಚಿಕೆಯಲ್ಲಿ ಶಾಸಕ ಸುರೇಶ್‌ಗೌಡರು ತಾರತಮ್ಯ ಮಾಡುತ್ತಿದ್ದಾರೆ ಎಂಬ ಕಾಂಗ್ರೆಸ್ ಸದಸ್ಯರ ಆರೋಪ ರಾಜಕೀಯ ಪ್ರೇರಿತವಾಗಿದೆ. ನಗರೋತ್ಥಾನದಲ್ಲಿ ಬಂದಿರುವ 10 ಕೋಟಿ ಅನುದಾನದಲ್ಲಿ ವಾರ್ಡ್‌ನ ಸಮಸ್ಯೆಗಳಿಗೆ ಅನುಗುಣವಾಗಿ 5ನೇ ವಾರ್ಡ್‌ಗೆ 34.72ಲಕ್ಷ ರೂ., 12ನೇ ವಾರ್ಡ್‌ಗೆ 12.22 ಲಕ್ಷ ರೂ., 22ನೇ ವಾರ್ಡ್‌ಗೆ 14 ಲಕ್ಷ ರೂ. ಅನುದಾನ ಹಂಚಿಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಕಳೆದ ಎರಡು ದಿನಗಳಿಂದ ಕಾಂಗ್ರೆಸ್ ಸದಸ್ಯರು ನಡೆಸುತ್ತಿರುವ ಪ್ರತಿಭಟನೆಯಲ್ಲಿ ಯಾವುದೇ ಹುರುಳಿಲ್ಲ, ಹೋರಾಟ ರಾಜಕೀಯ ಪ್ರೇರಿತವಾಗಿದೆ ಎಂದು ದೂರಿದರು.

ಸ್ಥಾಯಿ ಸಮಿತಿ ಅಧ್ಯಕ್ಷ ಚನ್ನಪ್ಪ ಮಾತನಾಡಿ, ಪುರಸಭೆ ವ್ಯಾಪ್ತಿಯಲ್ಲಿ 23 ವಾರ್ಡ್‌ಗಳಲ್ಲಿ ಹೊಸದಾಗಿ ರಚಿತವಾಗಿರುವ 7 ವಾರ್ಡ್‌ಗಳಿಗೆ ಅಭಿವೃದ್ಧಿ ದೃಷ್ಟಿಯಿಂದ ಹೆಚ್ಚಿನ ಅನುದಾನ ನೀಡಲಾಗಿದೆ. ಈ ಪೈಕಿ ಮೂರು ಮಂದಿ ಕಾಂಗ್ರೆಸ್ ಸದಸ್ಯರಿದ್ದಾರೆ. ಆದರೂ, ಜೆಡಿಎಸ್ ಸದಸ್ಯರ ಮೇಲೆ ಆರೋಪ ಮಾಡುತ್ತಿದ್ದಾರೆ ಎಂದರು. ಪುರಸಭಾ ಸದಸ್ಯ ಶಂಕರ್ ಲಿಂಗೇಗೌಡ ಮಾತನಾಡಿ, ಅಭಿವೃದ್ಧಿ ವಿಚಾರದಲ್ಲಿ ಶಾಸಕ ಸುರೇಶ್‌ಗೌಡ ಅವರು ಪಕ್ಷಾತೀತವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾಂಗ್ರೆಸ್ ಸದಸ್ಯರು ಆರೋಪ ಮಾಡುತ್ತಿರುವುದು ಖಂಡಿಸುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಪುರಸಭಾ ಉಪಾಧ್ಯಕ್ಷ ಜಾಫರ್‌ಷರೀಫ್ ಇದ್ದರು.

ಸಮಾಜದ ಸಮಸ್ಯೆ ಗುರುತಿಸುವ ವರದಿ ಅಗತ್ಯ



ಶ್ರೀರಂಗಪಟ್ಟಣ, ಜು.17–ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ 2022–2025ನೇ ಸಾಲಿನ ಪತ್ರಕರ್ತರ ಆಡಳಿತ ಮಂಡಳಿ ಅಧಿಕಾರ ಸ್ವೀಕಾರ ಹಾಗೂ ಪತ್ರಿಕಾ ದಿನಾಚರಣೆ ಸಮಾರಂಭವನ್ನು ಶಾಸಕ ರವೀಂದ್ರ ಶ್ರೀಕಂಠಯ್ಯ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಸಮಾಜದ ಸುಧಾರಣೆಗೆ ಪ್ರತಿದಿನ ತೊಡಗಿಕೊಂಡಿರುವ ಪತ್ರಕರ್ತರಿಗೂ ಒಂದು ದಿನ ನಿಗದಿ ಮಾಡಿ ಪತ್ರಿಕಾ ದಿನಾಚರಣೆ ಆಚರಿಸುತ್ತಿರುವುದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ. ಪ್ರಸ್ತುತ ವ್ಯವಸ್ಥೆಯನ್ನು ನೇರವಾಗಿ, ದಿಟ್ಟವಾಗಿ ಸಾರ್ವಜನಿಕರಿಗೆ ತಲುಪಿಸುವ ಜವಾಬ್ದಾರಿ ಪತ್ರಕರ್ತರದ್ದಾಗಿದೆ. ಸಮಾಜದಲ್ಲಿರುವ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ವರದಿಗಳನ್ನು ಮುಕ್ತವಾಗಿ ಮಾಡಬೇಕು ಎಂದರು.

ಪತ್ರಕರ್ತರ ಸಂಘದ ನೂತನ ಮಂಡಳಿ ವ್ಯವಸ್ಥಿತ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಜೊತೆಗೆ ತಮ್ಮ ಕುಟುಂಬದ ರಕ್ಷಣೆ ಹಾಗೂ ಅಭಿವೃದ್ಧಿಯ ಬಗ್ಗೆ ಯೋಜನೆ ರೂಪಿಸಬೇಕು. ದೈವ ಸಂಕಲ್ಪದಿಂದ ಕೃಷ್ಣರಾಜ ಸಾಗರ ಜಲಾಶಯ ತುಂಬಿದ್ದು, ರೈತಾಪಿ ವರ್ಗ ಹಾಗೂ ನದಿ ಪಾತ್ರದಲ್ಲಿರುವ ಜನರು ಮುನ್ನೆಚ್ಚರಿಕೆ ವಹಿಸಬೇಕು ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ಮತ್ತೀಕೆರೆ ಜಯರಾಮ್ ಮಾತನಾಡಿ, ಪತ್ರಕರ್ತರ ಜೀವನಕ್ಕೆ ಭದ್ರತೆ ಇಲ್ಲ. ಪತ್ರಕರ್ತರಿಗೆ ಕ್ಷೇಮನಿಧಿ ಮತ್ತು ಸಣ್ಣ ಬಡಾವಣೆ ನಿರ್ಮಾಣಕ್ಕೆ ಶಾಸಕ ರವೀಂದ್ರ ಶ್ರೀಕಂಠಯ್ಯ, ಯುವ ನಾಯಕ ಸಚ್ಚಿದಾನಂದ ಅವರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ಮಾತನಾಡಿದರು. ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ಸಿ.ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಶ್ರೀರಂಗಪಟ್ಟಣ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಗಂಜಾಂ ಮಂಜು, ಪ್ರಧಾನ ಕಾರ್ಯದರ್ಶಿಯಾಗಿ ಎಲ್.ವಿ.ನವೀನ್ ಕುಮಾರ್ ಅಧಿಕಾರ ಸ್ವೀಕರಿಸಿದರು.

ಇದೇ ವೇಳೆ ಪತ್ರಿಕಾ ವಿತರಕರಿಗೆ ಸನ್ಮಾನ ಮಾಡಲಾಯಿತು. ಜಿಪಂ ಮಾಜಿ ಸದಸ್ಯ ಎಸ್.ಎಲ್.ಲಿಂಗರಾಜು, ಉದ್ಯಮಿ ದೊಡ್ಡೇಗೌಡನ ಕೊಪ್ಪಲು ಮಧುಸೂದನ್, ಟಿ.ಶ್ರೀಧರ್, ಪುರಸಭೆ ಅಧ್ಯಕ್ಷೆ ನಿರ್ಮಲಾ ವೇಣುಗೋಪಾಲ್, ಉಪಾಧ್ಯಕ್ಷ ಕೃಷ್ಣಪ್ಪ, ಪತ್ರಕರ್ತರಾದ ಸೋಮಶೇಖರ್, ಕೆ.ಎನ್.ನವೀನ್ ಕುಮಾರ್, ನಂಜುಂಡಸ್ವಾಮಿ, ಕಸಾಪ ಜಿಲ್ಲಾ ಅಧ್ಯಕ್ಷ ರವಿಕುಮಾರ್ ಇದ್ದರು.

ಬಾಯಿ, ಹಲ್ಲಿನ ಆರೋಗ್ಯ ಕಾಪಾಡಿಕೊಳ್ಳಿ: ಡಿಹೆಚ್‌ಓ ಧನಂಜಯ



ಮಂಡ್ಯ, ಜು.17– ಎಲ್ಲಾ ಅನಾರೋಗ್ಯಕ್ಕೂ ದಂತ ಮೂಲ ಕಾರಣ. ನಾವು ಆಹಾರ ಸೇವಿಸುವುದು ಬಾಯಿಯಿಂದ ಹಾಗಾಗಿ, ಬಾಯಿ ಮತ್ತು ಹಲ್ಲಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಟಿ.ಎನ್.ಧನಂಜಯ ತಿಳಿಸಿದರು.

ನಗರದ ಜೆ.ಎಲ್.ಜವರೇಗೌಡ ಸಭಾಂಗಣದಲ್ಲಿ ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಬಾಯಿ ಆರೋಗ್ಯ ಕಾರ್ಯಕ್ರಮ ಮತ್ತು ದಂತಭಾಗ್ಯ ಯೋಜನೆಯ ಕತೃಕ ದಂತ ಜೋಡಣಾ ವಿಭಾಗ, ದಂತ ವೈದ್ಯಕೀಯ ಕಾಲೇಜು, ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಇವರ ವತಿಯಿಂದ ನಡೆದ ದಂತಭಾಗ್ಯ ಸಪ್ತಾಹ–2022 ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಾಮಾನ್ಯವಾಗಿ ಯಾರೂ ಸಹ ಹಲ್ಲಿನ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುವುದಿಲ್ಲ. ಹಲ್ಲು ನೋವು ಬಂದಾಗಷ್ಟೇ ಹಲ್ಲಿನ ಬಗ್ಗೆ ನಿಗಾ ವಹಿಸುತ್ತೇವೆ. ಇದು ಸರಿಯಲ್ಲ. ಹಲ್ಲಿನ ಸ್ವಚ್ಛತೆ, ಆರೋಗ್ಯದ ಬಗ್ಗೆ ಎಚ್ಚರ ವಹಿಸುವುದು ಮುಖ್ಯ ಎಂದು ಹೇಳಿದರು.

ವಯಸ್ಸಾದವರ ಹಲ್ಲಿನ ಬಗ್ಗೆಯೂ ನಾವು ನಿರ್ಲಕ್ಷ್ಯ ವಹಿಸುತ್ತೇವೆ. ಅವರಿಗೆ ಎಲ್ಲಾ ಹಲ್ಲು ಕೊಳೆತು ಹೋಗಿರುತ್ತವೆ. ಕೆಲವು ಬಿದ್ದು ಹೋಗಿರುತ್ತವೆ. ಹಾಗಾಗಿ, ಇನ್ನು ಏಕೆ ಹಲ್ಲುಗಳು ಎಂಬ ತಾತ್ಸಾರ ಮನೋಭಾವನೆ ತಾಳುತ್ತೇವೆ. ಇದು ಸರಿಯಲ್ಲ ಎಂದರು.

ಈ ಕಾರಣಕ್ಕಾಗಿಯೇ 45 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಹಲ್ಲಿನ ಆರೋಗ್ಯ ಕಾಪಾಡುವ ಉದ್ದೇಶದಿಂದ ಸರ್ಕಾರ ದಂತ ಭಾಗ್ಯ ಯೋಜನೆಯನ್ನು ರೂಪಿಸಿದೆ. ಖಾಸಗೀ ದಂತ ವೈದ್ಯ ಕಾಲೇಜು ಮತ್ತು ಇತರೆ ಖಾಸಗಿ ಸಂಸ್ಥೆಗಳ ವತಿಯಿಂದ ಈ ಕಾರ್ಯವನ್ನು ಸಾಕಾರಗೊಳಿಸಲಾಗುತ್ತಿದ್ದು, ಇದನ್ನು ಪ್ರತಿಯೊಬ್ಬರೂ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದು.

ಮಂಡ್ಯ ಜಿಲ್ಲೆಯ 10 ಸಮುದಾಯ ಆಸ್ಪತ್ರೆಗಳು, 6 ತಾಲೂಕು ಆಸ್ಪತ್ರೆಗಳಲ್ಲೂ ದಂತ ವೈದ್ಯರು ಕೆಲಸ ಮಾಡುತ್ತಿದ್ದಾರೆ. ಯಾವುದೇ ಹಲ್ಲಿನ ಸಮಸ್ಯೆ ಬಂದಾಗಲೂ ಸಹ ಸರ್ಕಾರಿ ಆಸ್ಪತ್ರೆಗೆ ತೆರಳಿ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನೋಡಲ್ ಅಧಿಕಾರಿ ಡಾ.ಹೆಚ್.ಆರ್.ಅರುಣಾನಂದ, ಎಂ.ಎಸ್.ರಾಮಯ್ಯ ದಂತ ಕಾಲೇಜಿನ ಡಾ.ವಿಭಾಶೆಟ್ಟಿ, ಡಾ.ಗಾಯಿತ್ರಿ, ಡಾ.ರವಿವರ್ಮ, ಡಾ.ಸುಬ್ರಹ್ಮಣ್ಯ ಹಾಗೂ ಜಿಲ್ಲಾ ದಂತ ವೈದ್ಯಾಧಿಕಾರಿಗಳು ಹಾಜರಿದ್ದರು.

ರುಕ್ಮಿಣಮ್ಮ ನಿಧನ



ಕೆ.ಆರ್.ಪೇಟೆ, ಜು.17– ತಾಲೂಕಿನ ಕುರುಬ ಸಮಾಜದ ಹಿರಿಯ ಮುಖಂಡ ದಿ.ಕೆ.ಎನ್.ಕೆಂಗೇಗೌಡರ ಪತ್ನಿ ರುಕ್ಮಿಣಮ್ಮ(82) ಭಾನುವಾರ ಬೆಳಗ್ಗೆ ಮೈಸೂರಿನ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರು ಪುತ್ರ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್, ಪುತ್ರಿ ಸುಗುಣರಾಮಚಂದ್ರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಆರ್.ಪೇಟೆ ಪಟ್ಟಣದ ಮೃತರ ಜಮೀನಿನಲ್ಲಿ ಭಾನುವಾರ ಸಂಜೆ ನಡೆಯಿತು.

ವಿಜಯಮ್ಮ



ಮಳವಳ್ಳಿ, ಜು.17– ಪಟ್ಟಣದ ಪೇಟೆ ಗಂಗಾಮತಸ್ಥರ ಬೀದಿ ಉಮ್ಮಂತೂರಯ್ಯನ ತೋಟದ ಬಡಾವಣೆಯಲ್ಲಿ ವಾಸವಿದ್ದ ಲೇಟ್ ನಾಗರಾಜು ಅವರ ಪತ್ನಿ ವಿಜಯಮ್ಮ(68) ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಪಟ್ಟಣದ ಕಮಾಮಾಳದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು.

ಇನ್ನರ್‌ವ್ಹೀಲ್ ಸಂಸ್ಥೆ ನೂತನ ಅಧ್ಯಕ್ಷೆ ಸವಿತಾ, ಕಾರ್ಯದರ್ಶಿ ಜಯಮ್ಮ



ಭಾರತೀನಗರ, ಜು.17– ಭಾರತೀನಗರದ ಇನ್ನರ್‌ವ್ಹೀಲ್ ಸಂಸ್ಥೆ ಪದವಿ ಪ್ರಧಾನ ಸಮಾರಂಭದಲ್ಲಿ ಅಧ್ಯಕ್ಷರಾಗಿ ಸವಿತಾ ಚಂದ್ರೇಶ್, ಕಾರ್ಯದರ್ಶಿಯಾಗಿ ಜಯಮ್ಮ ಲಕ್ಷ್ಮಣ್ ಅವರು ಪದಗ್ರಹಣ ಮಾಡಿದರು.

ಇಲ್ಲಿನ ಚಾಮುಂಡೇಶ್ವರಿ ಅತಿಥಿ ಗೃಹದಲ್ಲಿ ನಡೆದ ಭಾರತೀನಗರದ ಇನ್ನರ್‌ವ್ಹೀಲ್ ಸಂಸ್ಥೆಯ ಸದಸ್ಯರಿಗೆ ಪದಗ್ರಹಣ ಸಮಾರಂಭದಲ್ಲಿ 2022–23ನೇ ಸಾಲಿನ ನೂತನ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಇಬ್ಬರು ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಬಳಿಕ ಇನ್ನರ್‌ವ್ಹೀಲ್ ಸಂಸ್ಥೆಯ ಸಂಸ್ಥಾಪಕಿ ಅಧ್ಯಕ್ಷೆ ಲಕ್ಷ್ಮಿ ಮಂಜುಳಾ ಬೋರೇಗೌಡ, ಖಜಾಂಚಿ ಜಯಲಕ್ಷ್ಮಿ ಪುಟ್ಟಸ್ವಾಮಿ, ಐಎಸ್‌ಓ ಪ್ರಭಾ ಸುರೇಶ್ ಪದಗ್ರಹ ಸ್ವೀಕರಿಸಿದರು. ಸುರೇಖಾ, ಯೋಗಶ್ರೀ, ಆಶಾ, ತಾರಾ, ರಶ್ಮಿ, ಹೊಸದಾಗಿ ಸೇರ್ಪಡೆಗೊಂಡರು.

ಕಾರ್ಯಕ್ರಮದಲ್ಲಿ ಸೌಭಾಗ್ಯ, ನೀಲಮ್ಮ, ಜಯಲಕ್ಷ್ಮಿ ವೆಂಕಟೇಗೌಡ, ನಂದ, ಧರಣಿ, ಪುಟ್ಟಮ್ಮ, ದಿವ್ಯಾ, ಪಲ್ಲವಿ, ಸುಧಾ, ನಿರ್ಮಲಾ, ರೋಟರಿ ಅಧ್ಯಕ್ಷ ಚಂದ್ರೇಶ್ ಸೇರಿದಂತೆ ಇನ್ನರ್‌ವಿಲ್ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಇದ್ದರು.

ಕೊಡಗಲ್ಲಿ ತಗ್ಗಿದ ವರುಣನ ಆರ್ಭಟ

ಜಿಲ್ಲೆಯಾದ್ಯಂತ 'ಆರೆಂಜ್ ಅಲರ್ಟ್' ಘೋಷಣೆ

- ಮಡಿಕೇರಿ – ಮಂಗಳೂರು ರಸ್ತೆಯಲ್ಲಿ ಬಿರುಕು
- ಜಿಲ್ಲೆಯಲ್ಲಿ ಹಲವಾರು ಮನೆಗಳಿಗೆ ಹಾನಿ

ಮಡಿಕೇರಿ,ಜು.17– ಕೊಡಗು ಜಿಲ್ಲೆಯಲ್ಲಿ ಭಾನುವಾರ ವರುಣನ ಅಬ್ಬರ ಕಡಿಮೆಯಾಗಿದೆ. ಈ ನಡುವೆ ಹವಾಮಾನ ಇಲಾಖೆ ಮಾಹಿತಿ ಆಧರಿಸಿ ಸೋಮವಾರ ಬೆಳಗಿನ 8.30ರವರೆಗೆ ಜಿಲ್ಲೆಯಾದ್ಯಂತ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಭಾರೀ ಗಾಳಿ ಸಹಿತ ಬಿಡುವು ನೀಡಿದ್ದು, ಜಿಲ್ಲೆಯಾದ್ಯಂತ ಸಾಧಾರಣ ಮಳೆ ಮುಂದುವರೆದಿದೆ.

ಕಳೆದ 24 ಗಂಟೆ ಅವಧಿಯಲ್ಲಿ ಮಡಿಕೇರಿ ತಾಲೂಕಿನ ಗಾಳಿಬೀಡು ವ್ಯಾಪ್ತಿಯಲ್ಲಿ 127.5 ಮಿ.ಮೀ, ಬೇಂಗೂರು ವ್ಯಾಪ್ತಿಯಲ್ಲಿ 125.5, ಮದೆನಾಡು 167.5 ಹಾಗೂ ಭಾಗಮಂಡಲ ಅಯ್ಯಂಗೇರಿ ವ್ಯಾಪ್ತಿಯಲ್ಲಿ 124.5 ಮಿ.ಮೀ ಮಳೆಯಾಗಿದೆ ಎಂದು ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ.



ಕೊಯನಾಡು ಬಳಿ ನ್ಯಾಷನಲ್ ಹೈವೇಗೆ ಹಾನಿಯಾಗಿರುವುದು.

ಮಳೆಯಿಂದ ಒಂದು ಭೂ ಕುಸಿತ, 2 ಮನೆಗಳಿಗೆ ಭಾಗಶಃ ಹಾನಿಯಾಗಿದೆ. 127 ಕುಟುಂಬಗಳ 452 ಮಂದಿಯನ್ನೂ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಹೆದ್ದಾರಿ ಬಿರುಕು: ಭಾರೀ ಮಳೆಗೆ ಮಡಿಕೇರಿ–ಮಂಗಳೂರು 275 ರಾಷ್ಟ್ರೀಯ ಹೆದ್ದಾರಿಯ ಕೊಯನಾಡು ಬಳಿಯಲ್ಲಿ ಬಿರುಕುಗಳು ಮೂಡಿರುವ ಬಗ್ಗೆ ವರದಿಯಾಗಿದೆ. ಅಂತರ್ ಜಲದಿಂದ ಹೆದ್ದಾರಿಯ ಒಂದು ಭಾಗದಲ್ಲಿ ಬಿರುಕುಗಳು ಮೂಡಿ, ಭೂಮಿ ಕುಸಿದಂತಾಗಿದೆ. ಸ್ಥಳದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ವಾಹನ ಸವಾರರಿಗೆ ಎಚ್ಚರಿಕೆ ನೀಡಲಾಗಿದೆ. ಮತ್ತಷ್ಟು ಮಳೆಯಾ ದಲ್ಲಿ ಹೆದ್ದಾರಿ ಬಿರುಕು ಮೂಡಿದ ಸ್ಥಳದಲ್ಲಿ ಭೂ ಕುಸಿದು ರಾಷ್ಟ್ರೀಯ ಹೆದ್ದಾರಿ ಸಂಚಾರ ವ್ಯತ್ಯಯವಾಗುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿವೆ.

ಮನೆಗಳಿಗೆ ಹಾನಿ: ಕೊಡಗರಹಳ್ಳಿ ಗ್ರಾಮದ ಬೋಜಮ್ಮ ಎಂಬವರ ಮನೆ ಮೇಲೆ ಮರ ಬಿದ್ದು ಹಾನಿಯಾಗಿದ್ದು 30 ಸಾವಿರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿ ಸಲಾಗಿದೆ. ಕೆದಕಲ್, ನಾಕೂರು ಶಿರಂಗಾಲ, ಹರದೂರು, ಗರಗಂದೂರು, 7ನೇ ವೈಲು, ಕಂಬಿಬಾಣೆ, 7ನೇ ಹೊಸಕೋಟೆ, ಸುಂಟಿಕೊಪ್ಪ ಕಡೆಗಳಲ್ಲೂ ಮರ ಬಿದ್ದು ಕೆಲ ಮನೆಗಳಿಗೆ ಹಾನಿಯಾಗಿದೆ. ಸುಂಟಿಕೊಪ್ಪ ನಾಗರ್ಾಣೆ ಗ್ರಾಮದಲ್ಲಿ ಕೆಲವು ಮನೆಗಳಿಗೆ ತೋಡು ನೀರು ನುಗ್ಗಿ ಮನೆಯ ಗೃಹೋಪಯೋಗಿ ವಸ್ತುಗಳು ಹಾನಿಗೊಂಡಿರುವ ಬಗ್ಗೆ ವರದಿಯಾಗಿದೆ.

ಹಾರಂಗಿಯಿಂದ 10 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ಹಾರಂಗಿ ಜಲಾಶಯದ ನೀರಿನ ಮಟ್ಟದಲ್ಲಿ ಭಾನುವಾರ ಸಂಜೆ ವೇಳೆಯಲ್ಲಿ ಮತ್ತೆ ಹೆಚ್ಚಳ ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಜಲಾಶಯದಿಂದ ನದಿಗೆ 10 ಸಾವಿರ ಕ್ಯೂಸೆಕ್ ನೀರನ್ನು ಹರಿದು ಬಿಡಲಾಗಿದೆ. ಹಾರಂಗಿ ಜಲಾಶಯದ ನದಿ ನೀರಿನ ಮೂಲ ಗ್ರಾಮಗಳಾದ ಮಡಿಕೇರಿ, ಕಾಲೂರು, ಗಾಳಿಬೀಡು, ವಣಚಲು, ಮಾಂದಲ್ ಪಟ್ಟಿ, ಮುಕ್ಕೋಡ್ಲು, ಹಟ್ಟಿಹೊಳೆ, ಮಾದಾಪುರ ಕಡೆಗಳಲ್ಲಿ ಉತ್ತಮ ಮಳೆ ಸುರಿದ ಹಿನ್ನೆಲೆ ಹಟ್ಟಿಹೊಳೆ ಮತ್ತು ಮಾದಾಪುರ ಹೊಳೆಗಳಲ್ಲಿ ಭಾರಿ ನೀರು ಹರಿದು ಹಾರಂಗಿ ಜಲಾಶಯ ಸೇರಿದೆ. ಸಂಜೆ ವೇಳೆಗೆ ಜಲಾಶಯಕ್ಕೆ 9080 ಕ್ಯುಸೆಕ್ ನೀರಿನ ಒಳಹರಿವು ದಾಖಲಾಗಿತ್ತು. 2859 ಅಡಿ ನೀರಿನ ಸಂಗ್ರಹಾ ಸಾಮರ್ಥ್ಯದ ಜಲಾಶಯದಲ್ಲಿ ಪ್ರಸ್ತುತ 2854.40 ಅಡಿ ನೀರಿನ ಸಂಗ್ರಹವಿದ್ದು, ಜಲಾಶಯದ ಭದ್ರತೆ ಮತ್ತು ಪ್ರವಾಹ ಮುನ್ನೆಚ್ಚರಿಕಾ ಕ್ರಮವಾಗಿ 4 ಕ್ರೆಸ್ಟ್ ಗೇಟ್‌ಗಳ ಮೂಲಕ ನದಿಗೆ ನೀರು ಹರಿಸಲಾಗುತ್ತಿದೆ.

ಕಾವೇರಿ ಮಾತೆ, ಕೊಡವ ಯುವತಿಯರ ಬಗ್ಗೆ ಅವಹೇಳನ

ಆರೋಪಿ ಬಂಧನ, ಮೊಬೈಲ್ ವಶ

ಮಡಿಕೇರಿ,ಜು.17– ಕೊಡವರ ಕುಲ ದೇವಿ ಕಾವೇರಿ ಮಾತೆ, ಕೊಡವ ಯುವತಿಯರ ಬಗ್ಗೆ ಇನ್ಸ್ಟಾಗ್ರಾಮ್‌ನಲ್ಲಿ ಅವಹೇಳನ ಮಾಡಿ ಪೋಸ್ಟ್ ಹಾಕಿದ್ದ ಆರೋಪಿಯನ್ನು ಮಡಿಕೇರಿ ನಗರ ಪೊಲೀಸರು ಬಂಧಿಸಿದ್ದಾರೆ.

ವಿರಾಜಪೇಟೆ ತಾಲೂಕಿನ ಪಾಲಂಗಾಲ ಗ್ರಾಮ ನಿವಾಸಿ ಕೆ.ಪಿ.ದಿವಿನ್ ದೇವಯ್ಯ(29) ಎಂಬಾತನೇ ಬಂಧಿತ ಆರೋಪಿ. ಆರೋಪಿ ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದು, ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ. ಜು.3ರಂದು ಯುವಕನೊಬ್ಬ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಕಾವೇರಿ ಮಾತೆ, ಕೊಡವ ಯುವತಿಯರ ಬಗ್ಗೆ ಆಕ್ಷೇಪಾರ್ಹ ಪದಗಳನ್ನು ಬಳಸಿ ನಿಂದನೆ ಮಾಡಿದ್ದ. ಈ ಕುರಿತು ವಿವಿಧ ಕೊಡವ ಸಮಾಜಗಳು, ಕೊಡವ ಸಂಘಟನೆಗಳು ಧಾರ್ಮಿಕ ಬಾವನೆಗಳಿಗೆ ದಕ್ಕೆ ತಂದಿರುವ ಕುರಿತು ಮಡಿಕೇರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಈ ನಡುವೆ ಆರೋಪಿಯನ್ನು ಬಂಧಿಸಲು ಪೊಲೀಸರು ಮೀನಾ ಮೇಷ ಎಣಿಸುತ್ತಿದ್ದಾರೆ ಎಂದು ಕೊಡವ ಸಮಾಜಗಳು, ವಿವಿಧ ಕೊಡವ ಸಂಘಟನೆಗಳು ಆರೋಪಿಸಿತ್ತಲ್ಲದೇ, ಪ್ರತಿಭಟನೆಯ ಎಚ್ಚರಿಕೆ ನೀಡಿದ್ದವು. ಮಾತ್ರವಲ್ಲದೇ ಈ ವಿಚಾರಕ್ಕೆ ಸಂಬಂಧಿಸಿದಂತೆ ಕೊಡಗಿನಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ಇಲಾಖೆ ಅತ್ಯಾಧುನಿಕ ತಂತ್ರಜ್ಞಾನ ಸಹಿತ ಸಾಮಾಜಿಕ ಜಾಲತಾಣಗಳ ಸಂಸ್ಥೆಗಳನ್ನು ಸಂಪರ್ಕಿಸಿ, ಆರೋಪಿಯನ್ನು ಭಾನುವಾರ ಬಂಧಿಸಿದ್ದಾರೆ. ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಫೋನ್ ಅನ್ನು ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿ ಬುಧವಾರ ವಿರಾಜಪೇಟೆಯಲ್ಲಿ ಎಸಿ ಕೋರ್ಟ್ ಕಾರ್ಯ ನಿರ್ವಹಣೆ

ವಿರಾಜಪೇಟೆ, ಪೊನ್ನಂಪೇಟೆ ಜನರಿಗೆ ಅನುಕೂಲ



ವಿರಾಜಪೇಟೆ, ಜು.17– ಕೊಡಗು ಪುಟ್ಟ ಜಿಲ್ಲೆಯಾದರೂ ಸರ್ಕಾರ ವಕೀಲರ ಸಂಘದ ಮನವಿಗೆ ಸ್ಪಂದಿಸಿತಾಲೂಕಿಗೆ ವಿರಾಜಪೇಟೆಯಲ್ಲಿ ಎಸಿ ಕೋರ್ಟ್ ಪ್ರಾರಂಭಿಸಿರುವುದರಿಂದ ವಿರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕಿನ ಜನರಿಗೆ ಅನುಕೂಲವಾಗಲಿದೆ ಎಂದು ಕೊಡಗು ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಲ್ಲಾಳ್ ತಿಳಿಸಿದ್ದಾರೆ.

ವಿರಾಜಪೇಟೆ ಮಿನಿ ವಿಧಾನ ಸೌಧ ಸಭಾಂಗಣದಲ್ಲಿ ನೂತನ ಎ ಸಿ ಕೋರ್ಟ್ ಉದ್ಘಾಟನೆ ವೇಳೆ ಆಗಮಿಸಿದ್ದ ಉಪ ವಿಭಾಗಾಧಿಕಾರಿಗಳನ್ನು ವಕೀಲರ ಸಂಘದಿಂದ ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿದ ಅವರು, ಸೋಮವಾರ ಮತ್ತು ಗುರುವಾರ ಮಡಿಕೇರಿಯಲ್ಲಿ ಹಾಗೂ ವಿರಾಜಪೇಟೆ ಮತ್ತು ಪೊನ್ನಂಪೇಟೆ ವ್ಯಾಪ್ತಿಗೆ ಸಂಬಂಧಿಸಿದಂತೆ ಪ್ರತಿ ಬುಧವಾರ ವಿರಾಜಪೇಟೆಯಲ್ಲಿ ಕೋರ್ಟ್ ಕಾರ್ಯ ನಿರ್ವಹಿಸಲಿದ್ದು ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ ಎಂದರು.


ವಕೀಲರ ಸಂಘದ ಅಧ್ಯಕ್ಷ ಐ.ಆರ್.ಪ್ರಮೋದ್ ಮಾತನಾಡಿ, ವಿರಾಜಪೇಟೆಯಲ್ಲಿ ಎಸಿ ನ್ಯಾಯಾಲಯ ಪ್ರಾರಂಭಿಸಿರುವುದರಿಂದ ಗ್ರಾಮೀಣ ಭಾಗದ ಜನರು ದೂರದ ಮಡಿಕೇರಿಗೆ ಹೋಗಿ ಬರುವುದು ತಪ್ಪಿದಂತಾಗಿದೆ. ವಿರಾಜಪೇಟೆ ತಾಲೂಕಿನಲ್ಲಿ ಎಸಿ ಕೋರ್ಟ್ ಪ್ರಾರಂಭಿಸಲು ಈ ಹಿಂದೆ ಸರಕಾರಕ್ಕೆ ಮನವಿ ಸಲ್ಲಿಸಿದಾಗ ಶಾಸಕ ಕೆ.ಜಿ.ಬೋಪಯ್ಯ ಅವರ ಒತ್ತಾಯದ ಮೇರೆಗೆ ಸರಕಾರ ಸ್ಪಂದಿಸಿರುವುದು ಎರಡು ತಾಲೂಕಿನ ಜನರಿಗೆ ಮತ್ತು ಕಕ್ಷಿದಾರರಿಗೂ ಅನುಕೂಲವಾದಂತಾಗಿದೆ. ಶೀಘ್ರವಾಗಿ ಪ್ರಕರಣಗಳು ಇತ್ಯರ್ಥವಾಗಲಿ ಎಂದರು.

ವೇದಿಕೆಯಲ್ಲಿ ವಿರಾಜಪೇಟೆ ತಾಲೂಕು ತಹಸೀಲ್ದಾರ್ ಆರ್.ಯೋಗಾನಂದ, ಅಪರ ಸರಕಾರಿ ಅಭಿಯೋಜಕರಾದ ಅನಿತಾ, ವಕೀಲರ ಸಂಘದ ಕಾರ್ಯದರ್ಶಿ ಎಂ.ಕೆ.ದಿನೇಶ್, ಉಪಸ್ಥಿತರಿದ್ದರು ವಕೀಲರ ಸಂಘದ ಖಜಾಂಚಿ ವಿ.ಜಿ.ರಾಕೇಶ್ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಹಿರಿಯ –ಕಿರಿಯ ವಕೀಲರುಗಳು ಹಾಜರಿದ್ದರು.

ನಾಪೋಕ್ಲು ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿ

ಬರೆ ಕುಸಿದು ಮನೆಗೆ ಹಾನಿ, ಉದುರಿದ ಕಾಫಿ ಕಾಯಿಗಳು, ನಾಪೋಕ್ಲು–ಮೂರ್ನಾಡು ರಸ್ತೆ ಜಲಾವೃತ

ನಾಪೋಕ್ಲು, ಜು.17– ಹೋಬಳಿ ವ್ಯಾಪ್ತಿಯಲ್ಲಿ ಭಾನುವಾರ ಮಳೆಯ ಅಬ್ಬರ ತಗ್ಗಿದ್ದು, ಜಲಾವೃತವಾದ ರಸ್ತೆಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಆದರೆ ಅನಾಹುತಗಳು ಹೆಚ್ಚಾಗಿ ಸಂಭವಿಸಿವೆ. ನಾಪೋಕ್ಲು ಮೂರ್ನಾಡು ಸಂಪರ್ಕ ರಸ್ತೆಯ ಬೊಳಿಬಾಣೆಯಲ್ಲಿ ರಸ್ತೆಯ ಮೇಲೆ ನೀರು ಹರಿಯುತ್ತಿದೆ.



ಸತತವಾಗಿ ಸುರಿದ ಮಳೆಯಿಂದ ಅಲ್ಲಲ್ಲಿ ಹಾನಿ ಸಂಭವಿಸಿದ್ದು, ಬಲ್ಲಮಾವಟಿ ಗ್ರಾಮ ಪಂಚಾಯಿತಿಯ ದೊಡ್ಡಪುಲಿಕೋಟು ಗ್ರಾಮದ ಮಣವಟ್ಟೀರ ಕುಟ್ಟಪ್ಪ ಅವರ ನೂತನ ಮನೆಯ ಹಿಂಭಾಗದ ಬರೆ ಕುಸಿದು ನಷ್ಟ ಸಂಭವಿಸಿದೆ. ಮಣ್ಣು ಬಿದ್ದ ಪರಿಣಾಮ ಕಾಫಿ ಗಿಡಗಳಿಗೆ ಹಾನಿಯಾಗಿದೆ. ಈ ವ್ಯಾಪ್ತಿಯಲ್ಲಿ ಬಿರುಸಿನ ಮಳೆಯಾಗಿದ್ದು ಶುಕ್ರವಾರ ಒಂದೇ ದಿನ 7 ಇಂಚು ಮಳೆ ಸುರಿದಿದೆ.

ಮಳೆಗಾಳಿಗೆ ಹಲವೆಡೆ ಕಾಫಿ ಕಾಯಿಗಳು ಉದುರಿ ನಷ್ಟ ಸಂಭವಿಸಿದೆ. ಮಳೆಗಾಳಿ ಯಿಂದ ವಿದ್ಯುತ್ ಕಂಬಗಳು ಮುರಿದು ಬಿದ್ದು ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದ್ದು ಸೆಸ್ಕ್ ಸಿಬ್ಬಂದಿಗಳ ಪ್ರಯತ್ನದಿಂದ ಗ್ರಾಮೀಣ ಪ್ರದೇಶಗಳಿಗೆ ಇಂದು ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.

ಚಿಕ್ಕತ್ತೂರಿನ ಆನೆ ಕೆರೆಗೆ ಬಾಗಿನ ಸಮರ್ಪಣೆ



ಕುಶಾಲನಗರ, ಜು.17– ಸಮೀಪದ ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯ ಚಿಕ್ಕತ್ತೂರಿನ ಶ್ರೀ ವಿನಾಯಕ ಯುವಕ ಸಂಘದ ಆಶ್ರಯದಲ್ಲಿ ಚಿಕ್ಕತ್ತೂರಿನ ಆನೆ ಕೆರೆಗೆ ಭಾನುವಾರ ಬಾಗಿನ ಅರ್ಪಿಸಲಾಯಿತು.

ಕೆರೆ ಆವರಣದಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ಸರ್ವಧರ್ಮೀಯರು ಪಾಲ್ಗೊಂಡು ಕೆರೆಗೆ ಬಾಗಿನ ಅರ್ಪಿಸಿದ್ದು ವಿಶೇಷ.

ಚಿಕ್ಕತ್ತೂರಿನ ಗ್ರಾಮದೇವತೆ ಶ್ರೀ ಕನ್ನಿಕಾ ಚೌಡೇಶ್ವರಿ ದೇವಾಲಯದಲ್ಲಿ ಪ್ರಥಮ ಪೂಜೆ ಸಲ್ಲಿಸಿದ ಬಳಿಕ ಪೂರ್ಣಕುಂಭ ಕಳಸ ಹೊತ್ತ ಮುತ್ತೈದೆಯರು ಮೆರವಣಿಗೆ ಮೂಲಕ ಸಾಗಿ ಬಂದರು. ಗ್ರಾಮದ ಪ್ರಮುಖ ಬೀದಿಯಲ್ಲಿ ಮಂಗಳವಾದ್ಯ ಸಹಿತ ಗ್ರಾಮಸ್ಥರು ಮೆರವಣಿಗೆ ಮೂಲಕ ಕೆರೆ ದಂಡೆಗೆ ಆಗಮಿಸಿದರು.

ಕೂಡಿಗೆಯ ಶ್ರೀ ಸುಬ್ರಹ್ಮಣ್ಯ ದೇವಾಲಯ ಅರ್ಚಕ ನವೀನ್ ಭಟ್ ಕೆರೆಗೆ ಸಾಂಪ್ರದಾಯಿಕ ಪೂಜಾ ವಿಧಿ ನೆರವೇರಿಸಿದರು.

ಬಳಿಕ ತುಂಬಿದ ಆನೆ ಕೆರೆಗೆ ಬಾಗಿನ ಸಮರ್ಪಿಸಲಾಯಿತು. ಕೂಡು ಮಂಗಳೂರು ಗ್ರಾಪಂ ವಿವಿಧ ಧರ್ಮೀಯ ಸದಸ್ಯರು ಒಗ್ಗೂಡಿ ಪಾಲ್ಗೊಂಡು ಗ್ರಾಮದ ಕೆರೆಗೆ ಪೂಜೆ ಸಲ್ಲಿಸಿದರು.

ಗ್ರಾಮದ ನೂರಾರು ಮಂದಿ ಬಾಗಿನ ಸಮರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೆರೆ ಕಟ್ಟೆಯ ಸುತ್ತಲೂ ಪುಷ್ಪಾಲಂಕಾರ ಮಾಡಿ ಅಲಂಕರಿಸಲಾಗಿತ್ತು.

ಗ್ರಾಪಂ ಸದಸ್ಯರು ಆದ ಯುವಕ ಸಂಘದ ಮಾಜಿ ಅಧ್ಯಕ್ಷ ದಿನೇಶ್ ಮಾತನಾಡಿ, 2018ರಲ್ಲಿ ಕೆರೆ ಭರ್ತಿಯಾದ ಬಳಿಕ ಇದೀಗ ಮತ್ತೆ ಕೆರೆ ತುಂಬಿ ಹರಿದಿದೆ. ಈ ನಿಟ್ಟಿನಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸುವ ಮೂಲಕ ಸಮೃದ್ಧಿ ಕರುಣಿಸಲು ಗ್ರಾಮಸ್ಥರು ಪ್ರಾರ್ಥನೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಯುವಕ ಸಂಘದ ಅಧ್ಯಕ್ಷ ಸುನಿಲ್, ಕಾರ್ಯದರ್ಶಿ ಕೃಷ್ಣಕಾಂತ್, ಖಜಾಂಚಿ ಶ್ರೀನಿವಾಸ್, ಮಾಜಿ ಅಧ್ಯಕ್ಷ ದಿನೇಶ್, ಸದಸ್ಯರಾದ ಗಣೇಶ್, ಕೃಷ್ಣ, ಶ್ರೀನಿವಾಸ್, ಪಾಪಣ್ಣ, ಕೂಡು ಮಂಗಳೂರು ಗ್ರಾಪಂ ಅಧ್ಯಕ್ಷೆ ಇಂದಿರಾ ರಮೇಶ್, ಪಿಡಿಒ ಸಂತೋಷ್, ಸದಸ್ಯರಾದ ಭಾಗ್ಯರವಿ, ಫಿಲೋಮಿನಾ, ಖತಿಜಾ, ಮಣಿ, ಗಿರೀಶ್, ಚಂದ್ರು ಮೂಡ್ಲಿಗೌಡ, ಪಾರ್ವತಮ್ಮ, ಮಾಜಿ ಉಪಾಧ್ಯಕ್ಷ ಗುಜೇಂದ್ರ, ತಾಪಂ ಮಾಜಿ ಸದಸ್ಯ ಗಣೇಶ್, ಕುಮಾರಸ್ವಾಮಿ, ದೇವಾಲಯ ಸಮಿತಿಯ ಅಧ್ಯಕ್ಷ ಸಿ.ಕೆ.ನಾಗೇಶ್, ಯುವಕ ಸಂಘದ ಸದಸ್ಯರಾದ ಶಿವಕುಮಾರ್, ಹೇಮಂತ್ ಕುಮಾರ್, ವಿನು, ಯೋಗೇಶ್, ನಿರ್ಮಲ, ಪುಷ್ಪ ಮತ್ತಿತರರು ಇದ್ದರು.

ನೆರೆದಿದ್ದ ಗ್ರಾಮಸ್ಥರಿಗೆ ಪ್ರಸಾದ ವಿನಿಯೋಗ ಹಾಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಜಿಎಸ್‌ಟಿ, ನೆರೆ ನಿರ್ವಹಣೆಯಲ್ಲಿ ವಿಫಲ ಆರೋಪ

ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಛತ್ರಿ ಚಳವಳಿ



ಚಾಮರಾಜನಗರ, ಜು.17–ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ಹೇರಿಕೆ ಖಂಡಿಸಿ ಹಾಗೂ ರಾಜ್ಯದಲ್ಲಿ ಪ್ರಸ್ತುತ ನೆರೆ ಪರಿಸ್ಥಿತಿ ನಿಭಾಯಿಸುವಂತೆ ಆಗ್ರಹಿಸಿ ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ನಗರದಲ್ಲಿಂದು ವಿನೂತನವಾಗಿ ಛತ್ರಿ ಚಳವಳಿ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನಕ್ಕೆ ಬೆಂಬಲಿಗರೊಂದಿಗೆ ಭಾನುವಾರ ಆಗಮಿಸಿ ಪೂಜೆ ಸಲ್ಲಿಸಿದ ಬಳಿಕ ದೇವಸ್ಥಾನ ಆವರಣದಲ್ಲಿ ಸಮಾವೇಶಗೊಂಡು ರಾಜ್ಯದ ನೆರೆ ಸಂತ್ರಸ್ತರಿಗೆ ನೆರವಾಗುವಂತೆ ಆಸರೆ ಸಂಕೇತವೆಂದು ಛತ್ರಿ ಪ್ರದರ್ಶಿಸುವ ಮೂಲಕ ವಿನೂತನವಾಗಿ ಚಳವಳಿ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಕೇಂದ್ರದ ಆದೇಶದಂತೆ ಎಲ್ಲದಕ್ಕೂ ಜಿಎಸ್‌ಟಿ ಹೇರುತ್ತಿದೆ. ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಮತ್ತೊಂದಿಲ್ಲ. ನಿತ್ಯಬಳಕೆಯ ವಸ್ತುಗಳು, ಆಹಾರ ಪದಾರ್ಥಗಳು ಸೇರಿದಂತೆ ಈಗ ಹಾಲು–ಮೊಸರಿಗೂ ಜಿಎಸ್‌ಟಿ ವಿಧಿಸುವ ಮೂಲಕ ಬಡವರ ರಕ್ತಹೀರಲಾಗುತ್ತಿದೆ. ಸರ್ಕಾರಿ ಯೋಜನೆಗಳ ನಾಮಫಲಕದಲ್ಲಿ ಬಡವರ ಪರ ಎನ್ನುವ ಸರ್ಕಾರಗಳು ಕಡುಬಡವರು ಬಳಸುವ ವಸ್ತುಗಳಿಗೂ ಜಿಎಸ್‌ಟಿ ಹಾಕುತ್ತಿರುವುದು ಸರಿಯಲ್ಲ. ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ ಎಂದರು.

ಪ್ರಧಾನಿ ಯಾವಾಗಲೂ ಶ್ರೀಮಂತರ ಪರ, ಮಾತು ಬಡವರ ಪರ. ಪೆಟ್ರೋಲ್, ಡಿಸೇಲ್ ವ್ಯಾಪಾರ ಶ್ರೀಮಂತರ ವ್ಯಾಪಾರವಾಗಿರುವುದರಿಂದ ಪೆಟ್ರೋಲ್, ಡಿಸೇಲ್ ಮೇಲೆ ಜಿಎಸ್‌ಟಿ ಹಾಕದೆ ಬಡವರು ಬಳಸುವ ಆಹಾರ ಪದಾರ್ಥಗಳ ಮೇಲೆ ಜಿಟಿಎಸ್ ವಿಧಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅಧಿಕಾರದಿಂದ ಕೆಳಗಿಳಿದರೇ ಮಾತ್ರ ದೇಶ ಉದ್ಧಾರವಾಗಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಎಂದೂ ಕಾಣದಂತಹ ನೆರೆ ಹಾವಳಿ ಕಳೆದ ಕೆಲ ವರ್ಷಗಳಿಂದ ಸಂಭವಿಸುತ್ತಿದೆ. ಜನ–ಜಾನುವಾರುಗಳ ಸಾವು, ಮನೆಗಳ ಕುಸಿತ, ವಾಹನಗಳು, ಮೂಲಸೌಕರ್ಯ ಹಾನಿಯಾಗುತ್ತಿವೆ. ಈ ಬಗ್ಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುತ್ತಿಲ್ಲ. ರಾಜ್ಯದ ಉದ್ದಗಲಕ್ಕೂ ನೆರೆಯಿಂದ ಜನತೆ ತತ್ತರಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರಪ್ರದೇಶದಲ್ಲಿ ಪ್ರವಾಹ, ದುರಂತ ಸಂಭವಿಸಿದೆ ಓಡುಹೋಗುತ್ತಾರೆ. ರಾಜ್ಯದಲ್ಲಿ ನೆರೆಯಿಂದ ಅಪಾರ ಪ್ರಮಾಣದಲ್ಲಿ ಹಾನಿಯಾಗಿದ್ದರೂ ಏಕೆ ಬರಲಿಲ್ಲ ಎಂದು ಪ್ರಶ್ನಿಸಿದರು.

ಮೋದಿಯವರ ಕರ್ನಾಟಕಕ್ಕೆ ಬರಬೇಕು. ಹೆಚ್ಚಿನ ಪರಿಹಾರ ನೀಡಬೇಕು. ನೆರೆಯಿಂದ ಮೃತಪಟ್ಟವರ ಕುಟುಂಬಕ್ಕೆ ರಾಜ್ಯ ಸರ್ಕಾರ ತಲಾ 25 ಲಕ್ಷ ರೂ. ಪರಿಹಾರ ನೀಡಬೇಕು. ಜಾನುವಾರುಗಳನ್ನು ಕಳೆದುಕೊಂಡವರಿಗೆ ಪರಿಹಾರ, ಮನೆಗಳನ್ನು ಕಳೆದುಕೊಂಡವರಿಗೆ ತಕ್ಷಣದಲ್ಲಿ ಮನೆ ಕಟ್ಟಿಸಿಕೊಡಬೇಕು ಎಂದು ವಾಟಾಳ್‌ನಾಗರಾಜ್ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಬೆಂಬಲಿಗರಾದ ಹುಂಡಿ ಬಸವಣ್ಣ, ಶಿವಲಿಂಗಮೂರ್ತಿ, ಗು.ಪುರುಷೋತ್ತಮ ಇತರರು ಭಾಗವಹಿಸಿದ್ದರು.

ಗುಂಡ್ಲುಪೇಟೆ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ

ಪ್ರವಾಸಿಗರ ಸೆಲ್ಫಿ ವಿತ್ ಸೂರ್ಯಕಾಂತಿ





ಸೋಮಶೇಖರ್

ಗುಂಡ್ಲುಪೇಟೆ, ಜು.17–ಹೊತ್ತು ಮೂಡಿದರೂ ಮೋಡ ಮುಸಿಕಿದ ವಾತಾವರಣ, ಬಿಸಿಲ ನಡುವೆಯೇ ಮಳೆ ರಾಯನ ಸಿಂಚನ... ಹೆದ್ದಾರಿಯ ಇಕ್ಕೆಲಗಳಲ್ಲಿ ಕಣ್ಣು ತಂಪಾಗಿಸುವ ಹಚ್ಚಹಸಿರು... ರೈತರ ವಿವಿಧ ಬೆಳೆ ನಡುವೆ ಕಣ್ಮನ ಸೆಳೆಯುವ ಕಡುಹಳದಿ ಬಣ್ಣದ ಹೂವುಗಳು.. ಅಲ್ಲಲ್ಲಿ ವಾಹನ ನಿಲ್ಲಿಸಿ ಮೊಬೈಲ್, ಕ್ಯಾಮೆರಾಗಳಲ್ಲಿ ಇನ್ನೊಂದು– ಮತ್ತೊಂದು ಫೋಟೋ, ಸೆಲ್ಫಿ ಎನ್ನುವ ಪ್ರವಾಸಿಗರು...

> ಪ್ರಕೃತಿ ಮಾತೆಯ ಮಡಿಲಲ್ಲಿ ಏನೆಲ್ಲ ಸೊಬಗು, ಸೌಂದರ್ಯ ಇದೆ ಎಂಬುದಕ್ಕೆ ಸೂರ್ಯಕಾಂತಿ ಹೂವಿನ ಅಂದವೇ ಸಾಕ್ಷಿ. ಸೂರ್ಯನು ಉದಯಿಸುವ ದಿಕ್ಕಿಗೆ ಮುಖ ಮಾಡಿ ನಗುತ್ತಿರುವ ಚಲುವೆ ಈ ಸೂರ್ಯಕಾಂತಿ. ಇಂತಹ ಹೂವುಗಳ ನೋಡುವುದು, ಮಧ್ಯೆ ನಿಂತು ಫೋಟೋ ತೆಗೆದುಕೊಳ್ಳುವುದು ಒಂದು ರೀತಿ ಖುಷಿಯಾದರೆ, ಸಾಮಾಜಿಕ ಜಾಲತಾಣಗಳಲಿ ಹಂಚಿಕೊಳ್ಳುವುದು ಮತ್ತಷ್ಟು ಸಂತೋಷ ತರಲಿದೆ.
> –ಶಿಲ್ಪಾ ಮಂಜುನಾಥ್, ಪ್ರವಾಸಿಗರು, ಜೆಪಿ ನಗರ, ಮೈಸೂರು.

ಇವು ತಾಲೂಕಿನ ಕೇರಳ ಹಾಗೂ ಮೈಸೂರು –ಊಟಿ ರಾಷ್ಟ್ರೀಯ ಹೆದ್ದಾರಿಗಳ ಬದಿಯ ಸೂರ್ಯಕಾಂತಿ ಜಮೀನುಗಳಲ್ಲಿ ಕಂಡು ಬರುತ್ತಿರುವ ದೃಶ್ಯಗಳು.

ತಾಲೂಕಿನ ಹಲವೆಡೆ ಪೂರ್ವ ಮುಂಗಾರು ಹಾಗೂ ಉತ್ತಮ ಮುಂಗಾರು ಮಳೆಯಿಂದ ನಳನಳಿಸುತಿರುವ ಸೂರ್ಯಕಾಂತಿ ಫಸಲು ಕೇರಳ, ಊಟಿ, ಬಂಡೀಪುರ, ಹಿಮವದ್ ಗೋಪಾಲಸ್ವಾಮಿಬೆಟ್ಟದತ್ತ ತೆರಳುವ ಪ್ರವಾಸಿಗರು ಹಾಗೂ ವಾಹನ ಸವಾರರನ್ನು ತನ್ನತ್ತ ಕೈಬೀಸಿ ಕರೆಯುತ್ತಿದ್ದು, ಸೆಲ್ಫಿ ವಿತ್ ಸೂರ್ಯಕಾಂತಿ ಎನ್ನುವಂತೆ ಮಾಡಿದೆ.

ತಾಲೂಕಿನ ಪ್ರಮುಖ ಪ್ರವಾಸಿ ತಾಣವಾದ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಮಾರ್ಗಮಧ್ಯ ಸಿಗುವ ಹಂಗಳ, ಬಸವಾಪುರ, ಪುತ್ತನಪುರ, ಬಂಡೀಪುರ ಸಮೀಪದ ಕಾಡಂಚಿನ ರಾಷ್ಟ್ರೀಯ ಹೆದ್ದಾರಿ ಪಕ್ಕದ ಜಮೀನುಗಳು, ಕೇರಳ ಸಂಪರ್ಕಿಸುವ ಹೆದ್ದಾರಿಯಲ್ಲಿ ಜಮೀನುಗಳಲ್ಲಿನ ಸೂರ್ಯಕಾಂತಿ ಬೆಳೆ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಪ್ರವಾಸಿಗರ ದಂಡೇ ಸೂರ್ಯ ಕಾಂತಿಯ ಜಮೀನಿಗೆ ಲಗ್ಗೆ ಇಡುತ್ತಿದ್ದು, ಕುಟುಂಬಸ್ಥರು, ಮಕ್ಕಳು, ಸ್ನೇಹಿತರು, ಯುವ ಜೋಡಿಗಳು ಸೂರ್ಯಕಾಂತಿ ಸೌಂದರ್ಯ ಸವಿಯುತ್ತ ಫೋಟೋ ಕ್ಲಿಕಿಸಿಕೊಂಡು ಖುಷಿ ಪಡುತ್ತಿದ್ದಾರೆ.

ಪ್ರಕೃತಿ ಮಾತೆಯ ಅಂದ ಹೆಚ್ಚಿಸಿರುವ ಸೂರ್ಯಕಾಂತಿ ಚಲುವನ್ನು ಕಣ್ತುಂಬಿಕೊಳ್ಳುತ್ತಿರುವ ಪ್ರವಾಸಿಗರು, ಜಮೀನಿನ ತುಂಬೆಲ್ಲ ಹಳದಿ ಚೆಲ್ಲಿದಂತೆ ಕಾಣುವ ಹೂವಿನ ಅಂದಕ್ಕೆ ವ್ಹಾವ್ ಎನ್ನುತ್ತಿದ್ದಾರೆ. ಪ್ರವಾಸಿಗರ ಸೆಲ್ಫಿ ಸಂಭ್ರಮಕ್ಕೆ ಕೆಲ ಜಮೀನು ಮಾಲೀಕರು ತೊಂದರೆ ಅನುಭವಿಸಿದರೇ ಮತ್ತೆ ಕೆಲವರು ಹರ್ಷ ವ್ಯಕ್ತಪಡಿಸಿದ್ದಾರೆ. ಗಿಡಗಳನ್ನು ತುಳಿದು ಹಾಳು ಮಾಡಬೇಡಿ, ಹೂವುಗಳನ್ನು ಕೀಳಬೇಡಿ ಎಂದು ಕೆಲ ರೈತರು ಮನವಿ ಮಾಡಿಕೊಳ್ಳುತ್ತಿದ್ದಾರೆ.

ಸಾಮಾನ್ಯವಾಗಿ ಸೂರ್ಯಕಾಂತಿಯನ್ನು ಗುಂಡ್ಲುಪೇಟೆ ತಾಲೂಕು ವ್ಯಾಪ್ತಿಯಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಸೂರ್ಯಕಾಂತಿ ಬೆಳೆ ಬೆಳೆಯುವುದಿಲ್ಲ. ಇದರಿಂದ ನೆರೆ ರಾಜ್ಯದವರಿಗೆ ಸೂರ್ಯಕಾಂತಿ ಫಸಲು ವಿಶೇಷ ಎನಿಸಲಿದ್ದು, ಈ ಭಾಗದ ರೈತರ ಸೂರ್ಯಕಾಂತಿ ಜಮೀನುಗಳು ಪ್ರವಾಸಿಗರ ಆಕರ್ಷಣೆಯ ಕೇಂದ್ರ ಬಿಂದುವಾಗಿವೆ.

ಅರಣ್ಯ ಸಂಚಾರಿ ದಳದ ಕಾರ್ಯಾಚರಣೆ

ಮೂವರು ಬೇಟೆಗಾರರ ಬಂಧನ



ಕೊಳ್ಳೇಗಾಲ, ಜು.17–ಕಾಡು ಹಂದಿಗಳನ್ನು ಬೇಟೆಯಾಡುತ್ತಿದ್ದ ಮೂವರು ಬೇಟೆಗಾರರನ್ನು ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮಂಡ್ಯ ಜಿಲ್ಲೆಯ ಮೊಳೆಕೊಪ್ಪಲು ಗ್ರಾಮದ ನಿವಾಸಿಗಳಾದ ಜಯರಾಮ(48), ನಾಗೇಶ(43) ಹಾಗೂ ಗೂಡ್ಸ್ ವಾಹನ ಚಾಲಕ ವಿಜಯಕುಮಾರ್(31) ಬಂಧಿತರು. ಆರೋಪಿಗಳು ಕೊಳ್ಳೇಗಾಲ ತಾಲೂಕಿನ ಹೊಸ ಮಾಲಂಗಿ ಗ್ರಾಮದ ಕಬ್ಬಿನ ಗದ್ದೆಯೊಂದರಲ್ಲಿ ದೊಣ್ಣೆ ಮತ್ತು ಪ್ಲಾಸ್ಟಿಕ್ ಬಲೆ ಉಪಯೋಗಿಸಿಕೊಂಡು ಕಾಡು ಹಂದಿಗಳನ್ನು ಬೇಟೆಯಾಡಿ ಸಾಗಿಸುತ್ತಿದ್ದರು. ಖಚಿತ ಮಾಹಿತಿ ಹಿನ್ನೆಲೆ ಅರಣ್ಯ ಸಂಚಾರಿ ದಳದ ಪಿಎಸ್ಐ ಆನಂದ್ ಕುಮಾರ್ ಸಿಬ್ಬಂದಿಯೊಂದಿಗೆ ದಾಳಿ ನಡೆಸಿ ಗೂಡ್ಸ್ ವಾಹನ ಸಮೇತ ಒಂದು ಮೃತ ಹಂದಿ, ಮೂರು ಜೀವಂತ ಹಂದಿ ಸೇರಿದಂತೆ ಬೇಟೆಗೆ ಬಳಸಿದ್ದ ದೊಣ್ಣೆ ಬಲೆ ವಶಕ್ಕೆ ಪಡೆದು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಬಸವರಾಜು, ರಾಮಚಂದ್ರ, ತಕಿವುಲ್ಲಾ, ಸ್ವಾಮಿ, ಶಂಕರ್, ಚಾಲಕ ಪ್ರಭಾಕರ್ ಇನ್ನಿತರರು.

ಬಸವ ಭವನ ಕಾಮಗಾರಿಗೆ ಮರು ಚಾಲನೆ



ಹನೂರು, ಜು.17–ತಾಲೂಕಿನ ಒಡೆಯರ ಪಾಳ್ಯದಲ್ಲಿ 16 ವರ್ಷಗಳಿಂದಲೂ ಅಪೂರ್ಣ ಗೊಂಡಿರುವ ಬಸವ ಭವನವನ್ನು ವೈಯಕ್ತಿಕ ನೆರವು ಹಾಗೂ ಗ್ರಾಮಸ್ಥರ ಸಹಕಾರದೊಂದಿಗೆ ಪೂರ್ಣಗೊಳಿಸಿ, ಇನ್ನೆರಡು ತಿಂಗಳಲ್ಲಿ ಸಮಾಜ ಸೇವೆ ಮುಕ್ತಗೊಳಿಸುವುದಾಗಿ ಸಮಾಜ ಸೇವಕ ನಿಶಾಂತ್ ಹೇಳಿದರು.

ಒಡೆಯರ ಪಾಳ್ಯ ಗ್ರಾಮದಲ್ಲಿ ನಡೆದ ಬಸವ ಭವನ ಕಾಮಗಾರಿಗೆ ಮರು ಚಾಲನೆ ನೀಡಿ ಮಾತನಾಡಿದರು. ಹನೂರು ಕ್ಷೇತ್ರದಲ್ಲಿ ನನ್ನ ಕೈಲಾದ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಜನರ ಕಷ್ಟ–ಸುಖಗಳಿಗೆ ಸ್ಪಂದಿಸಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡುತ್ತೇನೆ. ಕಳೆದ 15 ದಿನಗಳ ಹಿಂದೆ ಇಲ್ಲಿನ ಮುಖಂಡರ ಒತ್ತಾಸೆಗೆ ಮಣಿದು ಈ ಕಾಮಗಾರಿ ಪೂರ್ಣಗೊಳಿಸುವ ಭರವಸೆ ನೀಡಿದ್ದೆ. ಅದರಂತೆ ಇಂದು ನಿಮ್ಮೆಲ್ಲರ ಸಮ್ಮುಖದಲ್ಲಿ ಇಂದು ಕಾಮಗಾರಿ ಮರು ಚಾಲನೆ ನೀಡಲಾಗುತ್ತಿದೆ. ಜನರ ಸೇವೆಗೆ ನನಗೆ ಅವಕಾಶ ಸಿಕ್ಕಿರುವುದಕ್ಕೆ ಸಂತಸವಾಗಿದೆ ಎಂದರು.

ಗ್ರಾಮದ ಮುಖಂಡ ಸಿದ್ದಲಿಂಗಸ್ವಾಮಿ ಮಾತನಾಡಿ, ನಿಶಾಂತ್ ಅವರಿಗೆ ಸಾಮಾಜಿಕ ಸೇವಾ ಕಳಕಳಿ ಇದೆ. ಹಾಗಾಗಿ ಕ್ಷೇತ್ರದಲ್ಲಿ 11 ಕಡೆ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣಕ್ಕೆ ಚಾಲನೆ ನೀಡಿದ್ದು, ಹಲವು ಮಠಗಳ ಜೀರ್ಣೋದ್ಧಾರಕ್ಕೆ ಮುಂದಾಗಿದ್ದಾರೆ. 25ಕ್ಕೂ ಹೆಚ್ಚು ಪ್ರೌಢಶಾಲಾ ಮಕ್ಕಳಿಗೆ ಯೂನಿಫಾಂ, ಬ್ಯಾಗ್ ಮತ್ತು ಶೂ ವಿತರಿಸುವ ಮೂಲಕ ಸಮಾಜ ಸೇವಾ ಕೆಲಸ ಮಾಡುತ್ತಿದ್ದಾರೆ ಎಂದರು.

ಗುಂಡೇಗಾಲ ಪಟ್ಟದ ಮಠಾಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಒಡೆಯರ ಪಾಳ್ಯ ಮಠದ ಬಸವಣ್ಣ ಸ್ವಾಮೀಜಿ, ಸೋಮಶೇಖರ್, ಬೈಲೂರು ಗ್ರಾಪಂ ಅಧ್ಯಕ್ಷೆ ಗಿರಿಜ, ಉಪಾಧ್ಯಕ್ಷ ಸದಾನಂದ ಮೂರ್ತಿ, ನಂದೀಶ್, ದಿವ್ಯಾನಂದ ಮೂರ್ತಿ, ಮಹೇಶ, ಶಾಂತಮೂರ್ತಿ, ಗುಂಡೇಗಾಲ ಬಸಪ್ಪ, ಜಡೆರುದ್ರಪ್ಪ, ಜಯಣ್ಣ ಇನ್ನಿತರರಿದ್ದರು.

ಕಬ್ಬಳ್ಳಿಯಲ್ಲಿ ತಿಂಗಳ ತಿರುವು ಕಾರ್ಯಕ್ರಮ

ಬೇಗೂರು, ಜು.17–ಗುಂಡ್ಲುಪೇಟೆ ತಾಲೂಕಿನ ಕಬ್ಬಳ್ಳಿ ಗ್ರಾಮದ ಸಮಾಜ ಕಲ್ಯಾಣ ಇಲಾಖೆಯ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ತಿಂಗಳ ತಿರುವು ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬೇಗೂರು ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಜಗದೀಶ್ ದೂಳಶಟ್ಟಿ ಮಾತನಾಡಿ, ಮಕ್ಕಳೆ ಭವಿಷ್ಯದ ಆಸ್ತಿ. ಮಕ್ಕಳ ಕನಸುಗಳನ್ನು ಸಾಕಾರ ಗೊಳಿಸಲು ಇಂತಹ ಕಾರ್ಯಕ್ರಮಗಳು ನಡೆಯಬೇಕು. ಮಕ್ಕಳು ದುಶ್ಚಟಗಳಿಂದ ದೂರವಿರಬೇಕು. ಸಮಾಜದಲ್ಲಿ ಸಾರ್ವಜನಿಕವಾಗಿ ಧೂಮಪಾನ ಮದ್ಯಪಾನ ಕಂಡು ಬಂದರೆ 112 ಕಂಟ್ರೋಲ್‌ಗೆ ಕರೆಮಾಡಿ ಎಂದರು, ಕಾರ್ಯಕ್ರಮದಲ್ಲಿ ಮೇಲ್ವಿಚಾರಕ ಹೆಚ್.ಎಂ.ಪೃಥ್ವಿರಾಜ್ ಮಾತನಾಡಿ, ವಿದ್ಯಾರ್ಥಿ ನಿಲಯದಲ್ಲಿ ದೊರಕುವ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು ಎಂದು ಸಲಹೆ ನೀಡಿದರು

ಸಮಾರಂಭದಲ್ಲಿ ಪೊಲೀಸ್ ಇಲಾಖೆಯ ನಾಗೇಂದ್ರ, ಪ್ರದೀಪ್, ವಸತಿ ನಿಲಯದ ವಿ.ಎಮ್.ಮಹದೇವಸ್ವಾಮಿ, ಮಣಿಕಂಠ, ಗೌರಮ್ಮ ಹಾಗೂ ವಿದ್ಯಾರ್ಥಿಗಳಿದ್ದರು.



ಹೊಯ್ಸಳ, ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು. ಜು.17– ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ ಯಾವುದೇ ಕ್ಷೇತ್ರದಲ್ಲಿ ನಾವೀನ್ಯತೆ (Innovation) ತಾರ್ಕಿಕ (scholastic) ಸಾಧನೆಗಳು ಕ್ರೀಡೆ (ಕಲೆ ಸಾಂಸ್ಕೃತಿಕ ಸಂಗೀತ) ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿರುವಂತಹ ಮಕ್ಕಳಿಗೆ ಜಿಲ್ಲಾಮಟ್ಟದಲ್ಲಿ ಪ್ರಶಸ್ತಿ ನೀಡುವ ಕುರಿತು ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಜು.29ರೊಳಗಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವವರು 5–18 ವರ್ಷದೊಳಗಿರಬೇಕು. ಅರ್ಜಿ ನಮೂನೆಗಳಿಗಾಗಿ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೃಷ್ಣದೇವರಾಯ ಸರ್ಕಲ್, ವಿಜಯನಗರ 2ನೇ ಹಂತ, ಮೈಸೂರು–17 ಈ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 2495432 ಅನ್ನು ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

GST ಹೊರೆ

ಜಿಎಸ್‌ಟಿ ಹಾಕಲಾಗುತ್ತಿದೆ. ಈ ಹಿಂದೆ ಇದರ ಜಿಎಸ್‌ಟಿ ಶೇ.5ರಷ್ಟು ಮಾತ್ರ ಇತ್ತು.

ಅದೇ ರೀತಿ, ಟೆಟ್ರಾ ಪ್ಯಾಕ್ ಮತ್ತು ಬ್ಯಾಂಕ್ ಚೆಕ್‌ಗಳ ಮೇಲೆ ಶೇ.18ರಷ್ಟು ಮತ್ತು ಅಟ್ಲಾಸ್ ಸೇರಿದಂತೆ ಇತರೆ ನಕ್ಷೆಗಳು ಮತ್ತು ಚಾರ್ಟ್‌ಗಳ ಮೇಲೆ ಶೇ.12ರಷ್ಟು ಜಿಎಸ್‌ಟಿ ವಿಧಿಸಲಾಗುತ್ತದೆ. ರಸ್ತೆ, ಸೇತುವೆ, ರೈಲ್ವೆ, ಮೆಟ್ರೊ, ತ್ಯಾಜ್ಯ ಸಂಸ್ಕರಣಾ ಘಟಕದ ಕಾಮಗಾರಿಗಳ ಗುತ್ತಿಗೆಗಳ ಮೇಲೆ ಶೇ.18ರಷ್ಟು ಜಿಎಸ್‌ಟಿ ಹಾಕಲಾಗುತ್ತದೆ.

ಚರ್ಮದ ಸಿದ್ಧ ಉಡುಪುಗಳು, ಟೈಲರಿಂಗ್, ಜವಳಿ ಸೇವೆಗಳು, ಚೆಕ್ ಬುಕ್‌ಗಳ ದರವೂ ಕೂಡ ಹೆಚ್ಚಳವಾಗಲಿದೆ. ರೋಪ್‌ವೇಗಳು ಮತ್ತು ಕೆಲವು ಶಸ್ತ್ರಚಿಕಿತ್ಸಾ ಉಪಕರಣಗಳು, ಸರಕು ಮತ್ತು ಪ್ರಯಾಣಿಕರ ಸಾಗಣೆಯ ಮೇಲಿನ ತೆರಿಗೆ ದರವನ್ನು ಶೇ.12ರಿಂದ 5ಕ್ಕೆ ಇಳಿಸಲಾಗಿದೆ. ಇದೇ ವೇಳೆ ಬ್ಯಾಟರಿ ಇರುವ ಅಥವಾ ಇಲ್ಲದ ಎಲೆಕ್ಟ್ರಿಕ್ ವಾಹನಗಳ ಮೇಲಿನ ರಿಯಾಯಿತಿ ಶೇ.5ರಷ್ಟು ಜಿಎಸ್‌ಟಿ ಮುಂದುವರೆಯಲಿವೆ.

ನಂದಿನಿ ಉತ್ಪನ್ನಗಳ ಬೆಲೆ ಏರಿಕೆ

ಸೇರಿದಂತೆ ಇಂಧನ, ಅಡುಗೆ ಎಣ್ಣೆ, ವಿವಿಧ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಬಡ ಹಾಗೂ ಮಧ್ಯಮ ವರ್ಗದ ಜನರು ಜೀವನ ಸಾಗಿಸುವುದೇ ಕಷ್ಟವಾದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಇಂತಹ ಸಂದರ್ಭದಲ್ಲಿ ನಂದಿನಿ ಉತ್ಪನ್ನಗಳ ದರ ಹೆಚ್ಚಳ ಗ್ರಾಹಕರ ಕೈಸುಡುವಂತೆ ಮಾಡಿದೆ. ಕೇಂದ್ರ ಸರ್ಕಾರ ನಂದಿನಿ ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರ ಹೆಚ್ಚಳ ಮಾಡಿದಂತೆ ಹಾಲು ಸೇರಿದಂತೆ ನಂದಿನಿ ಉತ್ಪನ್ನಗಳ ಬೆಲೆ ಏರಿಕೆಗೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಹಾಲು ಒಕ್ಕೂಟದ ಸಭೆಯಲ್ಲಿ ನಂದಿನಿ ಉತ್ಪನ್ನಗಳ ದರ ಹೆಚ್ಚಳ ಮಾಡುವುದಕ್ಕೆ ನಿರ್ಧರಿಸಲಾಗಿದ್ದು, ನಾಳೆಯಿಂದಲೇ ಜಾರಿಗೆ ಬರುವಂತೆ ಆದೇಶಿಸಿದೆ.

ಈ ಹಿಂದೆ ನಂದಿನಿ ಉತ್ಪನ್ನಗಳ ಮೇಲೆ ಜಿಎಸ್‌ಟಿ ವಿನಾಯಿತಿ ನೀಡಲಾಗಿತ್ತು. ಆದರೆ ಈಗ ಕೇಂದ್ರ ಸರ್ಕಾರ ಶೇ.5ರಷ್ಟು ಜಿಎಸ್‌ಟಿ ವಿಧಿಸಿದೆ. ಈ ಹಿನ್ನೆಲೆಯಲ್ಲಿ ಮೊಸರು, ಲಸ್ಸಿ, ಮಜ್ಜಿಗೆ ಸೇರಿದಂತೆ ಕೆಲವು ಉತ್ಪನ್ನಗಳ ದರದೊಂದಿಗೆ ಜಿಎಸ್‌ಟಿ ವಿಧಿಸಲಾಗುತ್ತಿದೆ. ಹಾಗಾಗಿ 2 ರಿಂದ 4 ರೂ. ಹೆಚ್ಚಳವಾಗಿದೆ. ಹಾಲಿನ ಮೇಲೆ ಜಿಎಸ್‌ಟಿ ವಿಧಿಸದ ಕಾರಣ ಎಂದಿನಂತೆ ಹಾಲಿನ ದರ ಇರುತ್ತದೆ. ಲಸ್ಸಿ, ಮೊಸರು, ಮಜ್ಜಿಗೆಗಳ ಪ್ಯಾಕೆಟ್ ಮೇಲೆ ಹಳೆಯ ದರ ಮುದ್ರಿತವಾಗಿರುತ್ತದೆ. ಆದರೆ ಗ್ರಾಹಕರು ಪರಿಷ್ಕೃತ ದರವನ್ನು ನೀಡಿ ಖರೀದಿಸಬೇಕು. ಹಳೆಯ ದರ ಮುದ್ರಿತ ಪ್ಯಾಕೆಟ್‌ಗಳು ಖಾಲಿಯಾಗುವವರೆಗು ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.

– ಬಿ.ಎನ್.ವಿಜಯಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಮೈಮುಲ್.

ವಿಪಕ್ಷ ಉಪ ರಾಷ್ಟ್ರಪತಿ ಅಭ್ಯರ್ಥಿ

ಗುಜರಾತ್‌ನ 23ನೇ ಗವರ್ನರ್, ರಾಜಸ್ಥಾನದ 20ನೇ ರಾಜ್ಯಪಾಲೆ ಮತ್ತು ಉತ್ತರಾಖಂಡದ 4ನೇ ರಾಜ್ಯಪಾಲೆಯಾಗಿ ಆಗಸ್ಟ್ 2014ರ ಅಂತ್ಯದವರೆಗೆ ಸೇವೆ ಸಲ್ಲಿಸಿದ್ದಾರೆ. ಅದಕ್ಕೂ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಸಂಸದೆಯಾಗಿ ಕೇಂದ್ರ ಸಚಿವೆಯಾಗಿ ಯುಪಿಎ ಸರ್ಕಾರದಲ್ಲಿ ಸೇವೆ ಸಲ್ಲಿಸಿದ್ದರು.ಕಾಂಗ್ರೆಸ್ ನಲ್ಲಿ ಹಿರಿಯ ರಾಜಕಾರಣಿಯಾಗಿ ಗುರುತಿಸಿಕೊಂಡಿರುವ ಆಳ್ವಾ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಜಂಟಿ ಕಾರ್ಯದರ್ಶಿಯಾಗಿದ್ದರು. ಅವರ ಅತ್ತೆ, ವೈಲೆಟ್ ಆಳ್ವ, 1960 ರ ದಶಕದಲ್ಲಿ ರಾಜ್ಯಸಭೆಯ ಉಪಾಧ್ಯಕ್ಷೆಯಾಗಿದ್ದರು.

ಮಾರ್ಗರೇಟ್ ಆಳ್ವ ಹರ್ಷ: ಭಾರತದ ಉಪರಾಷ್ಟ್ರಪತಿ ಹುದ್ದೆಗೆ ಜಂಟಿ ವಿರೋಧ ಪಕ್ಷದ ಅಭ್ಯರ್ಥಿಯಾಗಿ ನಾಮನಿರ್ದೇಶನಗೊಂಡಿರುವುದು ಒಂದು ವಿಶೇಷ ಮತ್ತು ಗೌರವವಾಗಿದೆ. ನಾನು ಈ ನಾಮನಿರ್ದೇಶನವನ್ನು ಅತ್ಯಂತ ನಮ್ರತೆಯಿಂದ ಸ್ವೀಕರಿಸುತ್ತೇನೆ. ನನ್ನ ಮೇಲೆ ಇಟ್ಟಿರುವ ನಂಬಿಕೆಗಾಗಿ ವಿರೋಧ ಪಕ್ಷದ ನಾಯಕರಿಗೆ ಧನ್ಯವಾದಗಳು ಎಂದು ಮಾರ್ಗರೇಟ್ ಆಳ್ವ ಟ್ವೀಟ್ ಮಾಡಿದ್ದಾರೆ.

ಚಾಮುಂಡೇಶ್ವರಿಯಲ್ಲಿ ಮತ್ತೆ ಸ್ಪರ್ಧಿಸಲ್ಲ

ಬಿಟ್ಟು ಬೇರೆ ಕಡೆ ಸ್ಪರ್ಧೆ ಮಾಡುತ್ತೇನೆ ಎಂದು ಸ್ಪಷ್ಟವಾಗಿ ತಿಳಿಸಿದರು.

ಕೊನೆ ಚುನಾವಣೆ; ಉದ್ದೇಶ: 2023ರ ವಿಧಾನಸಭಾ ಚುನಾವಣೆ ನಾನು ಸ್ಪರ್ಧಿಸುವ ಕೊನೆಯ ಚುನಾವಣೆ. ನಂತರದಲ್ಲಿ ರಾಜ್ಯಸಭೆಗೆ ಆಯ್ಕೆ ಸೇರಿದಂತೆ ಯಾವ ಹುದ್ದೆ ನೀಡಿದರೂ ನಾನು ಸ್ವೀಕಾರ ಮಾಡುವುದಿಲ್ಲ. ಭ್ರಷ್ಟಾಚಾರ, ಕೋಮುವಾದಿ ಸರ್ಕಾರ, ಧರ್ಮ ಹಾಗೂ ಜಾತಿ ಆಧಾರಿತ ರಾಜಕಾರಣ ತೊಲಗಿ ರಾಜ್ಯ ಉಳಿಯಬೇಕು ಎಂಬ ಉದ್ದೇಶದಿಂದ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ ಎಂದು ಹೇಳಿದರು.

ಸೋಲಿಗೆ ಕಾರಣ ಏನು?: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಗೆಲುವು–ಸೋಲು ಸಹಜ. ಇವೆರಡನ್ನೂ ನಾನು ಸಮಚಿತ್ತದಿಂದ ಸ್ವೀಕರಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ 5 ಬಾರಿ ಗೆದ್ದು, 3 ಬಾರಿ ಸೋತಿದ್ದೇನೆ. 2018ರ ಚುನಾವಣೆಯಲ್ಲಿ ಕ್ಷೇತ್ರದ 338 ಬೂತ್ ಮಟ್ಟದಲ್ಲೂ ಕಮಿಟಿ ಇಲ್ಲದ ಕಾರಣ ಕಾರ್ಯಕರ್ತರು ಕೆಲಸ ಮಾಡಲಾಗದೆ ಸೋಲಬೇಕಾಯಿತು. ಸೋಲಿನಿಂದ ನಾನು ವ್ಯಥೆ ಪಡುವುದಿಲ್ಲ, ಅಳುವುದಿಲ್ಲ. ಕೆಲಸ ಮಾಡಿದ್ದರೂ ಚಾಮುಂಡೇಶ್ವರಿಯಲ್ಲಿ ಸೋಲಿಸಿದರು. ಆದರೆ ಬಾದಾಮಿ ಕ್ಷೇತ್ರದಲ್ಲಿ ಪ್ರಚಾರ ಮಾಡಿದ್ದು ಎರಡೇ ದಿನ ಅಲ್ಲಿನ ಜನ ಗೆಲ್ಲಿಸಿದರು ಎಂದು ಸ್ಮರಿಸಿಕೊಂಡರು.

ಅಭಿವೃದ್ಧಿ ಮಾಡಿದ್ದು ನಾನು: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಆಗಿದ್ದರೆ ಅದು ಸಿದ್ದರಾಮಯ್ಯ ಮಾಡಿದ್ದು, ಬೇರೆ ಯಾವನೂ ಮಾಡಿಲ್ಲ. ಇದನ್ನು ಎಲ್ಲಿ ಬೇಕಾದರೂ ಹೇಳಲು ಸಿದ್ಧನಿದ್ದೇನೆ. 1983ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಮೊದಲ ಬಾರಿ ಸ್ಪರ್ಧೆ ಮಾಡಿದೆ. ಆಗ ಕ್ಷೇತ್ರ ಹೇಗಿತ್ತು, ಈಗ ಹೇಗಿದೆ ಎನ್ನುವುದನ್ನು ಪರಾಮರ್ಶೆ ಮಾಡಲಿ ಎಂದು ಸಿದ್ದರಾಮಯ್ಯ ಹೇಳಿದರು.

ಪಕ್ಷದಲ್ಲಿ ಶಿಸ್ತು ಮುಖ್ಯ: ಶಿಸ್ತು ಇಲ್ಲದ ಯಾವ ರಾಜಕೀಯ ಪಕ್ಷವೂ ಬಲಯುತವಾಗಿ ಬೆಳೆಯಲು ಸಾಧ್ಯವಿಲ್ಲ. ಶಿಸ್ತಿಲ್ಲದಿದ್ದರೆ ಒಬ್ಬರು ಮತ್ತೊಬ್ಬರ ಕಾಲು ಎಳೆಯುವ ಪರಿಪಾಠ ಆರಂಭವಾಗುತ್ತದೆ. ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸುಮಾರು 200 ಮುಂಚೂಣಿ ಪದಾಧಿಕಾರಿಗಳ ನೇಮಿಸಿ, ಜವಾಬ್ದಾರಿ ನೀಡಿರುವುದು ಸೂಕ್ತವಾಗಿದೆ. ಯಾವುದೇ ಚುನಾವಣೆಯಲ್ಲಿ ಅಭ್ಯರ್ಥಿಯಿಂದ ಅಲ್ಲ ಕಾರ್ಯಕರ್ತರ ಪರಿಶ್ರಮದಿಂದ ಗೆಲುವು ಸಾಧ್ಯ. ಪ್ರತಿ ಗ್ರಾಮದಲ್ಲಿ ಮತದಾರರನ್ನು ಸಂಪರ್ಕಿಸಿ ಮತ ಹಾಕಿಸುವುದು ಕಾರ್ಯಕರ್ತರು. ಬೂತ್ ಮಟ್ಟದಲ್ಲಿ ಕಾರ್ಯಕರ್ತರು ಸಕ್ರಿಯವಾಗಿರದ ಕ್ಷೇತ್ರದಲ್ಲಿ ಗೆಲ್ಲಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಮುಂಚೂಣಿ ಪದಾಧಿಕಾರಿಗಳ ನೇಮಕಾತಿ ಮಾಡಿರುವುದು ಸಂಘಟನೆಗೆ ನೆರವಾಗಲಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಪಿ.ವಿ.ಸಿಂಧು ಚಾಂಪಿಯನ್

ಗೇಮ್‌ನಲ್ಲಿ ಪಿ.ವಿ.ಸಿಂಧು ಅವರಿಗೆ ಈ ಗೆಲುವು ಇನ್ನಷ್ಟು ಹುರುಪು ನೀಡಲಿದೆ. ಈ ವರ್ಷದಲ್ಲಿ ಸಿಂಧು ಅವರು ಪ್ರಶಸ್ತಿ ಗೆಲ್ಲುತ್ತಿರುವುದು ಇದು 3ನೇ ಬಾರಿ. ಈ ಹಿಂದೆ ಸೈಯದ್ ಮೋದಿ ಇಂಟರ್ನಾಷನಲ್ ಮತ್ತು ಸ್ವಿಸ್ ಓಪನ್‌ನಲ್ಲಿ ಸೂಪರ್ 300 ಪ್ರಶಸ್ತಿ ಗೆದ್ದಿದ್ದರು. ಎರಡು ಒಲಿಂಪಿಕ್ ಪದಕಗಳು ಮಾತ್ರವಲ್ಲದೆ ವಿಶ್ವ ಚಾಂಪಿಯನ್ ಷಿಪ್‌ನಲ್ಲಿ ಚಿನ್ನ, 2 ಬೆಳ್ಳಿ ಮತ್ತು 2 ಕಂಚಿನ ಪದಕಗಳನ್ನು ಸಿಂಧು ಗೆದ್ದುಕೊಂಡಿದ್ದಾರೆ.

ಪ್ರಧಾನಿ ಸೇರಿ ಹಲವರು ಅಭಿನಂದನೆ: ಪಿ.ವಿ.ಸಿಂಧು ಅವರ ಗೆಲುವಿಗೆ ಪ್ರಧಾನಿ ಮೋದಿ ಸೇರಿ ದೇಶಾದ್ಯಂತ ಗಣ್ಯರು, ಸೆಲೆಬ್ರಿಟಿಗರು, ಕ್ರೀಡಾಪ್ರೇಮಿಗಳು, ದೇಶಪ್ರೇಮಿಗಳಿಂದ ಶುಭಾಶಯಗಳ ಮಹಾಪೂರವೇ ಹರಿದುಬರುತ್ತಿದೆ. ತನ್ನ ಮೊದಲ ಸಿಂಗಾಪುರ್ ಓಪನ್ ಪ್ರಶಸ್ತಿಯನ್ನು ಗೆದ್ದ ಸಿಂಧು ಅವರು ಮತ್ತೊಮ್ಮೆ ತಮ್ಮ ಅಸಾಧಾರಣ ಕ್ರೀಡಾ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಇದು ದೇಶಕ್ಕೆ ಹೆಮ್ಮೆಯ ಕ್ಷಣವಾಗಿದೆ ಮತ್ತು ಮುಂಬರುವ ಆಟಗಾರರಿಗೆ ಸ್ಫೂರ್ತಿ ನೀಡುತ್ತದೆ ಎಂದು ಪ್ರಧಾನಿ ಮೋದಿ ಶ್ಲಾಘಿಸಿದ್ದಾರೆ.

ಯುಎಇನಲ್ಲಿ ಏಷ್ಯಾ ಕಪ್?

ತೋಡಿಕೊಂಡಿದ್ದರು. ಈ ಎಲ್ಲ ಸ್ಥಿತಿಗತಿಗಳನ್ನು ಕಂಡು ಶ್ರೀಲಂಕಾ ಕ್ರಿಕೆಟ್ ಬೋರ್ಡ್‌ನ ಕಾರ್ಯದರ್ಶಿ ಮೋಹನ್ ಡಿಸಿಲ್ವ ಏಷ್ಯಾಕಪ್–2022 ಟೂರ್ನಿಯನ್ನು ಯುಎಇಗೆ ಸ್ಥಳಾಂತರಿಸುವ ಕುರಿತಾಗಿ ಈಗಾಗಲೇ ಏಷ್ಯಾಕಪ್‌ನಲ್ಲಿ ಭಾಗವಹಿಸುತ್ತಿರುವ ದೇಶಗಳ ಕ್ರಿಕೆಟ್ ಬೋರ್ಡ್‌ಗಳೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ವರದಿಯಾಗಿದೆ. ಶ್ರೀಲಂಕಾ ಬೋರ್ಡ್ ನಡೆಸಿದ ಮಾತುಕತೆ ಯಶಸ್ವಿಯಾಗಿದ್ದು ಯುಎಇಯಲ್ಲಿ ಏಷ್ಯಾಕಪ್ ಪಂದ್ಯಗಳು ನಡೆಯುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ. ಏಷ್ಯಾಕಪ್‌ನಲ್ಲಿ ಭಾರತ, ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಘಾನಿಸ್ತಾನ ಈಗಾಗಲೇ ನೇರ ಅವಕಾಶ ಪಡೆದಿದೆ. ಹಾಂಕಾಂಗ್, ಸಿಂಗಾಪುರ್, ಕುವೈತ್ ಮತ್ತು ಯುಎಇ ತಂಡಗಳು ಅರ್ಹತಾ ಸುತ್ತಿನಲ್ಲಿ ತೇರ್ಗಡೆಗೊಂಡು 6ನೇ ತಂಡವಾಗಿ ಟೂರ್ನಿಯಲ್ಲಿ ಆಡುವ ಅವಕಾಶ ಪಡೆಯಬೇಕಾಗಿದೆ. ಟೂರ್ನಿ ಆಗಸ್ಟ್ 26ರಿಂದ ಸೆಪ್ಟೆಂಬರ್ 11ರವರೆಗೆ ನಡೆಸಲು ತೀರ್ಮಾನಿಸಲಾಗಿದೆ. ಟೂರ್ನಿ ಯುಎಇಯಲ್ಲಿ ನಡೆಯುವ ಕುರಿತಾಗಿ ಅಧಿಕೃತವಾಗಿ ಏಷ್ಯಾನ್ ಕ್ರಿಕೆಟ್ ಕೌನ್ಸಿಲ್ ಪ್ರಕಟಿಸುವ ತಯಾರಿಯಲ್ಲಿದೆ ಎಂದು ಈಗಾಗಲೇ ವರದಿಯಾಗಿದೆ.

ಭಾರತೀಯ ಭಾಷಾ ಸಂಸ್ಥಾನದ (ಸಿಐಐಎಲ್) 54ನೇ ಸಂಸ್ಥಾಪನಾ ದಿನಾಚರಣೆ

ಭಾರತೀಯ ಭಾಷಾ ಸಂಸ್ಥಾನದ ಬಲವರ್ಧನೆಗೆ ಕೇಂದ್ರ ಬದ್ಧ

ಕೇಂದ್ರದ ಉನ್ನತ ಶಿಕ್ಷಣ ಇಲಾಖೆ ಜಂಟಿ ಕಾರ್ಯದರ್ಶಿ ನೀತಾ ಪ್ರಸಾದ್

ಮೈಸೂರು, ಜು.17 (ಆರ್‌ಕೆಬಿ)– ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್) ಅನ್ನು ಇನ್ನಷ್ಟು ಬಲಪಡಿಸಲು ಕೇಂದ್ರವು ಬದ್ಧವಾಗಿದೆ ಎಂದು ಭಾರತ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಜಂಟಿ ಕಾರ್ಯದರ್ಶಿ ನೀತಾ ಪ್ರಸಾದ್ ತಿಳಿಸಿದರು.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಭಾರತೀಯ ಭಾಷಾ ಸಂಸ್ಥಾನದ ಕಾನ್ಫರೆನ್ಸ್ ಹಾಲ್‌ನಲ್ಲಿ ಭಾನುವಾರ ಭಾರತೀಯ ಭಾಷಾ ಸಂಸ್ಥಾನದ 54ನೇ ಸಂಸ್ಥಾಪನಾ ದಿನಾಚರಣೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ವರ್ಚುವಲ್ ಮೂಲಕ ಮುಖ್ಯ ಅತಿಥಿಯಾಗಿ ಮಾತನಾಡಿದರು. 'ಶಿಕ್ಷಣ ಮತ್ತು ಭಾಷಾ ಸಂರಕ್ಷಣಾ' ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಭಾರತೀಯ ಭಾಷಾ ಸಂಸ್ಥಾನವು ರೂಪಿಸಿರುವ ತನ್ನ ಭವಿಷ್ಯದ ಯೋಜನೆಗಳ ಅನುಷ್ಠಾನದಲ್ಲಿ ಸರ್ಕಾರವು ಅದನ್ನು ಬೆಂಬಲಿಸುತ್ತದೆ ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ–2020 ಮಾತೃಭಾಷೆಯಲ್ಲಿ ಬೋಧನೆಯನ್ನು ಪ್ರತಿಪಾದಿಸುತ್ತದೆ ಎಂದ ಅವರು, ಇದು ರಾಷ್ಟ್ರೀಯ ಏಕತೆಯನ್ನು ರೂಪಿಸಲು ಮತ್ತು ಸಂಗೀತ, ನೃತ್ಯ ಮತ್ತು ಇತರ ಕಲೆಗಳನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ ಎಂದರು.

ಗೌರವ ಅತಿಥಿಯಾಗಿದ್ದ ಭಾರತೀಯ ಭಾಷಾ ಸಂಸ್ಥಾನದ ಸಂಸ್ಥಾಪಕ ನಿರ್ದೇಶಕ ಪ್ರೊ.ಡಿ.ಪಿ.ಪಟ್ಟನಾಯಕ್ ಅವರು ಸಿಐಐಎಲ್‌ನ 54ನೇ ಸಂಸ್ಥಾಪನಾ ದಿನದ ಸ್ಮರಣಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿ, ಭಾಷಾ ವಿಜ್ಞಾನದಲ್ಲಿ ಮಾನವ ಸಂಪನ್ಮೂಲವನ್ನು ತರಬೇತಿ ಮತ್ತು ಪೋಷಣೆಗಾಗಿ ಸಿಐಐಎಲ್ ಅನ್ನು ವಿನ್ಯಾಸಗೊಳಿಸಲಾಗಿದೆ. ರಾಜ್ಯ ಮತ್ತು ಕೇಂದ್ರ ಏಜೆನ್ಸಿಗಳ ಸಹಯೋಗದೊಂದಿಗೆ ಭಾಷಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಹಾಯ ಮಾಡುತ್ತದೆ. ವಿಶ್ವವಿದ್ಯಾನಿಲಯಗಳು ಮತ್ತು ಸಂಸ್ಥೆಗಳಲ್ಲಿ ಭಾಷಾಶಾಸ್ತ್ರದ ಅಧ್ಯಯನವನ್ನು ಉತ್ತೇಜಿಸಲು ಸಿಐಐಎಲ್ ನೆರವಾಗಲಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಿಐಐಎಲ್ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಮಾತನಾಡಿ, ಸಿಐಐಎಲ್ ಭಾರತೀಯ ಭಾಷೆಗಳಿಗೆ ಭಾಷಾವಾರು ಡೇಟಾ ಕನ್ಸೋರ್ಟಿಯಂ ಹೊಂದಿದ್ದು, ಇದು ಕೇಂದ್ರ ಅನುದಾನಿತ ಯೋಜನೆಯಾಗಿದೆ. ಭಾರತೀಯ ಭಾಷೆಗಳ ಡಿಜಿಟಲ್ ಕಾರ್ಪೋರಾವನ್ನು ನಿರ್ಮಿಸಲು ಕೆಲಸ ಮಾಡುತ್ತದೆ.



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ 54ನೇ ಸಂಸ್ಥಾಪನಾ ದಿನಾಚರಣೆ ಸಂದರ್ಭದಲ್ಲಿ ಸಿಐಐಎಲ್‌ನ ಸಂಸ್ಥಾಪಕ ನಿರ್ದೇಶಕ ಪ್ರೊ.ಡಿ.ಪಿ.ಪಟ್ಟನಾಯಕ್ ಅವರು ಸ್ಮರಣಿಕೆಯನ್ನು ಬಿಡುಗಡೆ ಮಾಡಿದರು. ಚಿತ್ರದಲ್ಲಿ (ಎಡದಿಂದ ಬಲಕ್ಕೆ) ಸಿಐಐಎಲ್ ಸಹಾಯಕ ನಿರ್ದೇಶಕ ಡಾ.ನಾರಾಯಣ್ ಕುಮಾರ್ ಚೌಧರಿ, ಮಾಜಿ ನಿರ್ದೇಶಕ ಪ್ರೊ. ರಾಜೇಶ್ ಸಚದೇವ್, ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಮಾಜಿ ನಿರ್ದೇಶಕ ಪ್ರೊ.ಅವದೇಶ್ ಕುಮಾರ್ ಮಿಶ್ರಾ ಅವರನ್ನು ಕಾಣಬಹುದು.

ಭಾರತವಾಣಿ ಪ್ರಾಜೆಕ್ಟ್ ಸಿಐಐಎಲ್‌ನ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಇದು ಭಾರತೀಯ ಭಾಷೆಗಳಲ್ಲಿ ಪ್ರಕಟವಾದ ಸಂಪನ್ಮೂಲಗಳ ಡಿಜಿಟಲೀಕರಣ ಮತ್ತು ವೆಬ್–ಹೋಸ್ಟಿಂಗ್‌ಗಾಗಿ ಕಾರ್ಯನಿರ್ವಹಿಸುತ್ತದೆ. ಪ್ರಾಚೀನ ಕಾಲದಿಂದಲೂ ಭಾರತ ಮತ್ತು ವಿದೇಶಗಳಲ್ಲಿ ಭಾಷಾಶಾಸ್ತ್ರದ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡಿದ ಭಾಷಾಶಾಸ್ತ್ರಜ್ಞರ ಜೀವನಚರಿತ್ರೆಯ ಮೊನೊಗ್ರಾಫ್‌ಗಳನ್ನು ಒಳಗೊಂಡಿರುವ ಭಾರತೀಯ ಭಾಷಾಶಾಸ್ತ್ರದ ತಯಾರಕರ ಸರಣಿಯನ್ನು ಪ್ರಾರಂಭಿಸಲು ಸಿಐಐಎಲ್ ಯೋಜಿಸುತ್ತಿದೆ ಎಂದು ಹೇಳಿದರು.

ಸಿಐಐಎಲ್ ಭಾಷಾಶಾಸ್ತ್ರ, ಭಾಷೆಗಳು ಮತ್ತು ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ವಿವಿಧ ಎಂಎ, ಪಿಹೆಚ್‌ಡಿ ಮತ್ತು ಪೋಸ್ಟ್ ಡಾಕ್ಟರಲ್ ಫೆಲೋಶಿಪ್‌ಗಳನ್ನು ಪ್ರಾರಂಭಿಸಲು ಮುಂದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಿಐಐಎಲ್ ಮಾಜಿ ನಿರ್ದೇಶಕರಾದ ಪ್ರೊ.ಅವದೇಶ್ ಕುಮಾರ್ ಮಿಶ್ರಾ ಮತ್ತು ಪ್ರೊ.ರಾಜೇಶ್ ಸಚದೇವ್, ಸಿಐಐಎಲ್ ಸಹಾಯಕ ನಿರ್ದೇಶಕ ಡಾ.ನಾರಾಯಣಕುಮಾರ್ ಚೌಧರಿ, ಡಾ.ತಾರಿಕ್ ಖಾನ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಮೊದಲ ದಿನವಾದ ಭಾನುವಾರ ಉಪನ್ಯಾಸಗಳ ಸರಣಿಯ ನಂತರ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು 'ಜೇನು ಕುರುಬ' ಸಮುದಾಯದಿಂದ ಸಂಗೀತ ಮತ್ತು ನೃತ್ಯ ಪ್ರದರ್ಶನ ನಡೆಯಿತು.

ಮೈಸೂರು ರಂಗಾಯಣ ಹಸಿರು, ಕೆತ್ತನೆಗಳಿಂದ ಸಮೃದ್ಧವಾಗಿದೆ: ರಂಗ ಸಮಾಜದ ಸದಸ್ಯೆ ಹೆಲನ್



ಮೈಸೂರು, ಜು.17(ಎಂಕೆ)– ಬಂಜರಾಗಿದ್ದ ಮೈಸೂರು ರಂಗಾಯಣವಿಂದು ಹಸಿರು, ಕೆತ್ತನೆಗಳಿಂದ ಸಮೃದ್ಧವಾಗಿದೆ ಎಂದು ರಂಗ ಸಮಾಜದ ಸದಸ್ಯೆ ಹೆಲನ್ ಅಭಿಪ್ರಾಯಪಟ್ಟರು. ಮೈಸೂರು ರಂಗಾಯಣದಲ್ಲಿ 'ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ' ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಡ್ಡಂಡ ಸಿ.ಕಾರ್ಯಪ್ಪ ಅವರು ರಂಗಾಯಣ ನಿರ್ದೇಶಕರಾಗಿ ಬಂದ ಬಳಿಕ ಆಗಿರುವ ಬದಲಾವಣೆಗಳೇ ಅವರ ಕೆಲಸದ ಬಗ್ಗೆ ಹೇಳುತ್ತಿವೆ. ರಾಜ್ಯದಲ್ಲಿಯೇ ಮೈಸೂರು ರಂಗಾಯಣ ವಿಶೇಷವಾಗಿ ಗುರ್ತಿಸಿಕೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾತನಾಡಿ, ಮೈಸೂರಿನ ಖ್ಯಾತ ರಂಗಭೂಮಿ ಕಲಾವಿದರ ಹೆಸರಿನಲ್ಲಿ ವರ್ಷಕ್ಕೆ ಎರಡು ರಂಗಭೂಮಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವ ಮೂಲಕ ಸುಮಾರು 200 ಮಂದಿ ಕಲಾವಿದರಿಗೆ ರಂಗ ತರಬೇತಿ ನೀಡಲಾಗಿದೆ. ಅಲ್ಲದೆ ಯುವ ನಿರ್ದೇಶಕರಿಗೆ ಅವಕಾಶ ನೀಡುವ ಮೂಲಕ ಹೊಸ ನಾಟಕಗಳ ಹುಟ್ಟಿಗೆ ನೆಲೆ ಮಾಡಿಕೊಡಲಾಗಿದೆ ಎಂದು ಹೇಳಿದರು.

ನಾಟಕ ಪ್ರದರ್ಶನ: ಬಳಿಕ ರಚನೆ ಕೆ.ವಿ.ಅಕ್ಷರ, ಸಂಗೀತ ಆರ್.ಸಿ.ಧನಂಜಯ ಹಾಗೂ ವರುಣ್ ಭಾರಿಘಾಟ್ ಹಾಗೂ ಪ್ರವೀಣ್ ಬೆಳ್ಳಿ ನಿರ್ದೇಶನದಲ್ಲಿ ಪದ್ಮಶ್ರೀ ನಾಗರತ್ನಮ್ಮ ರಂಗಕಾರ್ಯಾಗಾರದ ಶಿಬಿರಾರ್ಥಿಗಳಿಂದ 'ಚೂರಿಕಟ್ಟೆ ಅರ್ಥಾತ್ ಕಲ್ಯಾಣ ಪುರ' ನಾಟಕ ಪ್ರದರ್ಶನವಾಯಿತು. ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ ಉಪಸ್ಥಿತರಿದ್ದರು.

ಜನ ಕಲ್ಯಾಣಕ್ಕಾಗಿ ಡಾ.ವೀರೇಂದ್ರ ಹೆಗಡೆಯವರು ಹಲವಾರು ಯೋಜನೆಗಳನ್ನು ನೀಡಿದ್ದಾರೆ

ಶಾಸಕ ಜಿ.ಟಿ.ದೇವೇಗೌಡ



ಮೈಸೂರು, ಜು.17– ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಡಾ.ಡಿ.ವಿರೇಂದ್ರ ಹೆಗ್ಗಡೆ ಮತ್ತು ಶ್ರೀಮತಿ ಹೇಮಾವತಿಯವರು ಸಮಾಜದ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ನೀಡಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಇಂದು ಚಾಮುಂಡೇಶ್ವರಿ ಕ್ಷೇತ್ರದ ಕಾಳಿಸಿದ್ದನಹುಂಡಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ನಡೆದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಕೃಷಿಗೆ ಸ್ವಸಹಾಯ ಸಂಘಗಳು, ಜ್ಞಾನದೀಪ ಶಾಲಾ ಶಿಕ್ಷಣದಡಿಯಲ್ಲಿ ಶಾಲಾ ಕಟ್ಟಡ ನಿರ್ಮಾಣಕ್ಕೆ, ಶಾಲಾ ಕೊಠಡಿ ದುರಸ್ತಿಗೆ, ಅತಿಥಿ ಶಿಕ್ಷಕರ ನೇಮಕ, ಡೆಸ್ಕ್ ಹೀಗೆ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ ಎಂದರು. ಸಮಾರಂಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಯೋಜನೆಯ ಪ್ರಾದೇಶಿಕ ನಿರ್ದೇಶಕರಾದ ಗಂಗಾಧರ್, ವಿ.ಮೋಹನ್ ರಾಜು, ಕಾಳಿಸಿದ್ದನಹುಂಡಿ ಜೈಸ್ವಾಮಿ, ಬಸವಣ್ಣ, ಚಿಕ್ಕಮಹದೇವು, ಗಣೇಶ್, ಪೈಲ್ವಾನ್ ಸ್ವಾಮಿ, ಕೃಷ್ಣ, ಶಿವಣ್ಣ, ಕಾರ್ಯದರ್ಶಿ ಶ್ರೀಮತಿ ಗುಣಶ್ರೀ ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಹಾವುಗಳ ಬಗ್ಗೆ ಜಾಗೃತಿ



ಮೈಸೂರು,ಜು.17(ಎಂಟಿವೈ)– ವಿಶ್ವ ಉರಗ ದಿನದ ಅಂಗವಾಗಿ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಹಾವುಗಳ ಬಗ್ಗೆ ಜಾಗೃತಿ ಮೂಡಿಸಿ, ಪರಿಸರ ಸಮತೋಲನದಲ್ಲಿ ಹಾವುಗಳ ಪಾತ್ರ ಕುರಿತು ಮನವರಿಕೆ ಮಾಡಿಕೊಡಲಾಯಿತು.

ಪರಿಸರ ಸ್ನೇಹಿ ತಂಡ ಆಯೋಜಿಸಿದ್ದ ವಿಶ್ವ ಉರಗ ದಿನದ ಕಾರ್ಯಕ್ರಮದಲ್ಲಿ ಹಾವುಗಳ ಸಂರಕ್ಷಣೆಯಲ್ಲಿ ಪ್ರಮುಖ ಸೇವೆ ಸಲ್ಲಿಸುತ್ತಿರುವ ಉರಗ ತಜ್ಞ ಸ್ನೇಕ್ ಶ್ಯಾಮ್, ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್ ಸಂಸ್ಥೆ ಮುಖ್ಯಸ್ಥ ರಾಜಕುಮಾರ್ ಡಿ.ದೇವರಾಜ ಅರಸ್, ಪ್ರಾಣಿ ರಕ್ಷಕ ಪ್ರದೀಪ್ ಹಾಗೂ ಸೂರ್ಯಕೀರ್ತಿ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿದ ಬಳಿಕ ಉರಗ ತಜ್ಞ ಸ್ನೇಕ್ ಶ್ಯಾಮ್ ಮಾತನಾಡಿ, ಪರಿಸರ ಸಮತೋಲನ ಕಾಪಾಡಬೇಕಾದರೆ ಉರಗ ಸಂತತಿಯ ಉಳಿವು ಮುಖ್ಯ. ಪ್ರತಿಯೊಂದು ಜೀವಿಗೂ ತನ್ನದೇ ಆದ ಆಹಾರ ಸರಪಳಿ ಇರುತ್ತದೆ. ಒಂದನ್ನೊಂದು ಅವಲಂಬಿಸಿಯೇ ಬದುಕುತ್ತವೆ. ಆಹಾರ ಸರಪಳಿಯಲ್ಲಿ ಯಾವುದಾದರೂ ಒಂದು ಕೊಂಡಿ ಕಳಚಿದರೆ ಸಮತೋಲನ ತಪ್ಪುತ್ತದೆ. ಆಗ ಬೇರೆ ಬೇರೆ ಸಮಸ್ಯೆ ಉದ್ಭವಿಸುತ್ತದೆ ಎಂದರು. ಈ ಹಿನ್ನೆಲೆಯಲ್ಲಿ ನಾವು ಪ್ರತಿಯೊಂದು ಜೀವ ಸಂಕುಲವನ್ನು ಗೌರವಿಸಬೇಕು. ಅದರಲ್ಲೂ ಜನರಲ್ಲಿ ಉರಗಗಳ ಬಗ್ಗೆ ತಪ್ಪು ಕಲ್ಪನೆ ಇದೆ ನಮಗಿರುವಂತೆಯೇ ಹಾವುಗಳಿಗೂ ಭಯವಿರುತ್ತದೆ. ಹಾಗಾಗಿ ಹಾವುಗಳನ್ನು ಕಂಡರೆ ಕೊಲ್ಲದಂತೆ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ ಎಂದರು. ಇದೇ ವೇಳೆ ಉರಗ ಪ್ರಭೇದಗಳು, ಅವುಗಳ ಸಂತತಿ, ಹಾವಿನ ಕಡಿತದ ಬಳಿಕ ನಡೆಸುವ ಪ್ರಥಮ ಚಿಕಿತ್ಸೆ ಕುರಿತು ಮಾಹಿತಿ ನೀಡಿದರು.

ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್ ಮುಖ್ಯಸ್ಥ, ರಾಜಕುಮಾರ್ ಡಿ.ದೇವರಾಜ ಅರಸ್ ಮಾತನಾಡಿ ಹಾವನ್ನು ಸಂರಕ್ಷಿಸುವಾಗ ವೈಜ್ಞಾನಿಕ ವಿಧಾನದಲ್ಲಿ ರಕ್ಷಣೆ ಮಾಡಬೇಕು. ಪ್ರಕೃತಿಯಲ್ಲಿ ಜೀವಿಸುವ ಪ್ರತಿಯೊಂದು ಪ್ರಾಣಿಗಳಿಗೂ ಅದರದೇ ಆದ ಜೀವನ ಕ್ರಮ ಇರುತ್ತದೆ. ಮನುಷ್ಯರ ಹಸ್ತಕ್ಷೇಪದಿಂದಲೇ ಜೀವ ಸಂಕುಲದ ಸ್ವಚ್ಛ ಬದುಕಿಗೆ ಧಕ್ಕೆಯಾಗುತ್ತದೆ. ಮಾನವನ ಹಸ್ತಕ್ಷೇಪ ಇಲ್ಲದಿದ್ದರೆ ಎಲ್ಲಾ ಜೀವ ಸಂಕುಲವೂ ತನ್ನಷ್ಟಕ್ಕೆ ತಾನು ಜೀವನ ನಡೆಸಿಕೊಂಡು ಸಹಬಾಳ್ವೆಯಿಂದ ಇರುತ್ತವೆ. ಸಣ್ಣ ವಯಸ್ಸಿನಲ್ಲೇ ಮಕ್ಕಳಿಗೆ ಪರಿಸರ ಸಂರಕ್ಷಣೆ ಕಾಳಜಿ ಬೆಳೆಸುವುದು ಅನಿವಾರ್ಯ ಎಂದರು.

ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್ ಕುಮಾರ್ ಮಾತನಾಡಿ, ಕೋವಿಡ್ ಕಷ್ಟಕಾಲದಲ್ಲೂ ಮನೆಗಳಿಗೆ ಹಾವು ನುಗ್ಗಿದಾಗ ಸ್ನೇಕ್ ಶ್ಯಾಮ್ ಅವರು ಆಗಮಿಸಿ ಹಾವನ್ನು ಸಂರಕ್ಷಿಸಿದ್ದಾರೆ ಎಂದು ಅವರ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಮೇಲುಕೋಟೆಯ ವಂಗೀಪುರದ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ್‌ಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮೃಗಾಲಯ ಪ್ರಾಧಿಕಾರದ ಮಾಜಿ ಸದಸ್ಯೆ ಜ್ಯೋತಿ ರೇಚಣ್ಣ, ಪರಿಸರ ಸ್ನೇಹಿ ತಂಡದ ಅಧ್ಯಕ್ಷ ಲೋಹಿತ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸುಚೇಂದ್ರ, ಚಕ್ರಪಾಣಿ, ಶಿಕ್ಷಕರಾದ ಚಂಪಾಶ್ರೀ, ಮಮತಾ, ದಿವ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಔರಂಗಬಾದ್, ಉಸ್ಮಾನಾಬಾದ್ ನಗರಗಳಿಗೆ ಮತ್ತೆ ಹೆಸರು ಬದಲಾಯಿಸಿದ ಶಿಂಧೆ ಸರ್ಕಾರ

ಮುಂಬೈ, ಜು.17– ಮಹಾರಾಷ್ಟ್ರದಲ್ಲಿನ ಔರಂಗಬಾದ್ ಮತ್ತು ಉಸ್ಮಾನಾಬಾದ್ ನಗರಗಳ ಹೆಸರನ್ನು ಕ್ರಮವಾಗಿ ಛತ್ರಪತಿ ಸಾಂಬಾಜಿನಗರ ಮತ್ತು ಧಾರಶಿವ್ ಎಂದು ಮರು ನಾಮಕರಣ ಮಾಡಲು ಏಕನಾಥ್ ಶಿಂಧೆ ನೇತೃತ್ವದ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಕಳೆದ ತಿಂಗಳು ಉದ್ಧವ್ ಠಾಕ್ರೆ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಔರಂಗಬಾದ್ ಗೆ ಸಾಂಬಾಜಿನಗರ ಎಂದು ಹೆಸರಿಡಲು ತೀರ್ಮಾನಿಸಲಾಗಿತ್ತು. ಆದರೆ, ಶಿಂಧೆ ಸರ್ಕಾರ ಇಂದು ಮತ್ತೆ ಛತ್ರಪತಿ ಎಂಬ ಹೆಸರನ್ನು ಅದರಲ್ಲಿ ಸೇರಿಸಿದೆ.

ಈ ನಗರಗಳಿಗೆ ಉದ್ಧವ್ ಠಾಕ್ರೆ ನೇತೃತ್ವದ ಸರ್ಕಾರ ಹೆಸರು ಮರು ನಾಮಕರಣ ಮಾಡಲು ತೆಗೆದುಕೊಂಡಿರುವ ತೀರ್ಮಾನ ಅಕ್ರಮವಾಗಿದೆ ಎಂದು ಜೂನ್ 30 ರಂದು ಏಕನಾಥ್ ಶಿಂಧೆ ಮತ್ತು ದೇವೇಂದ್ರ ಫಡ್ನವೀಸ್ ಅಧಿಕಾರ ವಹಿಸಿಕೊಂಡಾಗ ಹೇಳಿದ್ದರು. ಆದಾಗ್ಯೂ, ಈಗ ಮತ್ತೆ ಹೆಸರನ್ನು ಬದಲಾಯಿಸಲಾಗಿದೆ. ಪ್ರಸ್ತುತ ಏಕನಾಥ್ ಸಿಂಧೆ ಮತ್ತು ಫಡ್ನವೀಸ್ ಮಾತ್ರ ಸಂಪುಟದಲ್ಲಿದ್ದು, ಅದು ಇನ್ನೂ ವಿಸ್ತರಣೆಯಾಗಿಲ್ಲ.

ಸರ್ಕಾರದ ಸಾಲ ಸೌಲಭ್ಯ, ಸಹಾಯಧನದಿಂದ ಮಹಿಳೆಯರು ಉದ್ಯಮಿಗಳಾಗಿ ಸ್ವಾವಲಂಭಿಗಳಾಗಬೇಕು

ರುಡ್‌ಸೆಟ್ ಮಾಜಿ ನಿರ್ದೇಶಕ ಎಚ್.ಎಸ್. ಕೃಷ್ಣಮೂರ್ತಿ



ಮೈಸೂರು,ಜು.17(ಎಂಟಿವೈ)– ಮಹಿಳೆಯರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಮೂಲಕ ದೊರೆಯುವ ಸಾಲ–ಸೌಲಭ್ಯ, ಸಹಾಯಧನ ಪಡೆದು ಸ್ವಂತ ಉದ್ಯಮ ಆರಂಭಿಸಿ ಸ್ವಾವಲಂಭಿಗಳಾಗುವಂತೆ ರುಡ್‌ಸೆಟ್ ಮಾಜಿ ನಿರ್ದೇಶಕ ಎಚ್.ಎಸ್.ಕೃಷ್ಣಮೂರ್ತಿ ಸಲಹೆ ನೀಡಿದ್ದಾರೆ.

ಮೈಸೂರಿನ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಮಹಿಳಾ ಸಮನ್ವಯ ವತಿಯಿಂದ ಆಯೋಜಿಸಿದ್ದ 'ಸಬಲೆ' ಉದ್ಯಮಿಯಾಗು ಸ್ವಾವಲಂಬಿಯಾಗು ಕುರಿತ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಸ್ವಾವಲಂಭಿಗಳಾಗಿ ಉದ್ಯೋಗ ಆರಂಭಿಸುವುದಕ್ಕೆ ಸಾಕಷ್ಟು ಅವಕಾಶಗಳಿವೆ. ಉದ್ಯಮಶೀಲರಾಗುವ ಜೊತೆಗೆ ಉದ್ಯೋಗ ಕೊಡುವಂತಾಗಬೇಕು. ಇಂದು ಮಾಹಿತಿಯ ಕೊರತೆ ಇಲ್ಲ. ಪ್ರತಿನಿತ್ಯ ಪ್ರತಿಯೊಂದು ದಿನಪತ್ರಿಕೆಗಳಲ್ಲೂ ಉದ್ಯಮದ ಬಗ್ಗೆ ಮಾಹಿತಿ ಇರುತ್ತದೆ. ಸ್ವ ಇಚ್ಛೆಯಿಂದ ಉದ್ಯಮವನ್ನು ಬೆಳೆಸಬೇಕು. ಉದ್ಯೋಗ ಸ್ಥಾಪಿಸುವವರು ಕ್ರಿಯಾಶೀಲನಾಗಿರಬೇಕು. ತನ್ನ ಮತ್ತು ತನ್ನ ಪರಿಸರದಲ್ಲಿ ಇರುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಉದ್ಯಮ ಬೆಳೆಸಬೇಕು. ಉದ್ಯಮ ಆರಂಭಿಸುವವರಿಗೆ ಆತ್ಮವಿಶ್ವಾಸ ಇರಬೇಕು ಎಂದರು.

ಕಾಲಕ್ಕೆ ತಕ್ಕಂತೆ ಉದ್ಯಮಗಳು ಬದಲಾವಣೆಯ ರೂಪುಗೊಳ್ಳುತ್ತದೆ. ಅದೇ ರೀತಿ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳಿಂದಲೂ ಉದ್ಯಮದ ಏಳಿಗೆಗೆ ಬೇಕಾದ ತರಬೇತಿ ಪಡೆಯಬಹುದಾಗಿದೆ. ಧರ್ಮಸ್ಥಳದ ರುಡ್‌ಸೆಟ್ ಸಂಸ್ಥೆಯು ತರಬೇತಿ ನೀಡುತ್ತಾ ಬಂದಿದೆ. ಸರ್ಕಾರದ ಹಲವು ಇಲಾಖೆಗಳು ನೀಡುವ ಸಹಾಯಧನವನ್ನು ಮತ್ತು ಯೋಜನೆಗಳನ್ನು ಬಳಸಿಕೊಂಡು ಉದ್ಯಮ ಸ್ಥಾಪನೆ ಮಾಡಬೇಕು. ನಗರ ಪಾಲಿಕೆಯಲ್ಲಿ ಸ್ವಯಂ ಉದ್ಯೋಗಕ್ಕೆ ಎರಡು ಲಕ್ಷ ರೂ., ಮುದ್ರಾ ಯೋಜನೆಯಡಿ 1 ಕೋಟಿ ರೂ.ವರೆಗೂ ಸಾಲ ಸೌಲಭ್ಯ ದೊರೆಯುತ್ತದೆ. ಉದ್ಯೋಗಿನಿ ಯೋಜನೆಯಡಿ ಮಹಿಳೆಯರಿಗೆ ಸಾಕಷ್ಟು ಅನುಕೂಲ ಇದೆ. ಪ್ರಯತ್ನ ಮಾಡದೆ ಯಾವುದೇ ಕಾರ್ಯ ನೆರವೇರುವುದು ಇಲ್ಲ. ಮಾರುಕಟ್ಟೆ, ಮಾರುಕಟ್ಟೆ ಏಜೆನ್ಸಿ, ತೆರಿಗೆ, ವ್ಯವಹಾರ ಮಾಡುವುದು ಹೇಗೆ, ಗ್ರಾಹಕರನ್ನು ತಲುಪುವುದು ಹೇಗೆ ಎನ್ನುವ ಕುರಿತು ತರಬೇತಿ ಕೊಡಲಾಗುತ್ತದೆ. ಅದನ್ನು ಬಳಸಿಕೊಂಡು ಉದ್ಯಮ ಸ್ಥಾಪಿಸಿ ಅದರಲ್ಲಿ ಯಶಸ್ಸು ಕಾಣಬೇಕು ಎಂದು ಅಭಿಪ್ರಾಯಪಟ್ಟರು.

ಉದ್ಯೋಗ ಆರಂಭಿಸುವವರಲ್ಲಿ ಕೆಲವು ಗುಣಗಳಿರುತ್ತವೆ ಬೇರೆ ಕೆಲಸವನ್ನು ಅವಲಂಭಿಸಿ ಸಿಗುವ ಸ್ವಲ್ಪ ಬಿಡುವಿನ ವೇಳೆಯಲ್ಲಿ ಇನ್ಕಮ್ ಜನರೇಷನ್ ಆಕ್ಟಿವಿಟಿ ಮಾಡುವ ಒಂದು ಗುಣವನ್ನು ಕಾಣಬಹುದು. ಹೆಚ್ಚು ಸಮಯ ಬಿಡುವ ಉಳ್ಳವರು ಸೆಲ್ಫ್ ಎಂಪ್ಲಾಯ್‌ಮೆಂಟ್ ಆಕ್ಟಿವಿಟಿ(ಎಇಪಿ)ಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಇದರೊಂದಿಗೆ ಉದ್ಯಮಶೀಲರಾಗಬೇಕು ಎಂದು ಬಯಸುವ ಮತ್ತೊಂದು ವರ್ಗವನ್ನು ಕಾಣಬಹುದು. ಅದರಲ್ಲಿ ನೀವೊಬ್ಬರೇ ಕೆಲಸ ಮಾಡೋದಲ್ಲ. ಇನ್ನಷ್ಟು ಜನರಿಗೆ ಕೆಲಸ ಕೊಡಬೇಕು. ಯಾರು ಬೇಕಾದರೂ, ಏನ್ ಬೇಕಾದರೂ ಮಾಡಬಹುದು. ಅದಕ್ಕೆ ಸಾಕಷ್ಟು ಉದಾಹರಣೆಗಳಿವೆ ಎಂದು ಪ್ರೇರಣೆ ನೀಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಡಿಆರ್‌ಸಿ ಸಿನಿಮಾಸ್ ಮಾಲೀಕರಾದ ವೈಶಾಲಿ ಹನುಮಂತ್ ಉದ್ಘಾಟಿಸಿ ಮಾತನಾಡಿ, ಸ್ವ–ಉದ್ಯೋಗ ಆರಂಭಿಸುವ ಮಹಿಳೆಯರಲ್ಲಿ ನಿಖರ ಗುರಿ ಇರಬೇಕು. ಉದ್ಯೋಗದಲ್ಲಿ ಯಶಸ್ಸು ಗಳಿಸುವ ಹಂಬಲ ಇರಬೇಕು. ಪ್ರಮುಖವಾಗಿ ತಾಳ್ಮೆ ಇರಬೇಕಾದ ಅವಶ್ಯಕತೆಯಿದೆ. ಉದ್ಯಮಶೀಲತೆ ಗುಣ ಹೊಂದಿರಬೇಕು. ಉದ್ಯಮದಲ್ಲಿ ಪ್ಲಾಸ್ಟಿಕ್ ಬಳಕೆ ನಿಯಂತ್ರಿಸಿ, ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮಹಿಳಾ ಸಮನ್ವಯ ಸಂಸ್ಥೆಯ ಸಂಚಾಲಕಿ ಮಮತಾ ಕಿಣಿ, ಪದಾಧಿಕಾರಿಗಳು ಸುಧಾ ಫಣೀಶ್, ಲಾವಣ್ಯ ಅಂಬಿಕಾ, ಭೂಮಿಕಾ, ಪುಷ್ಪಾ, ಅರ್ಪಿತಾ ಪ್ರತಾಪ ಸಿಂಹ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 18 ಜುಲೈ 2022

ರೈತರಿಗೆ ಸೌಲಭ್ಯ ಕಲ್ಪಿಸುವುದೇ ಸರ್ಕಾರದ ಉದ್ದೇಶ

'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮದಲ್ಲಿ ಶಾಸಕ ಕೆ.ಮಹದೇವ್

ಪಿರಿಯಾಪಟ್ಟಣ, ಜು.17– ರೈತರ ಮನೆ ಬಾಗಿಲಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವುದೇ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮದ ಮೂಲ ಉದ್ದೇಶ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ತಾಲೂಕಿನ ಆಲನಹಳ್ಳಿಯಲ್ಲಿ ಆಯೋಜಿಸಿದ್ದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಮಾಸಾಶನ ಆದೇಶ ಪತ್ರ ವಿತರಿಸಿ ಮಾತನಾಡಿದ ಅವರು, ಈ ಹಿಂದೆ ಮಾಸಾಶನ ಪಡೆಯಲು ಮಧ್ಯವರ್ತಿಗಳಿಗೆ ಹಣ ನೀಡಿ ವೃದ್ಧರು, ವಿಧವೆಯರು ಹಣ ಕಳೆದುಕೊಳ್ಳುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದ್ದು ಪಿಂಚಣಿ ಯೋಜನೆಯ ಫಲಾನುಭವಿಗಳಿಗೆ ಮನೆ ಬಾಗಿಲಿಗೆ ಕಾರ್ಯಾದೇಶ ಪತ್ರ ತಲುಪಿಸಲಾಗುತ್ತಿದೆ. ನಾನು ಮುಂದಿನ ಅವಧಿಯಲ್ಲಿ ಶಾಸಕನಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿದಲ್ಲಿ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಅಭಿವೃದ್ಧಿಗೆ ಬದ್ಧನಾಗಿದ್ದೇನೆ ಎಂದರು.



ತಾಲೂಕಿನಲ್ಲಿ ಪಶು ಆಹಾರ ತಯಾರಿಕಾ ಘಟಕ ತೆರೆಯಲು ಸರ್ಕಾರದ ಅನುಮತಿ ದೊರೆತಿದ್ದು, ಇದರಿಂದ ತಾಲೂಕಿನ 1000ಕ್ಕೂ ಹೆಚ್ಚು ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಲಿದೆ. ಆಲನಹಳ್ಳಿ ಗ್ರಾಮದ ಅಭಿವೃದ್ಧಿಗೆ 70 ಲಕ್ಷ ಅನುದಾನ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಅಗತ್ಯ ಬಿದ್ದರೆ ಇನ್ನೂ ಹೆಚ್ಚಿನ ಅನುದಾನ ನೀಡುವ ಭರವಸೆ ನೀಡಿದರು.

ತಹಸೀಲ್ದಾರ್ ಕೆ.ಚಂದ್ರಮೌಳಿ ಮಾತನಾಡಿ, ಅಕ್ರಮ ಸಕ್ರಮ ಯೋಜನೆಯಲ್ಲಿ ಭೂಮಿ ಮಂಜೂರಾತಿಗೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಿಸಲಾಗಿದೆ. ಪೌತಿ ಖಾತೆ, ಪಹಣಿ ತಿದ್ದುಪಡಿ ಸೇರಿದಂತೆ ಇನ್ನಿತರ ಕಂದಾಯ ಇಲಾಖೆ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಮೌಖಿಕ ಅಥವಾ ಲಿಖಿತವಾಗಿ ದೂರು ನೀಡಿ ಪರಿಹಾರ ಕಂಡುಕೊಳ್ಳುವಂತೆ ತಿಳಿಸಿದ ಅವರು, ತಾಲೂಕಿನಲ್ಲಿ ರಸ್ತೆ ಒತ್ತುವರಿ ಪ್ರಕರಣ ಕಂಡು ಬಂದಿದ್ದು, ಒತ್ತುವರಿ ತೆರವು ಕಾರ್ಯ ಪ್ರಗತಿಯಲ್ಲಿದೆ ಎಂದರು.

ತಾಪಂ ಇಓ ಸಿ.ಆರ್.ಕೃಷ್ಣಕುಮಾರ್ ಮಾತನಾಡಿ, ತಾಲೂಕಿನ ಎಲ್ಲಾ ಇಲಾಖೆಗಳು ಶೀಘ್ರ ಕ್ರಿಯಾ ಯೋಜನೆ ತಯಾರಿಸಬೇಕು. ಯೋಜನೆಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರ ಮನೆ ಬಾಗಿಲಿಗೆ ತೆರಳಿ ಸೌಲಭ್ಯ ತಲುಪಿಸಬೇಕು. ಪ್ರತಿ ಗ್ರಾಮದಲ್ಲಿ 40 ಕುಟುಂಬಗಳಿಗೆ ಎನ್‌ಆರ್‌ಇಜಿ ಯೋಜನೆಯಲ್ಲಿ ಫಲಾನುಭವಿಗಳಿಗೆ ಸವಲತ್ತು ಕಲ್ಪಿಸಿದರೆ ಅವರು ಆರ್ಥಿಕಾಭಿವೃದ್ಧಿ ಹೊಂದಲು ಸಾಧ್ಯ ಎಂದರು.

ಈ ವೇಳೆ ಮೈಮುಲ್ ನಿರ್ದೇಶಕ ಹೆಚ್.ಡಿ.ರಾಜೇಂದ್ರ, ತಾಪಂ ಮಾಜಿ ಸದಸ್ಯ ಎ.ಟಿ.ರಂಗಸ್ವಾಮಿ ಮಾತನಾಡಿದರು. ತಾಪಂ ಮಾಜಿ ಸದಸ್ಯ ಎಸ್.ರಾಮು, ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಗ್ರಾಪಂ ಅಧ್ಯಕ್ಷೆ ಸುಶೀಲ, ಉಪಾಧ್ಯಕ್ಷ ಸ್ವಾಮಿ, ಕೃಷಿ ಇಲಾಖೆ ಎಡಿಎ ಪ್ರಸಾದ್, ಭೂಮಾಪನ ಇಲಾಖೆ ಸಹಾಯಕ ನಿರ್ದೇಶಕ ಚಿಕ್ಕಣ್ಣ, ಪಶುಪಾಲನೆ ಇಲಾಖೆ ಸಹಾಯಕ ನಿರ್ದೇಶಕ ಡಾ. ಸೋಮಯ್ಯ, ಟಿಹೆಚ್‌ಓ ಡಾ.ಶರತ್ ಬಾಬು, ಸಿಡಿಪಿಓ ಮಮತ, ಎಇಇ ಪ್ರಭು, ಟಿಎಪಿಸಿಎಂಎಸ್ ಉಪಾಧ್ಯಕ್ಷ ಜಲೇಂದ್ರ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಮಳೆ: ಹುಣಸೆಗಾಲದಲ್ಲಿ 2 ಮನೆಗೆ ಹಾನಿ



ಹನಗೋಡು, ಜು.17– ಸತತ ಮಳೆಗೆ ಹುಣಸೂರು ತಾಲೂಕಿನ ಹುಣಸೆಗಾಲ ಗ್ರಾಮದ 2 ಮನೆಗಳು ಹಾನಿಗೊಳಗಾಗಿದೆ.

ಗ್ರಾಮದ ಜಯಮ್ಮ ಎಂಬುವರ ಮನೆ ಮೇಲ್ಛಾವಣಿ ಸಹಿತ ಗೋಡೆ ಕುಸಿದು ಬಿದ್ದಿದ್ದರೇ, ಜಯಣ್ಣ ಎಂಬುವರ ಮನೆ ಗೋಡೆ ಕುಸಿದಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಆದರೆ ಮನೆಯಲ್ಲಿದ್ದ ದವಸ ಧಾನ್ಯ ಸೇರಿದಂತೆ ದಿನಬಳಕೆಯ ವಸ್ತುಗಳು ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಡಾ.ಅಶೋಕ್ ಪರಿಶೀಲನೆ ನಡೆಸಿದ್ದು, ಸರ್ಕಾರದಿಂದ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ಕೋಟೆಯಲ್ಲಿ ಸಮಗ್ರ ಕೃಷಿ ಅಭಿಯಾನಕ್ಕೆ ಚಾಲನೆ

ಹೆಚ್.ಡಿ.ಕೋಟೆ, ಜು.17– ತಾಲೂಕಿನಲ್ಲಿ ಭತ್ತ ಬಿತ್ತನೆ ಮಾಡಲು 850 ಕ್ವಿಂಟಾಲ್ ಬಿತ್ತನೆ ಬೀಜ ಬೇಕಿದ್ದು, ಈಗಾಗಲೇ 450 ಕ್ವಿಂಟಾಲ್ ಬಿತ್ತನೆ ಬೀಜ ಬಂದಿರುವುದರಿಂದ ಯಾವುದೇ ತೊಂದರೆ ಇಲ್ಲ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಆವರಣದಲ್ಲಿ ಕೃಷಿ ಇಲಾಖೆ ವತಿಯಿಂದ ಕೃಷಿ ಇಲಾಖೆ ನಡಿಗೆ ರೈತರ ಮನೆ ಬಾಗಿಲಿಗೆ ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಸಮಗ್ರ ಕೃಷಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ತಾಲೂಕಿನಲ್ಲಿ ಭತ್ತದ ನಾಟಿಗೆ 850 ಕ್ವಿಂಟಾಲ್ ಬಿತ್ತನೆ ಬೀಜ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈ ಪೈಕಿ ಈಗಾಗಲೇ 450 ಕ್ವಿಂಟಾಲ್ ಬಿತ್ತನೆ ಬೀಜ ಬಂದಿದೆ ಮುಂದಿನ ದಿನಗಳಲ್ಲಿ ಅವಶ್ಯಕತೆ ಇರುವ ಬಿತ್ತನೆ ಬೀಜವನ್ನು ಸರ್ಕಾರದಿಂದ ಪಡೆದು ರೈತರಿಗೆ ಹಂಚಿಕೆ ಮಾಡಲಾಗುವುದು ಎಂದು ಭರವಸೆ ನೀಡಿದ ಶಾಸಕರು,



ರೈತರು ಸೋಮವಾರದಿಂದ ಭತ್ತದ ಬಿತ್ತನೆ ಬೀಜ ಪಡೆಯಬಹುದು ಎಂದರು.

ರೈತರಿಗೆ ಕೃಷಿ ಇಲಾಖೆಯಿಂದ ದೊರೆಯುವ ಟ್ರಾಕ್ಟರ್, ಟ್ರೈಲರ್, ಬಿತ್ತನೆ ಬೀಜ ಸೇರಿದಂತೆ ಇನ್ನಿತರ ಸೌಲಭ್ಯ ತಲುಪಿಸಲು ಅಧಿಕಾರಿಗಳು ಶ್ರಮಿಸಬೇಕು. ಬಸವನ ಹಾಡಿಯ ಆದಿವಾಸಿ ಸಂಸ್ಥೆಗೆ ಕೃಷಿ ಇಲಾಖೆಯಿಂದ ಉಚಿತವಾಗಿ ಟ್ರಾಕ್ಟರ್ ನೀಡಲಾಗಿದ್ದು, ಅದು ಹಾಡಿ ಜನರಿಗೆ ಸದುಪಯೋಗವಾಗಬೇಕು ಎಂದರು. ರೈತರ ಅನುಕೂಲಕ್ಕಾಗಿ ಸಮಗ್ರ ಕೃಷಿ ಅಭಿಯಾನಕ್ಕೆ ಚಾಲನೆ ನೀಡಲಾಗಿದ್ದು, ರೈತರು ಇದರ ಸದುಪಯೋಗ ಪಡೆಯಬೇಕು ಎಂದರು.

ಈ ವೇಳೆ ಸಹಾಯಕ ಕೃಷಿ ನಿರ್ದೇಶಕ ಎಸ್.ರಂಗಸ್ವಾಮಿ, ಬಿ.ಎನ್.ಧನಂಜಯ, ರೈತ ಸಂಘದ ಅಧ್ಯಕ್ಷ ಮಹದೇವನಾಯಕ, ಜಕ್ಕಹಳ್ಳಿ ಮಲ್ಲೇಶ, ಮನುಗನಹಳ್ಳಿ ಗುರುಸ್ವಾಮಿ, ಸಿದ್ದರಾಮು, ದೇವಮ್ಮ ಇದ್ದರು.

ದೇವಾಲಯದ ಬಾಗಿಲು ಮುರಿದು ಚಿನ್ನಾಭರಣ ಕಳವು

ತಿ.ನರಸೀಪುರ/ಮೂಗೂರು, ಜು.17– ದೇವಾಲಯದ ಬಾಗಿಲು ಮುರಿದು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ಹುಂಡಿ ಕಳವು ಮಾಡಿರುವ ಘಟನೆ ತಾಲೂಕಿನ ಮೂಗೂರು ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.



ಗ್ರಾಮದ ಐತಿಹಾಸಿಕ, ಪುರಾಣ ಪ್ರಸಿದ್ಧ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲೇ ಕಳ್ಳತನ ನಡೆದಿರುವುದು. ದೇವಾಲಯದ ಹಿಂಬದಿ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ದೇವಿಯ ಮೈ ಮೇಲಿದ್ದ ಲಕ್ಷಾಂತರ ರೂ. ಬೆಲೆ ಬಾಳುವ ಚಿನ್ನಾಭರಣ, ಹುಂಡಿಯಲ್ಲಿದ್ದ ಹಣ ಕದ್ದೊಯ್ದಿದ್ದಾರೆ. ಭಾನುವಾರ ಬೆಳಗ್ಗೆ ದೇವಾಲಯಕ್ಕೆ ಹೂ ಕೊಡುವ ಮಹಿಳೆ ದೇವಾಲಯದ ಬಾಗಿಲು ತೆರೆದಿರುವುದನ್ನು ಕಂಡು ಅರ್ಚಕ ಹರೀಶ್ ಅವರಿಗೆ ವಿಷಯ ಮುಟ್ಟಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್, ನಂಜನಗೂಡು ಡಿವೈಎಸ್ಪಿ ಗೋವಿಂದರಾಜು, ತಿ.ನರಸೀಪುರ ಠಾಣೆಯ ಕೃಷ್ಣಪ್ಪ, ತಿರುಮಲ್ಲೇಶ್, ಶಶಿಕಾಂತ್, ಮಹದೇವು ಹಾಗೂ ಸಿಬ್ಬಂದಿ ಶ್ವಾನದಳ ಮತ್ತು ಬೆರಳಚ್ಚು ತಂಡದೊಂದಿಗೆ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಈ ಸಂಬಂಧ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಲ ತಿಂಗಳಿಂದ ಸಿಸಿ ಕ್ಯಾಮರಾ ಕೆಟ್ಟಿರುವುದನ್ನು ಗಮನಿಸಿ ದುಷ್ಕರ್ಮಿಗಳು ಕಳ್ಳತನಕ್ಕೆ ಸಂಚು ರೂಪಿಸಿದ್ದಾರೆ ಎಂದು ಶಂಕಿಸಲಾಗಿದೆ.

ಜಿಲ್ಲಾ ಎಸ್ಪಿ ಚೇತನ್ ಮಾತನಾಡಿ, ಶ್ವಾನದಳ, ಬೆರಳಚ್ಚು ತಜ್ಞರು ಪರಿಶೀಲನೆ ನಡೆಸಿದ್ದಾರೆ. ದೇವಾಲಯದಲ್ಲಿ ಕಳ್ಳತನ ನಡೆಸಿರುವ ಖದೀಮರ ಬಂಧನಕ್ಕೆ ವಿಶೇಷ ತಂಡವನ್ನು ರಚಿಸಲಾಗುವುದು. ಮುಜರಾಯಿ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿ, ನಿರ್ಲಕ್ಷ್ಯದಿಂದಾಗಿ ಕಳ್ಳತನಕ್ಕೆ ದಾರಿಯಾಗಿದೆ ಎಂದರು.

ಹಾವುಗಳ ಉಳಿವಿಗಾಗಿ ಪ್ರತಿಯೊಬ್ಬರೂ ಶ್ರಮಿಸಿ

ಸರಗೂರು, ಜು.17– ಇತ್ತೀಚಿನ ದಿನಗಳಲ್ಲಿ ಹಾವುಗಳ ಸಂತತಿ ಕ್ಷೀಣಿಸುತ್ತಿದ್ದು, ಅವುಗಳ ಉಳಿವಿಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಸ್ನೇಕ್ ಪ್ರಶಾಂತ್ ಕೋಟೆ ತಿಳಿಸಿದರು.



ಪಟ್ಟಣದ ನಿವಾಸಿ ಬಿ.ಸಿ.ಎಂ.ಸ್ವಾಮಿ ಅವರ ಮನೆ ಆವರಣದಲ್ಲಿ ಕಾಣಿಸಿಕೊಂಡ ಗೋಧಿ ನಾಗರಹಾವನ್ನು ರಕ್ಷಿಸಿ ಮಾತನಾಡಿದ ಅವರು, ಹಾವು ಕಾಣಿಸಿಕೊಂಡರೆ ಗಾಬರಿಯಾಗಿ ಅವುಗಳನ್ನು ಸಾಯಿಸುವ ಬದಲು ಅವುಗಳ ರಕ್ಷಣೆಗೆ ಮುಂದಾಗಬೇಕು. ಮಳೆಗಾಲದಲ್ಲಿ ಎಲ್ಲಾ ಹಾವುಗಳು ಹೊರಗೆ ಬರುವುದಿಲ್ಲ. ಆದರೆ ನಾಗರಹಾವು ಮಾತ್ರ ಆಹಾರ ಅರಸಿ ಬರುತ್ತದೆ. ಹಾವುಗಳು ಮನುಷ್ಯನಿಗೆ ತೊಂದರೆ ನೀಡುವುದಿಲ್ಲ. ಅವುಗಳಿಗೆ ತೊಂದರೆಯಾದರೆ ಮಾತ್ರ ಕಚ್ಚಲು ಮುಂದಾಗುತ್ತವೆ. ಈಗಾಗಲೇ ತಾಲೂಕಿನಲ್ಲಿ ಹೆಬ್ಬಾವು, ನಾಗರಹಾವು ಸೇರಿದಂತೆ ವಿವಿಧ ಜಾತಿಯ 600ಕ್ಕೂ ಹೆಚ್ಚು ಹಾವುಗಳನ್ನು ಹಿಡಿದು ಕಾಡಿಗೆ ಬಿಡಲಾಗಿದೆ. ಎಲ್ಲಾದರೂ ಹಾವುಗಳನ್ನು ಕಂಡರೆ ನನಗೆ ಕರೆ ಮಾಡಿ ಬಂದು ಹಾವು ಹಿಡಿದು ಕಾಡಿಗೆ ಬಿಡುವುದಾಗಿ ತಿಳಿಸಿದರು.

ಪ್ರತಿಯೊಬ್ಬರಿಗೂ ಸೇವಾ ಮನೋಭಾವ ಅಗತ್ಯ



ಹುಣಸೂರು, ಜು.17– ಸಮಾಜದ ಪ್ರತಿಯೊಬ್ಬರಿಗೂ ಸೇವಾ ಮನೋಭಾವ ಅಗತ್ಯವಾಗಿದ್ದು, ನಿಸ್ವಾರ್ಥ ಸೇವೆ ಬಯಸಿ ಬರುವವರನ್ನು ರೋಟರಿ ಸಂಸ್ಥೆ ಸದಾ ಸ್ವಾಗತಿಸಲಿದೆ ಎಂದು ಜಿಲ್ಲಾ ಗೌರ್ನರ್ ಎಂ.ಎಂ.ಸುರೇಶ್ ಚಂಗಪ್ಪ ಹೇಳಿದರು.

ನಗರದ 3181 ರೋಟರಿ ಸಂಸ್ಥೆ 57ನೇ ಅಧ್ಯಕ್ಷರ ಪದಗ್ರಹಣ ನೆರವೇರಿಸಿ ಮಾತನಾಡಿದ ಅವರು, ರೋಟರಿ ಸಂಸ್ಥೆ ವಿಶ್ವದಾದ್ಯಂತ ಎಲ್ಲಾ ವಿಭಾಗಗಳಲ್ಲಿ ಸಾಮಾಜಿಕ ಸೇವೆಯಲ್ಲಿ ತೊಡಗಿರುವುದನ್ನು ಮನಗೊಂಡ ಜನತೆ ಸಂಸ್ಥೆಯತ್ತ ಒಲವು ತೋರುತ್ತಿದ್ದಾರೆ. ನಿಸ್ವಾರ್ಥ ಸೇವೆ ಬಯಸಿ ಬರುವವರನ್ನು ರೋಟರಿ ಸಂಸ್ಥೆ ಸದಾ ಸ್ವಾಗತಿಸುತ್ತದೆ. ಹೀಗಾಗಿ ಸದಸ್ಯರ ಸಂಖ್ಯೆಯೂ ಹೆಚ್ಚುತ್ತಿದ್ದು, ಸಮಾಜದಲ್ಲಿ ನೊಂದವರಿಗೆ, ಸೇವೆ ದೊರೆಯಲಿದೆ ಎಂದರು.

ಅಸಿಸ್ಟೆಂಟ್ ಗೌರ್ನರ್ ಅರುಣ್ ಬಿ.ನರಗುಂದ ಮಾತನಾಡಿ, ಹುಣಸೂರು ರೋಟರಿ ಸಂಸ್ಥೆಗೆ 57 ವರ್ಷಗಳ ಇತಿಹಾಸವಿದ್ದು, ಕಳೆದ ಬಾರಿ ಗೋಲ್ಡ್ ಅವಾರ್ಡ್ ಪಡೆದ ಹಾಗೇ 2022–23ಕ್ಕೆ ಪ್ಲಾಟಿನಂ ಪ್ಲಸ್ ಅವಾರ್ಡ್ ಪಡೆದು ತಾಲೂಕಿಗೆ ಹಿರಿಮೆ ತನ್ನಿ ಎಂದು ಸಂಸ್ಥೆ ಸದಸ್ಯರಿಗೆ ಶುಭ ಹಾರೈಸಿದರು. ಅಧಿಕಾರ ಸ್ವೀಕರಿಸಿದ ನೂತನ ರೋಟರಿ ಅಧ್ಯಕ್ಷ ಪಿ.ಪಾಂಡುಕುಮಾರ್ ಮಾತನಾಡಿದರು.

ರೋಟರಿ ಕಾರ್ಯದರ್ಶಿ ಚನ್ನಕೇಶವ, ಜೋನಲ್ ಚಂದ್ರು, ಸದಸ್ಯರಾದ, ಡಾ.ರವಿಕುಮಾರ್, ಆನಂದ್, ಧರ್ಮಾಪುರ ನಾರಾಯಣ್, ಜಿ.ವಿ.ಶ್ರೀನಾಥ್ ಡಾ.ಸರೋಜಿನಿ ವಿಕ್ರಂ, ಮಂಜಣ್ಣ, ಗಿರೀಶ್, ಸಂಪತ್ ಸೇರಿದಂತೆ ಇತರರು ಹಾಜರಿದ್ದರು.

ನಂ.ಗೂಡಲ್ಲಿ ಹಡಪದ ಅಪ್ಪಣ್ಣ ಜಯಂತಿ ಆಚರಣೆ



ನಂಜನಗೂಡು, ಜು.17– ನಗರದ 5ನೇ ವಾರ್ಡ್‌ನಲ್ಲಿ ಹಡಪದ ಅಪ್ಪಣ್ಣ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಬಿ.ಹರ್ಷವರ್ಧನ್, 12ನೇ ಶತಮಾನದಲ್ಲಿ ಅಪ್ಪಣ್ಣನವರು ಬಸವಣ್ಣನವರ ಕಾರ್ಯದರ್ಶಿಯಾಗಿ ಅನುಭವ ಮಂಟಪದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸವಿತಾ ಕೇಶಾಲಂಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪುಟ್ಟರಾಜು ಮಾತನಾಡಿ, ನಮ್ಮ ಸಮಾಜ ಹಿಂದುಳಿದಿದ್ದು, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದರೆ ಸಮಾಜವನ್ನು ಮುಂದೆ ತರಬಹುದು ಎಂದರು.

ಕಾರ್ಯಕ್ರಮದಲ್ಲಿ ನಗರಸಭಾಧ್ಯಕ್ಷ ಮಹದೇವಸ್ವಾಮಿ, ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಬಸವಣ್ಣ, ಬಿಜೆಪಿ ತಾಲೂಕು ಅಧ್ಯಕ್ಷ ಮಹೇಶ್, ನಗರಸಭೆ ಸದಸ್ಯರು, ಸವಿತಾ ಕೇಶಲಂಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಉಪಾಧ್ಯಕ್ಷ ಕೆಂಪರಾಜು, ಕಾರ್ಯದರ್ಶಿ ಶ್ರೀಕಂಠಪ್ರಸಾದ್, ಖಜಾಂಜಿ ಮಹೇಶ್, ನಿರ್ದೇಶಕರಾದ ಎಂ.ನಾಗೇಂದ್ರ, ಬಸವಣ್ಣ, ರವಿ, ರವಿ, ಆರ್.ಚೇತನ್, ಸಿದ್ದರಾಜು ಹಾಗೂ ಸದಸ್ಯರಿದ್ದರು.

ಆತ್ಮಹತ್ಯೆಗೆ ಯತ್ನಿಸಿದ್ದ ಗೃಹಿಣಿ ಸಾವು

ಹೆಚ್.ಡಿ.ಕೋಟೆ, ಜು.17– ವಿಷಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ಗೃಹಿಣಿಯೊಬ್ಬರು ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.



ತಾಲೂಕಿನ ಕೇರಳ ಗಡಿ ಭಾಗದ ಮಚೂರು ಗ್ರಾಮದ ನಿವಾಸಿ ಆನಂದ್ ಅವರ ಪತ್ನಿ ಜ್ಯೋತಿ(22) ಸಾವನ್ನಪ್ಪಿದವರು. ಈಕೆ ಕಳೆದ 10 ದಿನಗಳ ಹಿಂದೆ ವಿಷಸೇವನೆ ಮಾಡಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರನ್ನು ಕೇರಳದ ಕ್ಯಾಲಿಕಟ್‌ನ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಜ್ಯೋತಿ ಶನಿವಾರ ಸಾವನ್ನಪ್ಪಿದ್ದಾರೆ. ಗ್ರಾಮಕ್ಕೆ ಡಿವೈಎಸ್‌ಪಿ ರವಿಪ್ರಸಾದ್, ಸಿಪಿಐ ಆನಂದ್, ಎಸ್‌ಐ ಜಯಪ್ರಕಾಶ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪತಿ ಆನಂದ, ತಾಯಿ ರತ್ನಮ್ಮ, ಮೈದುನ ಲೋಕೇಶ್ ಅವರ ಮೇಲೆ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಲಾಗಿದ್ದು, ಪತಿ ಆನಂದ್‌ನನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ.

ತಿ.ನರಸೀಪುರದಲ್ಲಿ 'ಬುದ್ಧ ಭಾರತ ಕಾವ್ಯ' ಪುಸ್ತಕ ಬಿಡುಗಡೆ



ತಿ.ನರಸೀಪುರ, ಜು.17– ಮಹಾಭಾರತ ಕಾವ್ಯವನ್ನು ಬೌದ್ಧ ಧರ್ಮದ ನೆಲೆಗಟ್ಟಿನಲ್ಲಿ ಶಾಂತಿ ಪ್ರತಿರೂಪವಾಗಿ ಬಿಂಬಿಸಿರುವ ನಾಗರಾಜ್ ತಲಕಾಡು ವಿರಚಿತ 'ಬುದ್ಧ ಭಾರತ ಕಾವ್ಯ' ಪುಸ್ತಕ ಬಿಡುಗಡೆ ಕಾರ್ಯಕ್ರಮ ಪಟ್ಟಣದ ನಳಂದ ಬುದ್ಧ ವಿಹಾರದಲ್ಲಿ ನಡೆಯಿತು.

ಬುದ್ಧ ಧಮ್ಮ ಚಕ್ಕ ಪವತ್ತನ ಪೌರ್ಣಮಿ ಅಂಗವಾಗಿ ನಡೆದ ಸರಳ ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಬಂತೇಜಿ ಭೋದಿರತ್ನ, ಮಹಾಭಾರತ ಕಾವ್ಯವನ್ನು ಬೌದ್ಧ ಧರ್ಮದ ಸಾರವಾದ ಅಹಿಂಸೆ ಮತ್ತು ಶಾಂತಿ ಚೌಕಟ್ಟಿನಲ್ಲಿ ರಚಿಸಿರುವುದು ವಿನೂತನ ಪ್ರಯತ್ನ. ಕಾವ್ಯದ ತುಂಬಾ ಶಾಂತಿ ಮತ್ತು ಅಹಿಂಸೆ ಮಡುಗಟ್ಟಿದೆ. ಸಮಾಜದಲ್ಲಿರುವ ಮೇಲು–ಕೀಳು ಭಾವನೆಗಳು ಅಳಿದು ಸಮಸಮಾಜ ನಿರ್ಮಾಣ ಆಗಬೇಕು ಎಂಬುದು ಕವಿಯ ಆಶಯವಾಗಿದೆ ಎಂದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಸ್ತ್ರಚಿಕಿತ್ಸಾ ತಜ್ಞ ವೈದ್ಯ ಡಾ.ರೇವಣ್ಣ, ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಬಸವ, ಬುದ್ಧ ಮತ್ತು ಅಂಬೇಡ್ಕರ್ ತತ್ವಗಳು ಈ ಕಾವ್ಯದಲ್ಲಿ ಪ್ರತಿಫಲಿಸುತ್ತದೆ. ಮಹಾಭಾರತ ಕಾವ್ಯ ಆಧರಿಸಿ ಬರೆದಿರುವ ಈ ಪುಸ್ತಕದಲ್ಲಿ ಶಾಂತಿ ಸ್ಥಾಪನೆಗೆ ಸಮಾಜ ಪರಿವರ್ತನೆ ಮಾಡ ಹೊರಟಿರುವುದು ಅನನ್ಯ. ಮನುಷ್ಯ ಸಮಾನತೆ ಅಳವಡಿಸಿಕೊಂಡು ಮೇಲು–ಕೀಳು ಭಾವನೆ ತ್ಯಜಿಸಬೇಕು ಎಂದರು.

ಕಾವ್ಯ ವಾಚಿಸಿದ ಪ್ರಾಧ್ಯಾಪಕ ಡಾ.ಮಹದೇವ ಪ್ರಭು, ಪಂಪ, ರನ್ನ ಮತ್ತು ಕುಮಾರವ್ಯಾಸರು ಮಹಾಭಾರತವನ್ನು ಜೈನ ಧರ್ಮದ ನೆಲೆಗಟ್ಟಿನಲ್ಲಿ ರೂಪಿಸಿದ್ದರು. ಈ ಮಹಾನ್ ಕವಿಗಳ ಕಥನಗಳಲ್ಲಿ ಭೀಮ, ಅರ್ಜುನ ಮತ್ತು ದುರ್ಯೋಧನರನ್ನು ನಾಯಕರಾಗಿ ಬಿಂಬಿಸಲಾಗಿದೆ. ಆದರೆ, ಬುದ್ಧ ಭಾರತ ಕಾವ್ಯದಲ್ಲಿ ಯಾವೊಬ್ಬ ವ್ಯಕ್ತಿಗೂ ನಾಯಕತ್ವ ನೀಡದೆ ಅಹಿಂಸೆ ಮತ್ತು ಶಾಂತಿಗೆ ಹೆಚ್ಚು ಪ್ರಾಧಾನ್ಯತೆ ನೀಡಲಾಗಿದೆ ಎಂದರು.

ಕಾವ್ಯದ ಕರ್ತೃ ನಾಗರಾಜ್ ತಲಕಾಡು ಕಾವ್ಯ ಬಿಡುಗಡೆಗೆ ಸಹಕರಿಸಿದ ಸರ್ವರಿಗೂ ವಂದನೆ ಅರ್ಪಿಸಿದರು. ಕಾರ್ಯಕ್ರಮದಲ್ಲಿ ಕರೋಹಟ್ಟಿ ಪ್ರಭುಸ್ವಾಮಿ, ಬಿಎಸ್ಪಿ ಜಿಲ್ಲಾ ಅಧ್ಯಕ್ಷ ಪುಟ್ಟಸ್ವಾಮಿ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಚನ್ನಬಸವಣ್ಣ, ಡಾ.ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಪಿಕಾರ್ಡ್ ನಿರ್ದೇಶಕ ಲಿಂಗಪ್ಪಾಜಿ, ಪುರಸಭಾ ಸದಸ್ಯ ಪ್ರಕಾಶ್, ಹೇಮಂತ್ ಕುಮಾರ್, ಗಂಗಾಧರ್, ಪ್ರಾಧ್ಯಾಪಕ ನಂಜುಂಡಯ್ಯ, ಶಿವಕುಮಾರ್, ಮಹೇಶ್, ಶಿವಪ್ರಕಾಶ್ ಇತರರಿದ್ದರು.



ಹುಣಸೂರು ತಾಲೂಕಿನ ತಮ್ಮಡಹಳ್ಳಿಯಲ್ಲಿ ಜಮೀನು ವಿಚಾರಕ್ಕೆ ಹಲ್ಲೆಗೊಳಗಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಾವಿತ್ರಮ್ಮ ಅವರ ಆರೋಗ್ಯ ವಿಚಾರಿಸಿದ ತಾಲೂಕು ನಾಯಕರ ಸಂಘದ ಅಧ್ಯಕ್ಷ ಅಣ್ಣಯ್ಯ ಧೈರ್ಯ ತುಂಬಿದರು. ಈ ವೇಳೆ ಸಂಘದ ಕಾರ್ಯದರ್ಶಿ ರವಿ, ಖಜಾಂಚಿ ಗೋವಿಂದನಾಯಕ, ಮಾಜಿ ಅಧ್ಯಕ್ಷ ಶಿವಣ್ಣ, ಶ್ರೀನಿವಾಸ, ಚಿಕ್ಕಣ್ಣ, ಸ್ವಾಮಿನಾಯಕ, ಬಸವರಾಜು ಇದ್ದರು.



ಗುರು ಪೂರ್ಣಿಮೆ ಹಿನ್ನೆಲೆಯಲ್ಲಿ ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆ ವೈದ್ಯ ಡಾ.ರೇವಣ್ಣ ಅವರನ್ನು ಮೈಸೂರು ಜಿಲ್ಲಾ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದಿಂದ ಸನ್ಮಾನಿಸಲಾಯಿತು. ಈ ವೇಳೆ ಒಕ್ಕೂಟದ ಅಧ್ಯಕ್ಷ ತಾಯೂರು ಪ್ರಕಾಶ್, ಮೇಗಡಹಳ್ಳಿ ಗ್ರಾಪಂ ಸದಸ್ಯ ಸಿದ್ದು, ಚೆಸ್ಕಾಂ ಇಂಜಿನಿಯರ್ ವಿಜಯಕುಮಾರ್, ನಾಗರಾಜು, ನಂಜುಂಡಸ್ವಾಮಿ, ಗುರು ಮತ್ತಿತರರಿದ್ದರು.


ಶಿವಕುಮಾರಸ್ವಾಮಿ ನಿಧನ



ನಂಜನಗೂಡು, ಜು.17– ನಗರದ ದೇವಿರಮ್ಮನ ಬಡಾವಣೆ ನಿವಾಸಿ ಶಿವಕುಮಾರಸ್ವಾಮಿ(71) ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಹುಟ್ಟೂರು ಕೊಳ್ಳೇಗಾಲ ತಾಲೂಕಿನ ಕಜ್ಜಿಹುಂಡಿ ಗ್ರಾಮದಲ್ಲಿ ಸೋಮವಾರ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಅಭಿವೃದ್ಧಿ ಆಧಾರದಲ್ಲಿ ಮತ ನೀಡುವವರ ಸಂಖ್ಯೆ ಕಡಿಮೆ

ಮಾಜಿ ಸಿಎಂ ಸಿದ್ದರಾಮಯ್ಯ ವಿಷಾದ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ವಿಪಕ್ಷ ನಾಯಕ ಸಿದ್ದರಾಮಯ್ಯ ಉದ್ಘಾಟಿಸಿದರು.

ಮೈಸೂರು, ಜು.17(ಎಸ್‌ಬಿಡಿ)- ಅಭಿವೃದ್ಧಿ ಕೆಲಸ ಹಾಗೂ ಕಾರ್ಯಕ್ರಮಗಳ ಆಧಾರದಲ್ಲಿ ಮತದಾನ ಮಾಡುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಷಾಧ ವ್ಯಕ್ತಪಡಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿ, ಹಿಂದೆ 'ಬಿ' ಫಾರಂ ಪಡೆದರೆ ಸಾಕು ಗೆಲುವು ಖಚಿತ ಎನ್ನುವಂತಿತ್ತು. ಇಂದಿರಾಗಾಂಧಿಯವರ ಹೆಸರೇಳಿ ಕರಪತ್ರ ಹಂಚಿದರೆ ಸಾಕು ಚುನಾವಣೆಯಲ್ಲಿ ಗೆಲ್ಲಬಹುದು ಎನ್ನುವ ಕಾಲವಿತ್ತು. ಆದರೆ ಪ್ರಸ್ತುತ ಅಭಿವೃದ್ಧಿ ಕಾರ್ಯದ ಆಧಾರದಲ್ಲಿ ಮತ ಹಾಕುವುದು ಕಡಿಮೆಯಾಗಿದೆ. ಜಾತಿ ಹಾಗೂ ಹಣದ ಮೇಲೆ ಮತ ಹಾಕುವ ದುಸ್ಥಿತಿ ಬಂದಿದೆ ಎಂದು ಹೇಳಿದರು.

ಚುನಾವಣಾ ಪ್ರಣಾಳಿಕೆಯಲ್ಲಿದ್ದ 165ರಲ್ಲಿ 158 ಭರವಸೆಗಳನ್ನು ಅನುಷ್ಠಾನಗೊಳಿಸಿದ ಕೀರ್ತಿ ಕಾಂಗ್ರೆಸ್ ಸರ್ಕಾರದ್ದು. ಅಲ್ಲದೆ ಹೆಚ್ಚುವರಿ 30 ಜನಪರ ಕಾರ್ಯಕ್ರಮಗಳನ್ನು ನೀಡಲಾಯಿತು. ಎಲ್ಲಾ ಜಾತಿಯ ಬಡವರಿಗೂ ಅನ್ವಯವಾಗುವ ಅನ್ನಭಾಗ್ಯ, ಕ್ಷೀರಭಾಗ್ಯ, ಕೃಷಿಭಾಗ್ಯ, ಶೂಭಾಗ್ಯ, ಸಾಲಮನ್ನಾ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್ ಇನ್ನಿತರ ಕಾರ್ಯಕ್ರಮಗಳನ್ನು ನೀಡಿದೆವು. ಎಸ್‌ಇಪಿ/ಟಿಎಸ್‌ಪಿ ಅನುದಾನವನ್ನು ಜಾತಿಯ ಜನಸಂಖ್ಯೆ ಆಧಾರದಲ್ಲಿ ವಿಂಗಡಿಸಬೇಕೆಂಬ ಕಾನೂನು ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡವರಿಗೆ ಅನುಕೂಲ ಮಾಡಿದ್ದು ಇತಿಹಾಸ. ಇಡೀ ದೇಶದಲ್ಲಿ ಸರ್ಕಾರಿ ಕಾಮಗಾರಿ ಗುತ್ತಿಗೆಯಲ್ಲೂ ಮೀಸಲಾತಿ ನೀಡಿದ್ದು ನಾವು ಮಾತ್ರ 5 ವರ್ಷದಲ್ಲಿ ಸುಮಾರು 15 ಲಕ್ಷ ಮನೆ ನಿರ್ಮಿಸಿದ್ದೇವೆ. ಮೈಸೂರು ನಗರಕ್ಕೂ ಕೋಟ್ಯಾಂತರ ರೂ. ಅನುದಾನ ನೀಡಿದೆ. ಆದರೂ ಜನ ನನ್ನನ್ನು ಸೋಲಿಸಿದರು ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮವರು ಏಕೆ ಮಾತನಾಡಲ್ಲ?: ಮೈಸೂರು-ಬೆಂಗಳೂರು ಹೈವೆ ವಿಸ್ತರಣೆ, ಉಂಡುವಾಡಿ ಕುಡಿಯುವ ನೀರಿನ ಯೋಜನೆ ಎಲ್ಲವೂ ನಮ್ಮ ಸರ್ಕಾರದ ಅವಧಿಯಲ್ಲಿ ಅನುಮೋದನೆಯಾಗಿದ್ದು. ಆದರೆ ಸಂಸದ ಪ್ರತಾಪ್ ಸಿಂಹ ಖಾಲಿ ಡಬ್ಬ ಶಬ್ಧ ಮಾಡುವಂತೆ ಸುಳ್ಳು ಹೇಳುತ್ತಿದ್ದಾರೆ. ಆರ್ಯರು ಹೊರಗಿನಿಂದ ಬಂದವರು, ಮೀಸಲಾತಿ ವಿರೋಧಿಸಿದ್ದವರೇ ಶೇ.10ರಷ್ಟು ಮೀಸಲಾತಿ ಪಡೆದಿದ್ದಾರೆ ಎನ್ನುವುದು ಸತ್ಯ. ನಾನು ಏನೇ ಮಾತನಾಡಿದರೂ 20 ಜನ ನನ್ನ ವಿರುದ್ಧ ಮುಗಿಬೀಳುತ್ತಾರೆ. ಆದರೆ ನಮ್ಮವರು ಯಾರೂ ಮಾತನಾಡುವುದಿಲ್ಲ. ಅವರು ಸುಳ್ಳು ಹೇಳುತ್ತಾರೆ ನೀವು ಸತ್ಯವನ್ನು ಮಾತಾಡಿ, ಕಾಂಗ್ರೆಸ್ ಆಡಳಿತದಲ್ಲಾದ ಅಭಿವೃದ್ಧಿಯನ್ನು ಜನರಿಗೆ ತಿಳಿಸಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಡಾ.ತಿಮ್ಮಯ್ಯ, ಹೆಚ್.ಪಿ.ಮಂಜುನಾಥ್, ಮಾಜಿ ಶಾಸಕರಾದ ವಾಸು, ಎಂ.ಕೆ. ಸೋಮಶೇಖರ್, ಕಳಲೆ ಕೇಶವಮೂರ್ತಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಹಿಳಾ ಘಟಕದ ಲತಾ ಸಿದ್ದಶೆಟ್ಟಿ, ಕೆಪಿಸಿಸಿ ಸದಸ್ಯರಾದ ಕೆ.ಮರೀಗೌಡ, ನರಸೇಗೌಡ, ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವು, ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ, ಡಿ.ರವಿಶಂಕರ್, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜೆ.ಸತೀಶ್‌ಕುಮಾರ್, ಇಲವಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಚಾಮರಾಜ ಕ್ಷೇತ್ರದ ಮುಖಂಡ ಕೆ.ಹರೀಶ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ಮಾಜಿ ಶಾಸಕ ವಾಸು ಮೇಲೆ ಸಿದ್ದು ಗರಂ



ಮೈಸೂರು: ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸುವ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಮಾಜಿ ಶಾಸಕ ವಾಸು ವಿರುದ್ಧ ಗರಂ ಆದಂತೆ ಕಂಡುಬಂದಿತು.

ದೀಪ ಬೆಳಗಿಸುವ ವೇಳೆ ವಾಸು ಅವರು ಏನು ಹೇಳಿದ ಮಾತಿನಿಂದ ಕೆರಳಿದ ಸಿದ್ದರಾಮಯ್ಯ `I know your intention, don't convince me (ನನಗೆ ನಿಮ್ಮ ಉದ್ದೇಶ ತಿಳಿದಿದೆ, ಮನವರಿಕೆ ಪ್ರಯತ್ನ ಮಾಡಬೇಡಿ) ಎಂದು ಸಿದ್ದರಾಮಯ್ಯ ಗರಂ ಆದರು. ಈ ಅನಿರೀಕ್ಷಿತ ಘಟನೆಯಿಂದ ಸ್ವಲ್ಪ ವಿಚಲಿತರಾದ ವಾಸು ಅವರು, ತಾನಾಡಿದ ಮಾತಿನ ಬಗ್ಗೆ ಸ್ಪಷ್ಟನೆ ನೀಡಲು ಮುಂದಾದರಾದರೂ ಸಿದ್ದರಾಮಯ್ಯ ಮತ್ತಷ್ಟು ಗರಂ ಆದರು. ನಂತರ ವೇದಿಕೆ ಮುಂಭಾಗದಲ್ಲಿ ಕುಳಿತಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಬಳಿ ಬಂದ ಸಿದ್ದರಾಮಯ್ಯ, 'ಇಂತಹ ಚುಚ್ಚು ಮಾತುಗಳನ್ನು ಕೇಳಿ ಸಾಕಾಗಿದೆ' ಎಂದು ಆಕ್ರೋಶದಿಂದಲೇ ಹೇಳಿದರು.

ಈ ಬಗ್ಗೆ ಕಾರ್ಯಕ್ರಮದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಮಾಜಿ ಶಾಸಕ ವಾಸು, ದೀಪ ಬೆಳಗುವ ಸಂದರ್ಭದಲ್ಲಿ ಯಾರೋ ಯಾರನ್ನೋ ದೀಪ ಬೆಳಗಿಸಲು ಕರೆದರು, ಆಗ ನಾನು 'ಕಾಂಗ್ರೆಸ್‌ನಲ್ಲಿ ಸಾಮಾಜಿಕ ನ್ಯಾಯ ಇದೆ ಎನ್ನುವುದಕ್ಕೆ ಇದು ಸಾಕ್ಷಿ' ಎಂದು ಹೇಳಿದೆ. ನನ್ನ ಮಾತನ್ನು ಸಿದ್ದರಾಮಯ್ಯನವರು ಯಾವ ರೀತಿ ಅರ್ಥೈಸಿಕೊಂಡರೋ ಗೊತ್ತಿಲ್ಲ. ಅವರಿಗೆ ಮನವರಿಕೆ ಮಾಡಲು ಪ್ರಯತ್ನಿಸಿದರೂ ಕೂಡ ಕೇಳುವ ಸ್ಥಿತಿಯಲ್ಲಿ ಅವರಿರಲಿಲ್ಲ. ಇದರ ಬಗ್ಗೆ ಮತ್ತೆ ಕೇಳಿದರೆ ಸ್ಪಷ್ಟಪಡಿಸುತ್ತೇನೆ ಎಂದರು.

ಕೆಲಕಾಲ ಗದ್ದಲ: ಕೆಪಿಸಿಸಿ ಸದಸ್ಯ ಕೆ.ಮರೀಗೌಡ ಪ್ರಾಸ್ತಾವಿಕ ಭಾಷಣದ ವೇಳೆ 2018ರಲ್ಲಿ ಸಿದ್ದರಾಮಯ್ಯನವರನ್ನು ಸೋಲಿನ ಕಹಿ ನೆನೆದು ಮುಂದಿನ ಚುನಾವಣೆಯಲ್ಲಿ ಒಮ್ಮತದಿಂದ ಕೆಲಸ ಮಾಡಬೇಕು. ಹಿಂದಿನ ಚುನಾವಣೆಯಲ್ಲಾದ ತಪ್ಪು ಮರುಕಳಿಸುವುದಿಲ್ಲ ಮತ್ತೆ ಬನ್ನಿ ಎಂದು ಜನ ಕೇಳುತ್ತಿದ್ದಾರೆ ಎಂದರು. ಈ ವೇಳೆ ಕೆಲವರು ಚಾಮುಂಡೇಶ್ವರಿ ಕ್ಷೇತ್ರಕ್ಕೆ ಬರಬೇಕೆಂದು ಕೂಗಿದರು. ಮತ್ತೆ ಕೆಲವರು ಸೋಲಿಸಿದ್ದಾಗಿದೆ ಮತ್ತೆ ಏಕೆ ಬರಬೇಕೆಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಪರಸ್ಪರ ಮಾತಿನ ಚಕಮಕಿ ನಡೆದು ಕೆಲಕಾಲ ಗದ್ದಲ ಉಂಟಾಯಿತು.

ಈ ಬಗ್ಗೆ ಭಾಷಣದಲ್ಲಿ ಪ್ರಸ್ತಾಪಿಸಿದ ಸಿದ್ದರಾಮಯ್ಯ, ಬಸವರಾಜು ಹಾಗೂ ಸೂರಿ ಇಬ್ಬರೂ ಅಭಿಮಾನದಿಂದ ಹೇಳಿದ್ದಾರೆ. ಒಬ್ಬರು ಬನ್ನಿ ಎಂದು ಮತ್ತೊಬ್ಬರು ಬರಬೇಡಿ ಎಂದಿದ್ದಾರೆ. ಇಬ್ಬರದ್ದೂ ಸರಿ ಇದೆ ಎಂದು ಸಮಾಧಾನದ ಮಾತುಗಳನ್ನಾಡಿದರು.

ಮುಂದಿನ ಸಿಎಂ ಘೋಷಣೆ: ಸಿದ್ದರಾಮಯ್ಯನವರು ಸಭಾಂಗಣಕ್ಕೆ ಆಗಮಿಸುವ ವೇಳೆ ಅವರ ಬೆಂಬಲಿಗರು ಮುಂದಿನ ಮುಖ್ಯಮಂತ್ರಿ ಎಂದು ಘೋಷಣೆ ಕೂಗಿದರು.

ಸ್ವಾತಂತ್ರ್ಯ ಬಂದರೂ ಮಹಿಳೆಯರಿಗೆ ರಾಜಕೀಯ ಮೀಸಲಾತಿ ಸಿಕ್ಕಿಲ್ಲ

ಮಹಿಳಾ ಹೋರಾಟಗಾರ್ತಿ ದು.ಸರಸ್ವತಿ ಬೇಸರ



ಮೈಸೂರು, ಜು. 17(ಎಸ್‌ಪಿಎನ್)- ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಮಹಿಳೆಯರಿಗೆ ಪೂರ್ಣ ಪ್ರಮಾಣದ ರಾಜಕೀಯ ಮೀಸಲಾತಿ ದೊರಕಿಲ್ಲ ಎಂದು ಬೆಂಗಳೂರಿನ ಮಹಿಳಾ ಹೋರಾಟಗಾರ್ತಿ ಹಾಗೂ ಕಲಾವಿದೆ ದು.ಸರಸ್ವತಿ ಬೇಸರ ವ್ಯಕ್ತಪಡಿಸಿದರು. ಮೈಸೂರು ರಾಮಕೃಷ್ಣನಗರ(ವಾಸು ಬಡಾವಣೆ)ದ ನಟನ ರಂಗಮಂದಿರದಲ್ಲಿ ನಟನ ರಂಗಶಾಲಾ ವಿದ್ಯಾರ್ಥಿಗಳೊಂದಿಗೆ 'ಸರಸ್ವತಿ, ಸಣ್ತಿಮ್ಮಿ ಹಾಗೂ ಶರಣ್ಯ ಮತ್ತು ಹೆಣ್ಣು' ವಿಷಯ ಕುರಿತು ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕೋವಿಡ್-19 ಕಾಣಿಸಿಕೊಂಡ ದಿನದಲ್ಲಿ ತಮ್ಮ ಕುಟುಂಬಗಳ ನಿರ್ವಹಣೆಗೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾಗ ಸಾಸಿವೆ ಡಬ್ಬಗಳಲ್ಲಿ ಗೃಹಿಣಿಯರು ಕೂಡಿಟ್ಟ ಹಣ ನೆರವಿಗೆ ಬಂತು. ಇವರ್‍ಯಾರು ಆಕ್ಸ್‌ಫರ್ಡ್ ವಿವಿಯಲ್ಲಿ ಓದಿದವರಲ್ಲ. ಬದಲಾಗಿ ಸಾಮಾನ್ಯ ಶಾಲೆಯಲ್ಲಿ ಓದಿದ ಮಹಿಳೆಯರು ಎಂದ ಅವರು, ಇದು ಆರ್ಥಿಕ ನೀತಿಯ ಭಾಗವೇ ಅಲ್ಲವೆ? ಎಂದು ಪ್ರಶ್ನಿಸಿದರು.

21ನೇ ಶತಮಾನದಲ್ಲೂ ಮಹಿಳೆಯರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಸದೃಢವಾಗಿದ್ದರೂ ಅವರಿಗೆ ಶೇ.50ರಷ್ಟು ಮೀಸಲಾತಿ ರಾಜಕೀಯವಾಗಿ ಲೋಕಸಭೆ, ರಾಜಸಭೆ ಹಾಗೂ ವಿಧಾನಸಭೆ ಮತ್ತು ವಿಧಾನ ಪರಿಷತ್‌ಗಳಲ್ಲಿ ಸಿಗುತ್ತಿಲ್ಲ. ಈ ದೇಶದ ಪ್ರಜಾಪ್ರಭುತ್ವ ಯಶಸ್ವಿಯಾಗಲು ಶೇ.50 ಮಹಿಳಾ ಮತದಾರರ ಪಾತ್ರ ಪ್ರಮುಖವಾಗಿದೆ ಎಂದರು.

ಎಲ್ಲಾ ರಂಗದಲ್ಲೂ ಮಹಿಳೆಯರು ಇಂದು ಪ್ರಮುಖ ಪಾತ್ರವಹಿಸುತ್ತಿರುವುದಲ್ಲದೆ, ದೇಶದ ಉನ್ನತಿಗೆ ಮಹಿಳೆಯರ ಕೊಡುಗೆಯೂ ಇದೆ.ಇಂತಹ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ರಾಜಕೀಯದಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗವಹಿಸಲು ಮೀಸಲಾತಿ ಜಾರಿ ಅಗತ್ಯ ಎಂದು ಪ್ರೇಕ್ಷಕರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಜಾರಿ ಕುರಿತು ಸಾಕಷ್ಟು ಸಾರ್ವಜನಿಕ ಚರ್ಚೆಗಳಾಗಬೇಕಿದೆ. ಈ ನೀತಿಯಲ್ಲಿ ತಳ ಸ್ಪರ್ಶಿ ಹಾಗೂ ದೇಶಿ ಸ್ಪರ್ಶಿಯಾಗಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ವಿದೇಶಿ ಶಿಕ್ಷಣ ನೀತಿಯನ್ನು ಯಥಾವತ್ತು ನೂತನ ಶಿಕ್ಷಣ ನೀತಿ ಜಾರಿಗೊಳಿಸಬಾರದು. ಇದರ ಬಗ್ಗೆ ಶಿಕ್ಷಣ ತಜ್ಞರು ಮತ್ತು ಚಿಂತಕರೊಂದಿಗೆ ಚರ್ಚೆಗೆ ಅವಕಾಶ ನೀಡಬೇಕು ಎಂದರು.

ಇತ್ತೀಚೆಗೆ ನೌಕರಿಗೆ ಹೋಗುವ ಮಹಿಳೆಯರಿಗೆ ಕರ್ತವ್ಯ ಸ್ಥಳದಲ್ಲಿ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಅಲ್ಲದೆ, ಪೌರಕಾರ್ಮಿಕ ಮಹಿಳೆಯರಿಗೆ ಕರ್ತವ್ಯ ಸ್ಥಳದಲ್ಲಿ ಇಡೀ ದೇಶದಲ್ಲೇ ಶೌಚಾಲಯ ವ್ಯವಸ್ಥೆ ಇಲ್ಲ. ಈ ಸಮಸ್ಯೆಯಿಂದ ಅವರಿಗೆ ಸಾಕಷ್ಟು ಮುಜುಗರ ಅನುಭವಿಸುತ್ತಿರುವ ಉದಾಹರಣೆಗಳಿವೆ. ಶೌಚಾಲಯ ವ್ಯವಸ್ಥೆ ಕಲ್ಪಿಸುವಂತೆ ಪೌರಕಾರ್ಮಿಕ ಮಹಿಳೆಯರೇ ಪ್ರತಿಭಟನೆ ನಡೆಸಿದ ಪ್ರಸಂಗವನ್ನು ಪುರುಷ ಪ್ರದಾನ ಆಡಳಿತ ವ್ಯವಸ್ಥೆಯಲ್ಲಿ ಮಹಿಳೆಯರ ಸಮಸ್ಯೆ ಎಳೆಎಳೆಯಾಗಿ ಬಿಡಿಸಿದರು.

ಪೌರಕಾರ್ಮಿಕ ಮಹಿಳೆ ತನ್ನ ಮೇಲೆ ಕರ್ತವ್ಯ ಸ್ಥಳದಲ್ಲಾಗುವ ಲೈಂಗಿಕ ದೌರ್ಜನ್ಯ ಸೇರಿದಂತೆ ಇತರೆ ಸಮಸ್ಯೆಗಳಿಗೆ ತನ್ನದೇ ದಾಟಿಯಲ್ಲಿ ಸ್ವಯಂ ರಕ್ಷಣಾ ಸಾಮರ್ಥ್ಯವನ್ನು ಬೆಳೆಸಿಕೊಂಡಿದ್ದಾರೆ. ಇದನ್ನು ಇತರೆ ಮಹಿಳಾ ನೌಕರರು ಅಳವಡಿಸಿಕೊಳ್ಳಬೇಕು ಎಂದು ಹಿರಿಯ ಗಾಯಕಿ ಎಂ.ಡಿ. ಪಲ್ಲವಿ ಕೇಳಿದ ಪ್ರಶ್ನೆಗೆ ಉತ್ತರಿಸಿದರಲ್ಲದೆ, ಮಹಿಳಾ ಆಂದೋಲನಕ್ಕೆ ಕೊನೆ-ಮೊದಲಿಲ್ಲ. ಅದು ನಿರಂತರವಾಗಿ ಬೇರೆ ಬೇರೆ ಸಂದರ್ಭ, ವಿಷಯಗಳ ಮೂಲಕ ಚಾಲನೆಗೆ ಬರುತ್ತದೆ. ಹಾಗಾಗಿ ದೇಶದಲ್ಲಿ ದೊಡ್ಡಮಟ್ಟ ಮಹಿಳಾ ಹೋರಾಟ ಹಮ್ಮಿಕೊಳ್ಳದಿದ್ದರೆ, ಅದಕ್ಕೆ ಬೇಸರ ವೇಕೆ ಎಂದು ಪ್ರೇಕ್ಷಕರ ಪ್ರಶ್ನೆಗೆ ಉತ್ತರಿಸಿದರು. ಈ ವೇಳೆ ರಂಗಕರ್ಮಿ ಮಂಡ್ಯ ರಮೇಶ್, ಮಹಿಳಾ ಚಿಂತಕರಾದ ಸುಮನ, ಪ್ರೀತಿನಾಗರಾಜು, ಹಿರಿಯ ರಂಗಕರ್ಮಿ ಶರಣ್ಯ ರಾಮಪ್ರಕಾಶ್ ಸೇರಿದಂತೆ ಇತರೆ ಮಹಿಳೆಯರಿದ್ದರು. ಕಲಾವಿದೆ ಎಂ.ಡಿ.ಪಲ್ಲವಿ, ಬಿಂದುಮಾಲಿನಿ ಅಭಿನಯದ 'ಡೆಸ್ಡೆಮೋನಾ ರೂಪಕಮ್' ನಾಟಕ ಪ್ರದರ್ಶನಗೊಂಡಿತು.

ಕಾಂಕ್ರೀಟ್‌ಗಳ ವನವಾಗುತ್ತಿರುವ ಉದ್ಯಾನವನಗಳು...!

ಮೈಸೂರು, ಜು.17(ಎಂಕೆ)- ವಾಯು ವಿಹಾರಿಗಳು, ಮಕ್ಕಳ ಮನರಂಜನೆಯ ನೆಚ್ಚಿನ ತಾಣಗಳಾದ ಹಚ್ಚ ಹಸಿರಿನ ಉದ್ಯಾನವನಗಳಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗುತ್ತಿದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿರುವ ಉದ್ಯಾನವನಗಳಲ್ಲಿ ಹಸಿರೀಕರಣದ ಬದಲಿಗೆ ಕಾಂಕ್ರೀಟ್ ಕಟ್ಟಡಗಳು, ಓವರ್ ಹೆಡ್ ವಾಟರ್ ಟ್ಯಾಂಕ್‌ಗಳು ತಲೆ ಎತ್ತುವುದು ಹೆಚ್ಚಾಗುತ್ತಿದ್ದು, ವಾಯುವಿಹಾರಿಗಳಲ್ಲಿ ಆತಂಕ ಹೆಚ್ಚಿಸಿದೆ.

ಉದ್ಯಾನವನಗಳಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಯಾವ ಕಟ್ಟಡಗಳನ್ನು ಬೇಕಾದರೂ ಕಟ್ಟಬಹುದು. ಅಲ್ಲದೆ ಪ್ರಶ್ನಿಸುವವರ ಸಂಖ್ಯೆಯೂ ಕಡಿಮೆ ಎಂಬುದನ್ನರಿತಿರುವ ಮೈಸೂರು ನಗರಪಾಲಿಕೆ ಅಧಿಕಾರಿಗಳು ಮೇಲಿಂದ ಮೇಲೆ ತಪ್ಪುಗಳನ್ನು ಮಾಡುತ್ತಿದ್ದಾರೆ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಕಿಡಿಕಾರಿದ್ದಾರೆ.

ಈಗ ಮೈಸೂರಿನ ಕೆ.ಸಿ.ನಗರ(ಶ್ರೀಮತಿ ಕೆಂಪುಚೆಲುವಾಜಮ್ಮಣ್ಣಿ ನಗರ)ದ 'ವೀರಯೋಧ ಶ್ರೀ.ಎ.ಪಿ.ಪ್ರಶಾಂತ್ ಉದ್ಯಾನವನದಲ್ಲಿ ಮತ್ತೊಂದು 'ಓವರ್ ಹೆಡ್ ಟ್ಯಾಂಕ್' ನಿರ್ಮಾಣಕ್ಕೆ ಮುಂದಾಗಿರುವ ನಗರಪಾಲಿಕೆ, ಬಡಾವಣೆಗೆ ನೀರು ಪೂರೈಕೆ ಮಾಡುವ ನೆಪದಲ್ಲಿ ನಿವಾಸಿಗಳು, ವಾಯುವಿಹಾರಿಗಳಿಗೆ ಆತಂಕ ತಂದೊಡ್ಡಿದೆ.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಕೆ.ಸಿ.ನಗರದ ಉದ್ಯಾನವನ ಸುತ್ತಮುತ್ತಲಿನ ಹಲವು ಬಡಾವಣೆ ನಿವಾಸಿಗಳ ನೆಚ್ಚಿನ ವಾಯುವಿಹಾರಿ ತಾಣವಾಗಿದೆ. ಪ್ರತಿನಿತ್ಯ ಬೆಳಗ್ಗೆ-ಸಂಜೆ ನೂರಾರು ಮಂದಿ ವಾಕಿಂಗ್, ಜಾಗಿಂಗ್ ಜೊತೆಗೆ ತಮ್ಮ ಮಕ್ಕಳನ್ನು ಆಟವಾಡಿಸಲು ಬರುತ್ತಾರೆ. ಅಲ್ಲದೆ ಲಲಿತಾದ್ರಿಪುರಕ್ಕೆ ತೆರಳುವವರ ವಿಶ್ರಾಂತಿಯ ತಾಣವೂ ಆಗಿರುವ ಉದ್ಯಾನವನದಲ್ಲಿ ಆತಂಕ ಮನೆ ಮಾಡಿದೆ.

ಅಭಿವೃದ್ಧಿ ಹೆಸರಿನಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣ



"ಬಡಾವಣೆಯಲ್ಲಿ ನೀರಿನ ಸಮಸ್ಯೆ ಇದೆ. ಆದ್ದರಿಂದ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಪಾರ್ಕ್‌ನಲ್ಲಿಯೇ ಮತ್ತೊಂದು ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡುತ್ತಿದ್ದೇವೆ. ಇದರಿಂದ ನಿವಾಸಿಗಳಿಗೆ ಅನುಕೂಲವಾಗುತ್ತದೆ. ಈ ಸಂಬಂಧ ಪಾಲಿಕೆಯ ಅಧಿಕಾರಿಗಳ ಹಾಗೂ ನಿವಾಸಿಗಳ ಸಲಹೆಯನ್ನು ಪಡೆಯಲಾಗಿದೆ.

- **ಛಾಯಾದೇವಿ,** ಪಾಲಿಕೆ ಸದಸ್ಯೆ

"ಬೇರೆ ಸ್ಥಳಕ್ಕಿಂತ ನಗರ ಪಾಲಿಕೆಯ ಜಾಗದಲ್ಲಿಯೇ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಸೂಕ್ತವೆಂದು ಜಲ ಮಂಡಳಿ ಅನುಮತಿ ಮೇರೆಗೆ ಕೆ.ಸಿ.ನಗರದ ಪಾರ್ಕ್‌ನಲ್ಲಿ ಮತ್ತೊಂದು ಟ್ಯಾಂಕ್ ನಿರ್ಮಾಣ ಮಾಡಲಾಗುತ್ತಿದೆ. ನಿವಾಸಿಗಳ ಅನುಕೂಲಕ್ಕಾಗಿ ಟ್ಯಾಂಕ್ ನಿರ್ಮಾಣ ಮಾಡುತ್ತಿರುವುದು.

- **ಅಶ್ವಿನ್,** ಎಇಇ ಮೈಸೂರು ನಗರ ಪಾಲಿಕೆ

ಮತ್ತೊಂದು ಟ್ಯಾಂಕ್: ಈಗಾಗಲೇ ಉದ್ಯಾನವನದೊಳಗೆ ಓವರ್ ಹೆಡ್ ಟ್ಯಾಂಕ್ ನಿರ್ಮಾಣಗೊಂಡಿದ್ದು, ಅದರ ಪಕ್ಕದಲ್ಲಿಯೇ ಸುಮಾರು 1.5 ಕೋಟಿ ರೂ.ವೆಚ್ಚದಲ್ಲಿ ಮತ್ತೊಂದು ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಪ್ರಕ್ರಿಯೆ ನಡೆಯುತ್ತಿದೆ. ಬಡಾವಣೆಗೆ ಹೊಂದಿಕೊಂಡಂತೆ ಪ್ರತ್ಯೇಕ ಸ್ಥಳದಲ್ಲಿರಬೇಕಾಗದ ವಾಟರ್ ಟ್ಯಾಂಕ್‌ಗಳನ್ನು ಪಾರ್ಕ್‌ಗಳಲ್ಲಿ ನಿರ್ಮಾಣ ಮಾಡುವುದಕ್ಕೆ ಕಾರಣವೇನು? ಪಾಲಿಕೆಯವರಿಗೆ ಬೇರೆ ಸ್ಥಳವಿಲ್ಲವೆ ಎಂದು ಹಲವರು ಪ್ರಶ್ನಿಸಿದ್ದಾರೆ.

ವಾಯುವಿಹಾರಿಗಳ ಆರೋಗ್ಯ ವೃದ್ಧಿಸುವ ಸ್ಥಳದಲ್ಲಿ ಭಯ ಹುಟ್ಟಿಸಲಾಗುತ್ತಿದೆ. ಟ್ಯಾಂಕ್‌ಗಳು ಯಾವಾಗಲೂ ಒಂದೇ ರೀತಿ ಇರಲು ಸಾಧ್ಯವೇ. ಅನಾಹುತಗಳು ಸಂಭವಿಸಿದರೆ ನಿವಾಸಿಗಳ ಪ್ರಾಣಕ್ಕೆ ಕುತ್ತು ಬರಲಿದೆ ನೀರು ಪೂರೈಕೆಗೆ ಬೇರೆ ಬೇರೆ ಮಾರ್ಗಗಳಿದ್ದರೂ ಉದ್ಯಾನವನಗಳನ್ನೇ ಆಯ್ಕೆ ಮಾಡಿಕೊಳ್ಳುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಅಗತ್ಯವಿರಲಿಲ್ಲ: ಕೆ.ಸಿ.ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದರೂ ಬಗೆಹರಿಸುವ ಮಾರ್ಗಗಳು ಸಾಕಷ್ಟಿವೆ. ಇನ್ನೂ ಉದ್ಯಾನವನ್ನೇ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಮಾಡಲು ಸಾಧ್ಯವಾಗದಿದ್ದರೂ ಮತ್ತೊಂದು ಟ್ಯಾಂಕ್ ನಿರ್ಮಾಣಕ್ಕೆ ಮುಂದಾಗಿರುವುದು ತಪ್ಪು. ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು ಹೆಚ್ಚಾಗಿ ತಿರುಗಾಡುವ ಜಾಗದಲ್ಲಿಯೇ ಟ್ಯಾಂಕ್ ನಿರ್ಮಾಣ ಮಾಡುತ್ತಿರುವುದು ಮತ್ತಷ್ಟು ಆತಂಕ ಹೆಚ್ಚಿಸಿದೆ ಎಂದು ಸ್ಥಳಿಯ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಪಾರ್ಕುಗಳಲ್ಲಿ ಕಟ್ಟಡ ಕಟ್ಟುವಂತಿಲ್ಲ...

ಕರ್ನಾಟಕ ಉದ್ಯಾನವನಗಳ ಕಾಯ್ದೆ ಪ್ರಕಾರ ಐದು ಎಕರೆ ವಿಸ್ತೀರ್ಣವುಳ್ಳ ಪಾರ್ಕ್‌ಗಳಲ್ಲಿ ಯಾವುದೇ ರೀತಿಯ ಕಟ್ಟಡಗಳನ್ನು ನಿರ್ಮಾಣ ಮಾಡುವಂತಿಲ್ಲ. ಅನಿವಾರ್ಯವಾದರೆ ಸೆಕ್ಯೂರಿಟಿ ಗಾರ್ಡ್ ಉಳಿದುಕೊಳ್ಳುವಷ್ಟು ಅಥವಾ ಸ್ವಚ್ಛತಾ ಸಾಮಗ್ರಿಗಳ ಸಂಗ್ರಹಣೆಗಾಗಿ ಚಿಕ್ಕದಾಗಿ ರೂಂ ಮಾದರಿಯಲ್ಲಿ ಕಟ್ಟಬಹುದು ಎಂದು ಮೈಸೂರು ಗ್ರಾಹಕ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಭಾಮಿ ಶೆಣೈ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಿದ್ಧಾರ್ಥ ಬಡಾವಣೆಯ ಸಮೀಪದಗುರುರಾಜ ಬಡಾವಣೆಯಲ್ಲಿಯೂ ಇದೇ ರೀತಿ ಪಾರ್ಕ್‌ನಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಪಾಲಿಕೆಯವರು ಮುಂದಾಗಿದ್ದರು. ಆದರೆ ನಾವು ವಿರೋಧ ವ್ಯಕ್ತಪಡಿಸಿದ್ದರಿಂದ ನಿಲ್ಲಿಸಲಾಯಿತು. ಪೀಪಲ್ಸ್ ಪಾರ್ಕ್‌ನಲ್ಲಿಯೂ ಲೈಬ್ರರಿ ಬರಬಾರದಿದ್ದು, ಲೈಬ್ರರಿ ಬದಲು ಬೇರೆಯಾಗಿದ್ದರೆ ಕಷ್ಟವಾಗುತ್ತಿತ್ತು ಕೆ.ಸಿ.ಬಡಾವಣೆಯ ಪಾರ್ಕ್‌ನಲ್ಲಿ ಈಗಾಗಲೇ ಒಂದು ಓವರ್ ಹೆಡ್ ಟ್ಯಾಂಕ್ ಇದೆ. ಅದೇ ಸ್ಥಳದಲ್ಲಿ ಮತ್ತೊಂದು ಟ್ಯಾಂಕ್ ಕಟ್ಟುತ್ತಿರುವುದು ಸರಿಯಿಲ್ಲ. ನಿಯಮ ಉಲ್ಲಂಘನೆ ಎಂದು ಕೋರ್ಟ್‌ಗೆ ಹೋದರೆ ಅವರೇ ಕಷ್ಟ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪಾಲಿಕೆ ಅಧಿಕಾರಿಗಳಿಗೆ ಸಾಕಷ್ಟು ಅರ್ಥ ಮಾಡಿಸಲು ಪ್ರಯತ್ನಿಸಿದ್ದೇವೆ ಬೇರೆ ಸ್ಥಳವೇ ಇಲ್ಲದಂತೆ ಪಾರ್ಕ್‌ಗಳನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ. ನೀರಿನ ಸಮಸ್ಯೆ ಬಗೆಹರಿಸಲು ಹಲವು ಮಾರ್ಗಗಳಿದ್ದರೂ ಟ್ಯಾಂಕ್ ನಿರ್ಮಾಣಕ್ಕೆ ಪಾರ್ಕ್‌ಗಳೇ ಏಕೆ ಬೇಕು. ಮುಂದಾಗುವ ಅನಾಹುತಗಳ ಅರಿವಿಲ್ಲದೆ ಪಾಲಿಕೆ ಅಧಿಕಾರಿಗಳು ವರ್ತಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಡಿಮೆ ಬೆಲೆಗೆ ವಸ್ತುಗಳ ಮಾರಾಟ ಸೋಗಿನಲ್ಲಿ ರೈಲ್ವೆ ಉದ್ಯೋಗಿಗೆ 1.52 ಲಕ್ಷ ವಂಚನೆ



ಮೈಸೂರು, ಜು.17-ಕಡಿಮೆ ಬೆಲೆಗೆ ವಸ್ತುಗಳನ್ನು ಮಾರಾಟ ಮಾಡುವ ನೆಪದಲ್ಲಿ ರೈಲ್ವೆ ಇಲಾಖೆ ಉದ್ಯೋಗಿಗೆ ಆನ್‌ಲೈನ್‌ನಲ್ಲಿ 1.52 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ರಾಘವೇಂದ್ರನಗರ ನಿವಾಸಿ ರೈಲ್ವೆ ಇಲಾಖೆ ಉದ್ಯೋಗಿ ಎನ್.ಇ.ಗಿರೀಶ್ ಕುಮಾರ್(40) ಅವರಿಗೆ ವಾಟ್ಸಾಪ್‌ನಲ್ಲಿ ಲಿಂಕ್‌ವೊಂದು ಬಂದಿದೆ. ಅದರ ಮೇಲೆ ಕ್ಲಿಕ್ ಮಾಡಿದಾಗ ಕಡಿಮೆ ಬೆಲೆಗೆ ವಸ್ತುಗಳು ದೊರೆಯುತ್ತವೆ ಎಂಬ ಜಾಹೀರಾತು ಕಾಣಿಸಿಕೊಂಡಿದೆ. ಅದನ್ನು ನಂಬಿದ ಗಿರೀಶ್, ಕಡಿಮೆ ಬೆಲೆ ವಸ್ತುಗಳ ಖರೀದಿಗಾಗಿ ಹಂತ ಹಂತವಾಗಿ 1,52,089 ರೂ.ಗಳನ್ನು ವರ್ಗಾವಣೆ ಮಾಡಿದ್ದಾರೆ. ಆದರೆ ಅವರಿಗೆ ಯಾವುದೇ ವಸ್ತು ಬಾರದೇ ಮೋಸ ಹೋಗಿದ್ದಾರೆ. ಈ ಸಂಬಂಧ ಮೈಸೂರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್‌ನಿಂದ ಬಿದ್ದು ವೃದ್ಧ ಸಾವು

ಮೈಸೂರು, ಜು.17-ನಿಯಂತ್ರಣ ತಪ್ಪಿ ಸ್ಕೂಟರ್‌ನಿಂದ ಬಿದ್ದು ವೃದ್ಧರೊಬ್ಬರು ಮೃತಪಟ್ಟ ಘಟನೆ ಮೈಸೂರಿನ ನಂಜನಗೂಡು ರಸ್ತೆಯಲ್ಲಿ ಸಂಭವಿಸಿದೆ.

ಮೈಸೂರಿನ ಚಾಮರಾಜ ಮೊಹಲ್ಲಾ ನಿವಾಸಿ ಎಂ.ಆರ್.ನರಸಿಂಹಮೂರ್ತಿ(72) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಯಮಹಾ ಫ್ಯಾಸಿನೋ ಸ್ಕೂಟರ್ (ಕೆಎ 09 ಹೆಚ್‌ಎಂ 5684)ನಲ್ಲಿ ಪತ್ನಿ ಮಂಗಳಗೌರಿ ಅವರ ಜೊತೆ ಉತ್ತನಹಳ್ಳಿ ದೇವಸ್ಥಾನಕ್ಕೆ ಹೋಗಿ ಹಿಂತಿರುಗುತ್ತಿದ್ದರು. ಗನ್‌ಹೌಸ್ ಸರ್ಕಲ್‌ನಿಂದ ನಂಜನಗೂಡು ರಸ್ತೆಯಲ್ಲಿ ತೆರಳುತ್ತಿದ್ದಾಗ ಕಣ್ಣಿಗೆ ಧೂಳು ಬಿದ್ದ ಕಾರಣ ಬ್ರೇಕ್ ಹಾಕಿದ್ದಾರೆ. ಆ ಸಂದರ್ಭದಲ್ಲಿ ನಿಯಂತ್ರಣ ತಪ್ಪಿ ಸ್ಕೂಟರ್ ಬಿದ್ದು ತಲೆಗೆ ತೀವ್ರ ಪೆಟ್ಟಾಗಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಅವರ ಪತ್ನಿ ಮಂಗಳಗೌರಿ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ.

ಬಂದೂಕು, ಹಣ ಕಳವು

ಗೋಣಿಕೊಪ್ಪ, ಜು.17-ಮನೆಯ ಬಾಗಿಲು ಮುರಿದು ಬಂದೂಕು ಮತ್ತು ನಗದು ಕಳವು ಮಾಡಿರುವ ಘಟನೆ ಪೊನ್ನಂಪೇಟೆ ತಾಲೂಕು ಕುಟ್ಟಂದಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೈತ ಪಿ.ಬೆಳ್ಳಿಯಪ್ಪ ಅವರು ಜುಲೈ 12ರಂದು ಕಾರ್ಯನಿಮಿತ್ತ ವಿರಾಜಪೇಟೆ ಪಟ್ಟಣಕ್ಕೆ ಹೋಗಿದ್ದು, ಮನೆಗೆ ಹಿಂತಿರುಗಿದಾಗ ಮನೆಯ ಬಾಗಿಲಿನ ಗಾಜು ಒಡೆದು ಬಾಗಿಲ ಚಿಲಕ ತೆಗೆದು ಒಳ ನುಗ್ಗಿದ ಖದೀಮರು, 25 ಸಾವಿರ ರೂ. ನಗದು, 1 ಬಂದೂಕು ಹಾಗೂ 3 ಬಾಕ್ಸ್ ಕಾಡತೂಸುಗಳನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಬೆಳ್ಳಿಯಪ್ಪ ಅವರು ಜುಲೈ 15ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಗೋಣಿಕೊಪ್ಪ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

1.21 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು: ಕೆಲಸಗಾರರ ಮೇಲೆ ಶಂಕೆ

ಪೊನ್ನಂಪೇಟೆ, ಜು.17-ಮನೆಯೊಂದರಲ್ಲಿ 1.21 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಬಗ್ಗೆ ಪೊನ್ನಂಪೇಟೆಯ ಕಾವೇರಿ ನಗರದಿಂದ ವರದಿಯಾಗಿದೆ. ಅಲ್ಲಿನ ನಿವಾಸಿ ಟಿ.ವಿ.ಸುರೇಶ್ ಅವರು ವ್ಯಾಪಾರಸ್ಥರಾಗಿದ್ದು, ಪ್ರತೀ ದಿನ ಪತ್ನೀ ಸಮೇತ ವ್ಯಾಪಾರಕ್ಕಾಗಿ ಮನೆಗೆ ಬೀಗ ಹಾಕಿ ಹೋಗುತ್ತಿದ್ದರು. ಬೆಡ್‌ರೂಂನಲ್ಲಿದ್ದ ಲಾಕರ್‌ನ ಕೀಯನ್ನು ಪಕ್ಕದ ಕಬೋರ್ಡ್ ಬಳಿ ಇಡುತ್ತಿದ್ದರು. ಜುಲೈ 15ರಂದು ಗಮನಿಸಿದಾಗ ಲಾಕರ್‌ನಲ್ಲಿದ್ದ 25 ಸಾವಿರ ರೂ. ನಗದು, ಹುಂಡಿಯಲ್ಲಿದ್ದ 4 ಸಾವಿರ ರೂ., 6 ಗ್ರಾಂನ ಚಿನ್ನದ ಓಲೆ-ಜುಮುಕಿ, 2 ಗ್ರಾಂನ ಓಲೆ-ಜುಮುಕಿ, 2 ಗ್ರಾಂನ ಉಂಗುರ, 5 ಗ್ರಾಂನ ಚಿನ್ನದ ಚೈನು, ಲ್ಯಾಪ್‌ಟ್ಯಾಪ್ ಸೇರಿದಂತೆ 1.21 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳುವಾಗಿದೆ. ಅವರ ಮನೆಗೆ ಕೆಲಸಕ್ಕೆ ಬರುತ್ತಿದ್ದ ವಿನಿತಾ ಮತ್ತು ವಿಷಾ ಎಂಬುವರು ಕಳವು ಮಾಡಿರಬಹುದು ಎಂಬ ಸಂಶಯ ವ್ಯಕ್ತಪಡಿಸಿ ನೀಡಿದ್ದ ದೂರನ್ನು ದಾಖಲಿಸಿಕೊಂಡಿರುವ ಪೊನ್ನಂಪೇಟೆ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.